ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 15 ಶನಿವಾರ 2022

ಸಂಪುಟ: 43 | ಸಂಚಿಕೆ: 179 | ಪುಟಗಳು: 12

₹4

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com

ಮೈಸೂರಲ್ಲಿ ಹೆಚ್.ಆರ್.ದಸರಾ ಆರಂಭ



ಮೈಸೂರು, ಅ. 14(ಆರ್‌ಕೆ)– ಮೈಸೂರು ಹೆಚ್.ಆರ್. ಫೋರಂ, ಎಡಿನ್ ಬ್ರಿಡ್ಜ್ ಫೌಂಡೇಷನ್ ಅವರು ಕೊಲೊಟೋನ್ ಟೆಕ್ಸ್‌ಟೈಲ್ಸ್ ಮತ್ತು ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್ ಸಹಯೋಗದೊಂದಿಗೆ 'ಹೆಚ್.ಆರ್. ದಶಮಿ' ಘೋಷಣೆಯ 9 ದಿನಗಳ 'ಹೆಚ್.ಆರ್. ದಸರಾ' ಕಾರ್ಯಕ್ರಮ ಮೈಸೂರಲ್ಲಿ ಇಂದಿನಿಂದ ಆರಂಭವಾಯಿತು.

ನವೆಂಬರ್ 25ರವರೆಗೆ ವಿವಿಧ ದಿನಗಳಲ್ಲಿ ನಡೆಯುವ ಹೆಚ್.ಆರ್. ದಸರಾ ಕಾರ್ಯಕ್ರಮದ ಮೊದಲ ದಿನವಾದ ಇಂದು ಜಯನಗರ ಬಡಾವಣೆಯ ಛಾಯಾದೇವಿ ಆಶ್ರಮದ 25 ಮಕ್ಕಳಿಗೆ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಹೊಸ ಬಟ್ಟೆಗಳನ್ನು ಕೊಟ್ಟು, ಅರಮನೆ ಸೇರಿದಂತೆ ವಿವಿಧ ಪ್ರೇಕ್ಷಣೀಯ ಸ್ಥಳಗಳಿಗೆ ಕರೆದೊಯ್ದು ತೋರಿಸಲಾಯಿತು.

ನಂತರ ಇನ್‌ಫೋಸಿಸ್ ಬಳಿ ಇರುವ ಕಂಟ್ರಿ ಇನ್–ಸೂಟ್ಸ್ ಸ್ಟಾರ್ ಹೋಟೆಲ್‌ನಲ್ಲಿ ಮಧ್ಯಾಹ್ನ ಊಟ ಮಾಡಿಸಿದ ಬಳಿಕ ಸಂಜೆ ದಸರಾ ವಸ್ತುಪ್ರದರ್ಶನಕ್ಕೆ ಕರೆದೊಯ್ದು ರಾತ್ರಿ ಆಶ್ರಮಕ್ಕೆ ಕರೆದೊಯ್ದು ಬಿಡಲಾಯಿತು. ಕೊಲೊಟೋನ್ ಟೆಕ್ಸ್‌ಟೈಲ್ಸ್‌ನ ಜಿ.ಬಿ. ಪ್ರಶಾಂತ್, ಎಕ್ಸೆಲ್ ಸಾಫ್ಟ್ ಟೆಕ್ನಾಲಜೀಸ್‌ನ ಪ್ರಶಾಂತ್, ರೆಡ್ ಎಫ್‌ಎಂನ ರಾಘವ್, ಮೈಸೂರು ಹೆಚ್.ಆರ್. ಫೋರಂ, ಎಡಿನ್ ಬ್ರಿಡ್ಜ್ ಫೌಂಡೇಷನ್ ಸದಸ್ಯರು ಉಪಸ್ಥಿತರಿದ್ದರು.

ನ.12ರಂದು ಬೃಹತ್ ಲೋಕ್ ಅದಾಲತ್

ಮೈಸೂರು,ಅ.14(ಆರ್‌ಕೆಬಿ)–ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದಿಂದ ನ.12 ರಂದು ಬೃಹತ್ ಲೋಕ್ ಅದಾಲತ್ ಆಯೋಜನೆ ಮಾಡಲಾಗಿದೆ ಎಂದು ಮೈಸೂರು ಜಿಲ್ಲಾ ಸತ್ರ ನ್ಯಾಯಾಧೀಶರಾದ ಎಂ.ಎಲ್.ರಘುನಾಥ್ ತಿಳಿಸಿದರು.

ಮೈಸೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಈ ವರ್ಷದ ಕೊನೆಯ ಲೋಕ್ ಅದಾಲತ್ ಇದಾಗಿದೆ. ರಾಜಿ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥ ಮಾಡುವುದು ನಮ್ಮ ಗುರಿಯಾಗಿದೆ. ಈಗಾಗಲೇ ಅನೇಕ ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯರ್ಥ ಆಗಿವೆ. 38 ಸಾವಿರಕ್ಕೂ ಹೆಚ್ಚು ಪ್ರಕರಣಗಳು ರಾಜೀ ಆಗಿವೆ ಎಂದರು. ಮೋಟಾರು ಕಾಯ್ದೆ ಕೇಸ್‌ಗಳಲ್ಲಿ ರಾಜಿ ಸಂಧಾನದ ಮೂಲಕ ಪ್ರಕರಣಗಳು ಇತ್ಯರ್ಥವಾಗಿ ಎರಡು ಕೋಟಿಗೂ ಹೆಚ್ಚು ಹಣ ಸರ್ಕಾರಕ್ಕೆ ಸಂದಾಯವಾಗಿದೆ. ಈ ಕಾರ್ಯಕ್ಕೆ ಮೈಸೂರು ಜಿಲ್ಲಾ ವಕೀಲರ ಸಂಘವು ಸಂಪೂರ್ಣ ಸಹಕಾರ ನೀಡಿದೆ ಎಂದು ಅವರು ತಿಳಿಸಿದರು.



ಮೈಸೂರು ತಾಲೂಕು ಹೂಟಗಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶುಕ್ರವಾರ ಪ್ರೌಢಶಾಲಾ ವಿದ್ಯಾರ್ಥಿಗಳ ಜಿಲ್ಲಾ ಮಟ್ಟದ ಕಬಡ್ಡಿ ಪಂದ್ಯಾವಳಿಗೆ ಚಾಲನೆ ನೀಡಲಾಯಿತು. ಕಾರ್ಯಕ್ರಮವನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ಉಪ ನಿರ್ದೇಶಕ ನಾಗೇಂದ್ರಕುಮಾರ್ ಧ್ವಜಾರೋಹಣ ನೆರವೇರಿಸುವ ಮೂಲಕ ಉದ್ಘಾಟಿಸಿದರು. ವೇದಿಕೆಯಲ್ಲಿ ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಡಾ.ಗಣೇಶ್, ಪ್ರೌಢಶಾಲಾ ಸಹ ಶಿಕ್ಷಕ ಸಂಘದ ಉಪಾಧ್ಯಕ್ಷರಾದ ಎನ್.ಆನಂದ ಶ್ರೀಮತಿ ಪಿ.ಜಿ.ಮೀನಾಕ್ಷಿ ಹಾಗೂ ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಂಗೀತ, ತಾಲೂಕು ಹಂತದಲ್ಲಿ ಆಯ್ಕೆಯಾದ ಮೈಸೂರು ತಾಲೂಕಿನ ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ಮಕ್ಕಳು ಭಾಗವಹಿಸಿದ್ದರು.

ಟಿಪ್ಪು ಎಕ್ಸ್‌ಪ್ರೆಸ್ ಹೆಸರು ಬದಲಾವಣೆಗೆ ಆಕ್ಷೇಪ

ಮೈಸೂರು, ಅ. 14– ಟಿಪ್ಪು ಎಕ್ಸ್‌ಪ್ರೆಸ್ ಹೆಸರು ಬದಲಾವಣೆಯನ್ನು ಡಾ. ಬಿ.ಆರ್. ಅಂಬೇಡ್ಕರ್ ಜನಪರ ವೇದಿಕೆಯ ಮೈಸೂರು ಜಿಲ್ಲಾ ಸಮಿತಿ ವಿರೋಧಿಸಿದೆ.

ಈ ಸಂಬಂಧ ಮೈಸೂರು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿ, ಮುಖ್ಯ ಕಾರ್ಯದರ್ಶಿಗೆ ಮನವಿ ಸಲ್ಲಿಸಿರುವ ವೇದಿಕೆ, ಟಿಪ್ಪು ಎಕ್ಸ್‌ಪ್ರೆಸ್‌ಗೆ ಒಡೆಯರ್ ಹೆಸರು ನಾಮಕರಣ ಮಾಡಿರುವುದು ಸಂತಸದ ಸಂಗತಿ. ಕಾರಣ ಒಡೆಯರ್ ಕೊಡುಗೆ ಅಪಾರವಾದುದು. ರೈಲು ಮಾತ್ರವಲ್ಲ ರೈಲು ನಿಲ್ದಾಣಕ್ಕೂ ಅವರ ಹೆಸರಿಟ್ಟರೆ ಅದಕ್ಕೆ ಯಾರ ತಕರಾರಿಲ್ಲ. ಆದರೆ ಟಿಪ್ಪು ಹೆಸರು ಬದಲಾವಣೆ ಮಾಡಿರುವುದು ಸರಿಯಲ್ಲ ಎಂದು ವೇದಿಕೆ ಅಭಿಪ್ರಾಯಪಟ್ಟಿದೆ. ಈ ಒಂದು ನಿರ್ಧಾರ ರಾಜಕೀಯ ಪ್ರೇರಿತ. ಜನರಿಗೆ ಇದರ ಅರಿವಿದೆ. ಒಂದು ವೇಳೆ ಬುಲೆಟ್ ಟ್ರೈನ್ ಓಡಿಸಿ ಅದಕ್ಕೆ ಒಡೆಯರ್ ಹೆಸರಿಟ್ಟಿದ್ದರೆ ಸೂಕ್ತವಾಗಿರುತ್ತಿತ್ತು. ಈಗ ಕೈಗೊಂಡಿರುವ ನಿರ್ಧಾರದಿಂದಾಗಿ ಸರ್ವಜನಾಂಗದ ಶಾಂತಿಯ ತೋಟದಂತಿರುವ ರಾಜ್ಯದಲ್ಲಿ ಅಶಾಂತಿ ಹುಟ್ಟು ಹಾಕಿದಂತಾಗುತ್ತದೆ ಎಂದು ವೇದಿಕೆ ಅಭಿಪ್ರಾಯಪಟ್ಟಿದೆ.



ಮೈಸೂರು ನಗರ ಜಲದರ್ಶಿನಿ ಅತಿಥಿಗೃಹದ ಆವರಣದಲ್ಲಿನ ಚಾಮರಾಜ ಕ್ಷೇತ್ರದ ಶಾಸಕರ ಕಚೇರಿ ಬಳಿ ರಾಜವೀರ ಮದಕರಿ ನಾಯಕರ 280ನೇ ಜಯಂತಿಯನ್ನು ಆಚರಿಸಲಾಯಿತು. ಈ ವೇಳೆ ಶಾಸಕ ಎಲ್.ನಾಗೇಂದ್ರ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ ರಾಮಕೃಷ್ಣ, ನಗರಪಾಲಿಕೆ ಸದಸ್ಯ ಎಂ. ಚಿಕ್ಕವೆಂಕಟು, ಮಾಜಿ ಸದಸ್ಯ ಗುರುವಿನಾಯಕ, ವೀರನಗೆರೆ ದೇವರಾಜು, ವಿಜಿಲೆನ್ಸ್ ಕಮಿಟಿಯ ಸದಸ್ಯ ಎಂ.ಶಿವಪ್ರಕಾಶ್, ನಾಗನಾಯಕ, ಆರಾಧನಾ ಸಮಿತಿ ಸದಸ್ಯ ಜೆಸಿಬಿ ರವಿ, ಆಶ್ರಯ ಸಮಿತಿಯ ಸದಸ್ಯ ಮಂಜುನಾಥಪುರಂನ ಎಂ.ಮಹೇಶ್, ಹೋಟೆಲ್ ಹೇಮಂತ್, ಲಕ್ಷ್ಮಣ್, ಅನಿಲ್, ನಟರಾಜ್, ಗೋವಿಂದ, ಮಾದಪ್ಪ, ಎಂ.ರವಿಕುಮಾರ್, ಕಿರಣ್, ರಾ.ಸಿದ್ದರಾಮು, ಚಾಮು, ಎಂ. ಸಿ.ಕುಮಾರ್, ಗಿರೀಶ್, ಮಾರ್ಕೆಟ್ ರಮೇಶ್, ದೇವರಾಜು, ಗೋಪಾಲನಾಯಕ, ಗೋಕುಲಂ ಜಯಣ್ಣ, ದಿನೇಶ್ ಗೌಡ, ಅಶೋಕ್, ಗೋಪಾಲ, ವೀರನಗೆರೆಯ ನಕ್ಷತ್ರಗ್ರೂಪ್‌ನ ವೀರನಗೆರೆ ವಿಜಯ್ ಕುಮಾರ್ ಮತ್ತಿತರರಿದ್ದರು.

ನಿಧನ



ಯು.ಸಿ.ಮಹದೇವಪ್ಪ

ಮೈಸೂರು, ಅ.14– ಮೈಸೂರು ನಗರದ ಸಿದ್ಧಾರ್ಥನಗರದ ನಿವಾಸಿ, ಭಾರತೀಯ ಜೀವ ವಿಮಾ ನಿಗಮದ ನಿವೃತ್ತ ಅಭಿವೃದ್ಧಿ ಅಧಿಕಾರಿ ಯು.ಸಿ.ಮಹದೇವಪ್ಪ (63) ಇಂದು ತೀವ್ರ ಹೃದಯಾಘಾತದಿಂದ ನಿಧನರಾದರು. ಇವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುವರ್ಗವನ್ನು ಆಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶನಿವಾರ) ಅವರ ಸ್ವಗ್ರಾಮ ಮಂಡ್ಯ ಜಿಲ್ಲೆಯ ಉಮ್ಮಡಹಳ್ಳಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಎಂಎಂಸಿಆರ್‌ಐ ಅಧೀನ ಆಸ್ಪತ್ರೆಗಳ ಆಧುನೀಕರಣ ಕಾಮಗಾರಿ ಶೀಘ್ರ ಆರಂಭ

ಮೈಸೂರು, ಅ. 14 (ಆರ್‌ಕೆ)– ಶತಮಾನದ ಹೊಸ್ತಿಲಲ್ಲಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿ ಮತ್ತು ಆರ್‌ಐ) ಅಧೀನದಲ್ಲಿ ಬರುವ ಕೆ.ಆರ್., ಚೆಲುವಾಂಬ ಹಾಗೂ ಪಿಕೆಟಿಬಿ ಆಸ್ಪತ್ರೆ ಕಟ್ಟಡಗಳ ಆಧುನೀಕರಣ ಕಾಮಗಾರಿ ಶೀಘ್ರ ಆರಂಭವಾಗಲಿದೆ.

ಅತೀ ಹಳೆಯದಾಗಿರುವ ಈ ಆಸ್ಪತ್ರೆಗಳ ಪಾರಂಪರಿಕ ಕಟ್ಟಡಗಳು ಶಿಥಿಲಗೊಂಡಿದ್ದು, ಅವುಗಳ ಆಧುನೀಕರಣಕ್ಕೆ ಸರ್ಕಾರ ಬಜೆಟ್‌ನಲ್ಲಿ 89 ಕೋಟಿ ರೂ. ಅನುದಾನ ಮೀಸಲಿರಿಸಿದೆ. ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆ ಅನುಮೋದನೆ



ನೀಡಿದ್ದು, ಕಾಮಗಾರಿಗಳಿಗೆ ಗ್ಲೋಬಲ್ ಟೆಂಡರ್ ಕರೆಯಲು ವೈದ್ಯಕೀಯ ಶಿಕ್ಷಣ ಇಲಾಖೆಯು ಸಿದ್ಧತೆ ಮಾಡಿಕೊಂಡಿದೆ. 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಅಂಡ್ ಡೈರೆಕ್ಟರ್ ಡಾ.ಕೆ.ಆರ್.ದಾಕ್ಷಾಯಿಣಿ, 2024ಕ್ಕೆ ಪ್ರತಿಷ್ಠಿತ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶತಮಾನೋತ್ಸವ. ಈ ಹಿನ್ನೆಲೆಯಲ್ಲಿ ಅದರಡಿ ಬರುವ ಕೆ.ಆರ್.ಆಸ್ಪತ್ರೆ, ಚೆಲುವಾಂಬ ಮತ್ತು ಪಿಕೆಟಿಬಿ ಆಸ್ಪತ್ರೆಗಳನ್ನು ಪುನರುಜ್ಜೀವನ ಗೊಳಿಸಲು ಸರ್ಕಾರ 89 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ. ಶತಮಾನೋತ್ಸವದ ಹಿನ್ನೆಲೆಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ವಿದ್ಯಾರ್ಥಿ ನಿಲಯಗಳು, ಗ್ರಂಥಾಲಯ, ಆಸ್ಪತ್ರೆಗಳ ಕಟ್ಟಡಗಳ ಪುನರುಜ್ಜೀವನವನ್ನು ಸಂಪುಟ ಅನುಮೋದನೆ ನೀಡಿದೆ. ವಾರದೊಳಗೆ ಗ್ಲೋಬಲ್ ಟೆಂಡರ್ ಅಧಿಸೂಚನೆ ಹೊರಬೀಳಲಿದ್ದು, ತಿಂಗಳೊಳಗಾಗಿ ಸಿವಿಲ್ ಕಾಮಗಾರಿಗಳು ಆರಂಭವಾಗುವ ನಿರೀಕ್ಷೆ ಇದೆ ಎಂದು ಡಾ. ದಾಕ್ಷಾಯಿಣಿ ತಿಳಿಸಿದರು. ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್.ನಾಗೇಂದ್ರ ಸಹ ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸಿ ಅನುದಾನ ಮೀಸಲಿರಿಸಲು ಶ್ರಮಿಸಿದ ಫಲವಾಗಿ ಈಗ 89 ಕೋಟಿ ರೂ. ಹಣ ಬಿಡುಗಡೆಗೆ ಹಣಕಾಸು ಇಲಾಖೆ ಮುಂದಾಗಿದೆ. ವೈದ್ಯಕೀಯ ಶಿಕ್ಷಣ ಇಲಾಖೆಯೇ ಗ್ಲೋಬಲ್ ಟೆಂಡರ್ ಮಾಡಲಿದ್ದು, ಯಶಸ್ವಿ ಬಿಡ್ಡುದಾರರಿಂದ ನಾವು ಮೇಲ್ವಿಚಾರಣೆ ನಡೆಸಿ ಕಾಮಗಾರಿ ಮಾಡಿಸಿಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ಮನುಷ್ಯ ಸ್ವಾಭಿಮಾನದ ಬದುಕಿಗೆ ಬುದ್ಧ ತತ್ವ–ಸಿದ್ಧಾಂತ ಅನುಸರಿಸಬೇಕು

● ಮೈಸೂರು ವಿವಿ ಕುಲಪತಿ ಪ್ರೊ. ಜಿ.ಹೇಮಂತ್ ಕುಮಾರ್ ಅಭಿಮತ ● ಮೈಸೂರು ವಿವಿ ಡಾ.ಅಂಬೇಡ್ಕರ್ ಸಂಶೋಧನಾ ಸಂಸ್ಥೆಯಲ್ಲಿ '66ನೇ ಧಮ್ಮ ದೀಕ್ಷಾ ದಿನಾಚರಣೆ'

ಮೈಸೂರು, ಅ.14(ಎಂಟಿವೈ)– ಸ್ವಾಭಿಮಾನದಿಂದ ಬದುಕಬೇಕಾದರೆ ಬುದ್ಧನ ತತ್ವ–ಸಿದ್ಧಾಂತವನ್ನು ಅಪ್ಪಿಕೊಳ್ಳಬೇಕು. ಇವುಗಳನ್ನು ಇಂದಿನ ಯುವ ಪೀಳಿಗೆಗೆ ಅರ್ಥೈಸುವ ಅಗತ್ಯವಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ. ಹೇಮಂತ್‌ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ಸಭಾಂಗಣದಲ್ಲಿ ಶುಕ್ರವಾರ ನಡೆದ '66ನೇ ಧಮ್ಮ ದೀಕ್ಷಾ ದಿನಾಚರಣೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬುದ್ಧ ಗುರುವನ್ನು ಯಾರು ಒಪ್ಪಿಕೊಳ್ಳುತ್ತಾರೋ ಅವರು ಪರಿಶುದ್ಧರಾಗಿರುತ್ತಾರೆ. ಅವರಿಗೆ ಭಯ, ಆಂತರಿಕ ಅಪಜಯ ಇರುವುದಿಲ್ಲ. ಬುದ್ಧಗುರುವಿನ ಅನುಯಾಯಿಗಳು ಸತ್ಯವಂತರೇ ಆಗಿರುತ್ತಾರೆ. ದುರ್ಬುದ್ಧಿ ಉಳ್ಳವರು, ದುರಾಸೆ ಉಳ್ಳವರು, ಜಾತಿವಾದಿಗಳಿಗೆ ಧಮ್ಮದಲ್ಲಿ ಸ್ಥಳವಿರುವುದಿಲ್ಲ. ಆದರೆ, ಧಮ್ಮ ಸ್ವೀಕರಿಸಿದ ಮೇಲೆ ದುರ್ಬುದ್ಧಿ ಉಳ್ಳವರಿಗೆ ತಮ್ಮ ತಪ್ಪಿನ ಅರಿವಾಗುತ್ತದೆ. ಹಾಗೆಯೇ ದುರಾಸೆ ಉಳ್ಳವರು ಧಮ್ಮ ಸ್ವೀಕರಿಸಿದರೆ, ಬದುಕಿನ



ಸತ್ಯವನ್ನು ಕಂಡುಕೊಳ್ಳುತ್ತಾರೆ. ಜಾತಿವಾದಿಗಳು ಧಮ್ಮಕ್ಕೆ ಶರಣಾದರೆ, ಮನುಷ್ಯರಾಗುತ್ತಾರೆ. ಇಂದು ಈ ದೇಶಕ್ಕೆ ಬುದ್ಧನ ಮಾರ್ಗ ಅನುಕರಣೆ ಮಾಡುವ ಅಗತ್ಯವಿದೆ. ಜಗತ್ತಿಗೆ ಬುದ್ಧ ಬೇಕು, ಯುದ್ಧವಲ್ಲ ಎಂಬ ಕವಿಯ ಸಂದೇಶವನ್ನು ಇಂದು ಅಂತರರಾಷ್ಟ್ರೀಯ ನಾಯಕರು ಅರಿತುಕೊಳ್ಳುವ ಅನಿವಾರ್ಯತೆ ಇದೆ ಎಂದರು.

ಬುದ್ಧನ ಪ್ರಜ್ಞೆ ಕರುಣೆ, ನಮ್ಮ ಜೀವನದ ಭಾಗವಾಗಬೇಕು. ಬುದ್ಧನ ಕರುಣೆ ತತ್ವಗಳನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳುವುದು ಮಾತ್ರವಲ್ಲದೆ, ವಾಸಿಸುವ ಸ್ಥಳ, ಕಾರ್ಯ ನಿರ್ವಹಿಸುವ ಸ್ಥಳ, ಓಡಾಡುವ ಸ್ಥಳಗಳಲ್ಲಿ ಬಿತ್ತಬೇಕು. ಬುದ್ಧ ಗುರುವಿನ ತ್ರಿಸರಣ ತತ್ವವಾದ ಕಾಯಾ, ವಾಚಾ, ಮನಸ್ಸಾ ಸೂತ್ರವನ್ನು ಪಾಲಿಸೋಣ ಎಂಬ ಪ್ರತಿಜ್ಞೆ ಮಾಡಬೇಕು ಎಂದು ಸಲಹೆ ನೀಡಿದರು. ಸಂವಿಧಾನ ಶಿಲ್ಪಿ ಡಾ.ಅಂಬೇಡ್ಕರ್ ಅವರು ಬುದ್ಧ ಗುರುವಿನ ಬಗ್ಗೆ 'ಮನುಷ್ಯನ ಉತ್ಕೃಷ್ಟ ಮನೋಭಾವದಿಂದ ಹೊರಹೊಮ್ಮುವ ಪರಿಪೂರ್ಣ ನ್ಯಾಯವೇ ಬುದ್ಧನು ಬೋಧಿಸಿದ ಧಮ್ಮ' ಎಂದು ಹೇಳಿರುವ ಮಾತು ಅರ್ಥಪೂರ್ಣವಾಗಿದೆ. ಡಾ.ಅಂಬೇಡ್ಕರ್ ಈ ಮಾತನ್ನು ಅರಿತು ಬಾಳೋಣ ಎಂದರು. ಮೈಸೂರು ವಿಶ್ವವಿದ್ಯಾನಿಲಯವು ಈಗಾಗಲೇ ಬೈಲಕುಪ್ಪೆಯ ಸೆರಾಜೆ ಮೊನಾಸ್ಟಿಕ್ ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ಮೈಸೂರು ವಿಶ್ವವಿದ್ಯಾನಿಲಯವು ಬೌದ್ಧ ಅಧ್ಯಯನದಲ್ಲಿ ಒಂದು ವಿಶೇಷ ಸ್ಥಾನವನ್ನು ಪಡೆದುಕೊಳ್ಳಲು ಶ್ರಮಿಸುತ್ತಿದೆ. ಅರಿಯಬೇಕಾದ ವಿಷಯವೆಂದರೆ ಓದು, ಬರಹ ನಮ್ಮನ್ನು ಬೆಳೆಸುತ್ತದೆ, ಉಳಿಸುತ್ತದೆ. ಚರಿತ್ರೆಯ ನಿರ್ಮಾಣವನ್ನು ಮಾಡುತ್ತದೆ. ಬಾಬಾಸಾಹೇಬರ ಜೀವನವೇ ಇದಕ್ಕೆ ಸಾಕ್ಷಿಯಾಗಿದೆ. ಇದೇ ವೇಳೆ ತುಮಕೂರು ವಿವಿ ಸಮಾಜ ಕಾರ್ಯ ಅಧ್ಯಯನ ವಿಭಾಗದ ಪ್ರೊ.ಬಿ.ರಮೇಶ್ ಅವರು, "66 ವರ್ಷಗಳ ಧಮ್ಮದೀಕ್ಷಾ ನಡಿಗೆಯ ಪ್ರಗತಿ ಮತ್ತು ಸವಾಲುಗಳು" ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಬೈಲುಕುಪ್ಪೆ ಬಿಕ್ಕು ಲೋಬ್ ಸಂಗ್ ದೋರ್ ಜಿ ಪಾಲ್ ಜೋರ್, ಡಾ.ಎಸ್. ನರೇಂದ್ರಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಾಳೆ ಹೃದ್ರೋಗ ಅರಿವಿಗಾಗಿ ವಾಕಥಾನ್

ಮೈಸೂರು, ಅ.14(ಆರ್‌ಕೆಬಿ)– ಭಾರತೀಯ ಹೃದ್ರೋಗ ತಜ್ಞರ ಸಂಘ ಮೈಸೂರು ಶಾಖೆ ವತಿಯಿಂದ ಹೃದ್ರೋಗದ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಅ.16ರಂದು ವಿಶ್ವ ಹೃದ್ರೋಗ ದಿನಾಚರಣೆ ಪ್ರಯುಕ್ತ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಡಾ.ಜಯಕುಮಾರ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಬೆಳಗ್ಗೆ 7.30ಕ್ಕೆ ಜೆ.ಕೆ. ಮೈದಾನದಿಂದ ವಾಕಥಾನ್ ಆಯೋಜಿಸಲಾಗಿದೆ. ಈ ವೇಳೆ ನರ್ಸಿಂಗ್ ವಿದ್ಯಾರ್ಥಿಗಳು, ವೈದ್ಯರು ಹಾಗೂ ಇನ್ನಿತರ ವೈದ್ಯಕೀಯ ಸಿಬ್ಬಂದಿ ಹೃದ್ರೋಗ ಬಾರದಂತೆ ನೋಡಿಕೊಳ್ಳುವುದು ಹಾಗೂ ಸಕಾಲಿಕ ಚಿಕಿತ್ಸೆ ಕುರಿತಂತೆ ಭಿತ್ತಿಪತ್ರ ಹಿಡಿದು ಪಾಲ್ಗೊಂಡು ಸಾರ್ವಜನಿಕರ ಗಮನ ಸೆಳೆಯಲಿದ್ದಾರೆ ಎಂದರು. ನಂತರ ಜೆ.ಕೆ.ಮೈದಾನದಲ್ಲಿನ ಸಭಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಡಿಹೆಚ್‌ಓ ಕೆ.ಹೆಚ್. ಪ್ರಸಾದ್, ಎಂಎಂಸಿಆರ್‌ಐ ಡೀನ್ ಮತ್ತು ಡೈರೆಕ್ಟರ್ ಡಾ.ಕೆ.ಆರ್.ದಾಕ್ಷಾಯಿಣಿ ಇನ್ನಿತರರು ಅತಿಥಿಯಾಗಿ ಭಾಗವಹಿಸಲಿದ್ದಾರೆ. ಇದೇ ವೇಳೆ ಮೈಸೂರಿನ ಹಿರಿಯ ಹೃದ್ರೋಗ ತಜ್ಞರನ್ನು ಸನ್ಮಾನಿಸಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಡಾ. ಮಂಜಪ್ಪ, ಡಾ. ಶಶಿರೇಖಾ, ಡಾ. ಜಯಶೀಲ ಉಪಸ್ಥಿತರಿದ್ದರು.

ಪ್ರವೇಶ ಪ್ರಕ್ರಿಯೆ ನಂತರ ಉಳಿಯುವ ಬಿಇ, ಬಿ.ಟೆಕ್ ಸೀಟು ಸ್ಥಳೀಯ ಪ್ರತಿಭಾನ್ವಿತರಿಗೆ ಕಲ್ಪಿಸಿ

ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಆಗ್ರಹ

ಮೈಸೂರು, ಅ. 14– ರಾಜ್ಯದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಖಾಲಿ ಉಳಿಯುವ ಸೀಟುಗಳನ್ನು ಆಯಾ ಪ್ರದೇಶದ ಸ್ಥಳೀಯ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕಲ್ಪಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಆಗ್ರಹಿಸಿದ್ದಾರೆ.

ಪ್ರತಿ ವರ್ಷ ಪ್ರಥಮ ವರ್ಷದ ಬಿಇ, ಬಿ.ಟೆಕ್‌ಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಕೌನ್ಸಿಲಿಂಗ್ ನಡೆದು, ತದನಂತರ ಪೂರ್ಣ ಪ್ರಮಾಣದಲ್ಲಿ ಭರ್ತಿಯಾಗದೇ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟುಗಳು ಖಾಲಿ ಉಳಿಯುತ್ತವೆ.

ಈ ರೀತಿ ಖಾಲಿ ಉಳಿಯುವ ಸೀಟುಗಳನ್ನು ಖಾಸಗಿ, ಖಾಸಗಿ ಅನುದಾನಿತ ಸಂಸ್ಥೆಗಳಲ್ಲಿ ಸಂಸ್ಥೆಗಳ ಹಂತದಲ್ಲಿಯೇ ಭರ್ತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿರುವುದರಿಂದ ಸ್ಥಳೀಯ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳು ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಖಾಲಿ ಉಳಿಯುವ ಸೀಟುಗಳಿಗೆ ಪ್ರವೇಶ ಪಡೆಯಲು ಅವಕಾಶವಾಗದೆ ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ.



2016–17ನೇ ಸಾಲಿನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಕೌನ್ಸಿಲಿಂಗ್ ನಂತರ ಉಳಿಯುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸೀಟುಗಳನ್ನು ಸಂಸ್ಥೆಯ ಪ್ರಾಂಶುಪಾಲರ ಹಂತದಲ್ಲಿಯೇ ಭರ್ತಿ ಮಾಡಿಕೊಳ್ಳಲು ಅನುಮತಿ ನೀಡಿದ್ದು, ಇಲ್ಲಿಯವರೆಗೂ ಈ ರೀತಿ ಯಾವುದೇ ಅನುಮತಿ ನೀಡಿರುವುದಿಲ್ಲ. ಸ್ಥಳೀಯ ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗದಂತೆ ತಡೆಯಲು 2022–23ನೇ ಸಾಲಿನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಕೌನ್ಸಿಲಿಂಗ್ ನಂತರ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಉಳಿಯುವ ಸೀಟುಗಳನ್ನು ಸಂಸ್ಥೆಯ ಪ್ರಾಂಶುಪಾಲರ ಹಂತದಲ್ಲಿಯೇ ಭರ್ತಿ ಮಾಡಲು ಅನುಮತಿ ನೀಡಬೇಕೆಂದು ಉನ್ನತ ಶಿಕ್ಷಣ, ಐ.ಟಿ. ಅಂಡ್ ಬಿ.ಟಿ. ವಿಜ್ಞಾನ ಮತ್ತು ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ ಸಚಿವರನ್ನು ಮರಿತಿಬ್ಬೇಗೌಡ ಒತ್ತಾಯಿಸಿದ್ದಾರೆ.

ಮಡಿವಾಳ ಸಮುದಾಯ ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡದಿದ್ದರೆ ಹೋರಾಟ: ಎಚ್ಚರಿಕೆ

ಮೈಸೂರು, ಅ.14(ಆರ್‌ಕೆಬಿ)– ಎಲ್ಲ ರೀತಿಯಲ್ಲೂ ಹಿಂದುಳಿದಿರುವ ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಬೇಕೆಂಬ ಹೋರಾಟ ಹಲವಾರು ವರ್ಷಗಳಿಂದ ನಡೆದಿದೆ. ಆದರೂ ಜನಪ್ರತಿನಿಧಿಗಳಾಗಲೀ, ಸರ್ಕಾರವಾಗಲೀ ಇತ್ತ ಗಮನ ಹರಿಸಿಲ್ಲ. ಹೀಗಾಗಿ ಶೀಘ್ರದಲ್ಲೇ ಸೇರ್ಪಡೆ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡದಿದ್ದಲ್ಲಿ ಮುಂದಿನ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಮೈಸೂರು ಜಿಲ್ಲಾ ಮಡಿವಾಳರ ಪರಿಶಿಷ್ಟ ಜಾತಿ ಹೋರಾಟ ಸಮಿತಿ ಎಚ್ಚರಿಸಿದೆ.

ಹೋರಾಟ ಸಮಿತಿಯ ಸಂಸ್ಥಾಪಕ ಅಧ್ಯಕ್ಷ ಎಸ್.ಜೆ.ಪ್ರಶಾಂತ್ ಶುಕ್ರವಾರ ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೇಶದ 17 ರಾಜ್ಯ ಮತ್ತು 4 ಕೇಂದ್ರಾಡಳಿತ ಪ್ರದೇಶದಲ್ಲಿ ಮಡಿವಾಳ ಜನಾಂಗವು ಪರಿಶಿಷ್ಟ ಜಾತಿಯಲ್ಲಿದೆ. ಆದರೆ ರಾಜ್ಯದಲ್ಲಿ ಮಾತ್ರ ಮಡಿವಾಳ ಸಮಾಜವನ್ನು ಚುನಾವಣೆಗಷ್ಟೇ ಸೀಮಿತಗೊಳಿಸಿದ್ದಾರೆ. ಎಲ್ಲಾ ಪಕ್ಷದ ಸರ್ಕಾರಗಳು ನಮ್ಮ ಸಮಾಜಕ್ಕೆ ಅನ್ಯಾಯ ಮಾಡುತ್ತಲೇ ಬಂದಿವೆ ಎಂದು ದೂರಿದರು. 2010–11 ನೇ ಸಾಲಿನಿಂದಲೂ ಎಲ್ಲ ಸರ್ಕಾರಗಳಿಗೂ ಈ ಕುರಿತು ಆಯೋಗವೊಂದು ನೀಡಿರುವ ವರದಿಯನ್ನು ಕೇಂದ್ರ ಶಿಫಾರಸು ಮಾಡುವಂತೆ ಹಲವಾರು ಬಾರಿ ಮನವಿ ಮಾಡಲಾಗಿದೆ. ಆದರೂ ಯಾವುದೇ ಸರ್ಕಾರ ಇದಕ್ಕೆ ಸ್ಪಂದಿಸಿಲ್ಲ ಎಂದು ಆರೋಪಿಸಿದರು. ಸದ್ಯ 2ಎ ವರ್ಗದಲ್ಲಿ ಮಡಿವಾಳರನ್ನು ಸೇರಿಸಲಾಗಿದೆ. ಇದರಲ್ಲಿ 108 ಜಾತಿಗಳಿದ್ದು, ಇವುಗಳೊಡನೆ ಸಮುದಾಯದವರು ಸ್ಪರ್ಧಿಸುವುದಾದರೂ ಹೇಗೆ ಎಂದು ಪ್ರಶ್ನಿಸಿದರು. ಸುದ್ದಿಗೋಷ್ಠಿಯಲ್ಲಿ ಮಡಿವಾಳ ಸಮುದಾಯದ ವಿವಿಧ ಸಂಘಟನೆಗಳ ಪದಾಧಿಕಾರಿಗಳಾದ ಸ್ವಾಮಿ, ಕೆಂಪಶೆಟ್ಟರು, ಮಲ್ಲೇಶ್, ಜಯಲಕ್ಷ್ಮಿ, ವಸಂತಕುಮಾರಿ, ಮಹದೇವಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.10.2022 ಶನಿವಾರ, ಮಳೆ ನಕ್ಷತ್ರ: ಚಿತ್ತ 11.10.2022 ರಿಂದ 23.10.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠೀ, ನಕ್ಷತ್ರ : ಮೃಗಶಿರ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಭವದ ಬಯಲಿಗರು, ರಚನೆ ಮತ್ತು ಪ್ರಸ್ತುತಿ– ಡಾ.ಮೈಸೂರು ಉಮೇಶ್, 6.40 ಹಾಡು ಹೇಳಿದ ಕಥೆ, ಲೇಖನ ಶ್ರೀನಿವಾಸ್ ಪ್ರಸಾದ್,, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆ, 10.00 ಟಿ.ಎಂ. ಕೃಷ್ಣ – ಹಾಡುಗಾರಿಕೆ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಚಿನ್ನಮಾದು ಮತ್ತು ತಂಡ, 1.20 ಭಾವಗೀತೆ, 3.30 ಮಕ್ಕಳ ಮಂಟಪ–ಪ್ರತಿಭಾ ಪಲ್ಲವ–ಬಹುಮುಖ ಪ್ರತಿಭೆ ವರುಣ್ ಸಿಂಹನ್ ಪರಿಚಯ, 4.00 ನಾಟಕ–ಋಣ, ರಚನೆ– ಸಂಧ್ಯಾ ಕಾನಡೆ, ನಿರ್ದೇಶನ– ಚೆನ್ನಪ್ಪ ಬೆಂಗೇರಿ, 4.30 ನೆನಪಿನಂಗಳ–ಹಿರಿಯ ಸಾಹಿತಿ ಪ್ರೊ.ಎ.ಎನ್.ಮೂರ್ತಿರಾಯರೊಂದಿಗೆ ಪ್ರೊ.ದೇ.ಜವರೇಗೌಡ ಅವರು ನಡೆಸಿರುವ ಸಂವಾದ, 6.50 ಕೃಷಿರಂಗ 'ತೋರಣ ಹೂರಣ', ಪ್ರಸ್ತುತಿ– ಎಸ್. ಸುಬ್ರಹ್ಮಣ್ಯ, 9.00 ಕನಕ ಗಾನಾಮೃತ–ಕನಕದಾಸರ ಪದಗಳನ್ನಾಧರಿಸಿದ ಬಾನುಲಿ ಸರಣಿ ಲೇಖನ–ಡಾ. ಶ್ರೀಧರ ಹೆಗಡೆ ಭದ್ರನ್, ನಿರ್ಮಾಣ– ದಿವಾಕರ ಹೆಗಡೆ, 9.15 "ಕೇಳಿ ಕಲಿಯುವುದು ಅಂದರೆ"– ವೇಣೂಜಿ ಅವರೊಂದಿಗೆ ಸಂದರ್ಶನ, ಸಂದರ್ಶಕರು–ದಿವಾಕರ ಹೆಗಡೆ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಪಂಡಿತ್ ಬ್ರಿಜ್ ಭೂಷಣ್ ಗೋಸ್ವಾಮಿ–ದ್ರುಪದ್ / ಧಮಾರ್

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** 'ಮಧುಮೇಹ ತೊಂದರೆ' ಇರುವ ರೋಗಿಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆಯಿಂದಲೂ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಗೊಂಬೆಗಳ ಪ್ರದರ್ಶನ :** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾ ಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ :** ಆಯುರ್ವೇದ ಹೃದ್ರೋಗ ವೈದ್ಯರಿಂದ ಆರೋಗ್ಯ ತಪಾಸಣೆ, ಸ್ಥಳ: ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ, ದಟ್ಟಗಳ್ಳಿ 3ನೇ ಹಂತ, ಬೆಳಗ್ಗೆ 10 ರಿಂದ.

■ **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಬಿ.ಎನ್. ದೇಸಾಯಿ ಅವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ, ಏಕವ್ಯಕ್ತಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ, ಎರಡನೇ ಹಂತ, ಬೆಳಗ್ಗೆ 10 ಗಂಟೆಯಿಂದ.

■ **ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ :** ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮ, ಉದ್ಘಾಟನೆ : ಕರ್ನಾಟಕ ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳದ ಅಧ್ಯಕ್ಷ ಎಂ.ಎನ್. ಸಿದ್ದಲಿಂಗರಾಜು, ಅಧ್ಯಕ್ಷತೆ : ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಮುಖ್ಯ ಅತಿಥಿಗಳು : ಒಕ್ಕೂಟದ ನಿರ್ದೇಶಕರಾದ ಡಾ. ಎಂ.ಬಿ. ಮಂಜೇಗೌಡ, ಸಿದ್ದೇಗೌಡ, ಹೆಚ್.ಎಸ್. ಪ್ರಶಾಂತ್ ತಾತಾಚಾರ್, ಭೈರಪ್ಪ, ಸ್ಥಳ: ಒಕ್ಕೂಟದ ಆವರಣ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಅಲ್ಯೂಮ್ನಿ ಅಸೋಸಿಯೇಷನ್ :** ಕಾಲೇಜು ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗೆ ಪುನಶ್ಚೇತನ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತ್‌ಕುಮಾರ್, ಅಧ್ಯಕ್ಷತೆ : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಉಪಸ್ಥಿತರು : ಎಫ್‌ವಿಸಿಕೆ ಕಾರ್ಯನಿರ್ವಾಹಕ ಸಮಿತಿ ಸದಸ್ಯ ಡಾ.ಎನ್.ಎಸ್.ರಾಮೇಗೌಡ, ಸಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಶ್ರೀ ಶಿವಕುಮಾರ ಕಲಾ ಸಂಘ, ಸಾಣೇಹಳ್ಳಿ, ಕದಂಬ ರಂಗ ವೇದಿಕೆ :** ಬಸವಾದಿ ಶರಣರ ದರ್ಶನ ಭಿತ್ತಿಚಿತ್ರ ಬಿಡುಗಡೆಯೊಂದಿಗೆ ಉದ್ಘಾಟನೆ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅತಿಥಿಗಳು : ಚಲನಚಿತ್ರ ನಟ ಶಂಕರ್ ಅಶ್ವಥ್, ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಬೆಳಗ್ಗೆ 11.30ಕ್ಕೆ.

■ **ಜಿಲ್ಲಾ ನಾಯಕ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘ :** ಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ, ಅಧ್ಯಕ್ಷತೆ : ಶಾಸಕ ಎಲ್. ನಾಗೇಂದ್ರ, ಉದ್ಘಾಟನೆ : ಮೇಯರ್ ಶಿವಕುಮಾರ್, ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ : ಚಾ.ನಗರ ಬಿಜೆಪಿ ಎಸ್‌ಟಿ ಮೋರ್ಚಾ ಅಧ್ಯಕ್ಷ ಜೆ. ಜಯಸುಂದರ್, ಉಪಸ್ಥಿತರು : ಬಿಜೆಪಿ ಮುಖಂಡ ಕುಂಬ್ರಳ್ಳಿ ಸುಬ್ಬಣ್ಣ, ಸಿದ್ದರಾಜು, ಜೆ.ಗೋವಿಂದರಾಜು, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 3ಕ್ಕೆ

■ **ಶ್ರೀ ಬನ್ನಿಮಹಾಕಾಳೇಶ್ವರಿ ಮತ್ತು ಆಯರಳ್ಳಿ ಮಾಕಮ್ಮನವರ ದೇವಸ್ಥಾನ ಟ್ರಸ್ಟ್:** ಶ್ರೀ ಬನ್ನಿಮಹಾಕಾಳೇಶ್ವರಿ, ಶ್ರೀ ಆಯರಳ್ಳಿ ಮಾಕಮ್ಮ ಮತ್ತು ಶ್ರೀಮಾಲಮ್ಮ ಜಾತ್ರಾ ಮಹೋತ್ಸವ, ಮಜ್ಜನ ಪೂಜೆ, ಸ್ಥಳ: ಟ್ರಸ್ಟ್ ಆವರಣ, ಕುರುಬಾರಹಳ್ಳಿ, ಸಂಜೆ 4ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನಿಷತ್ತುಗಳ ಸಾರ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರ :** ನೃತ್ಯ ಸಪ್ತಾಹ, ಬೆಳ್ಳಿ ಹಬ್ಬದ ಸಂಭ್ರಮ–ಗುರುವಂದನಾ ಕಾರ್ಯಕ್ರಮ, ಕುಮಾರಿ ಶ್ರೇಯಾ ಸಿ.ಎಸ್. ಅವರಿಂದ ಗುರುವಂದನಾ ಕಾರ್ಯಕ್ರಮ, ಅಧ್ಯಕ್ಷತೆ : ಸಂಗೀತ ವಿದ್ವಾಂಸರಾದ ವಿದುಷಿ ಡಾ.ಆರ್.ಎನ್.ಶ್ರೀಲತಾ, ಮುಖ್ಯ ಅತಿಥಿಗಳು : ಹಿರಿಯ ತಾಳ ವಾದ್ಯ ವಿದ್ವಾಂಸ ವಿದ್ವಾನ್ ಜಿ.ಎಸ್. ರಾಮಾನುಜಂ, ಸ್ಥಳ: ವೀಣೆ ಶೇಷಣ್ಣ ಭವನ, ಗಾನಭಾರತೀ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ರಿಂದ.

■ **ಭರತಾಂಜಲಿ ನೃತ್ಯ ಶಾಲೆ :** ತ್ರಿದೃಷ್ಟಿ, ಕು. ಶಾಶ್ವರಿ ಶ್ರೀಧರ್ ಅವರಿಂದ ಭರತನಾಟ್ಯ ಕಾರ್ಯಕ್ರಮ, ಮುಖ್ಯ ಅತಿಥಿಗಳು :ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಸಂಗೀತ ವಿವಿ ಕುಲಪತಿ ನಾಗೇಶ್ ವಿ. ಬೆಟ್ಟಕೋಟೆ, ಅಂತರರಾಷ್ಟ್ರೀಯ ಭರತನಾಟ್ಯ ಕಲಾವಿದರಾದ ಡಾ. ವಸುಂಧರಾ ದೊರೆಸ್ವಾಮಿ, ಶ್ರೀಮತಿ ಸುಭದ್ರ ಕೇಶವಮೂರ್ತಿ, ಸ್ಥಳ: ರಮಾಗೋವಿಂದ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ವಿಶ್ವಜ್ಞಾನಿ ಸಾಂಸ್ಕೃತಿಕ ಕಲಾ ಟ್ರಸ್ಟ್, ಕೊಳ್ಳೇಗಾಲ :** ಸೇತು ಮಾಧವನ ಸಲ್ಲಾಪ ನಾಟಕ ಪ್ರದರ್ಶನ, ರಚನೆ : ಟಿ.ಎನ್. ನರಸಿಂಹನ್, ನಿರ್ದೇಶನ : ಅಂಕರಾಜು ಎನ್. ಕೊಳ್ಳೇಗಾಲ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 15 ಶನಿವಾರ 2022

ಸಂಪುಟ: 43 | ಸಂಚಿಕೆ: 179 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಮೈಸೂರು–ಚೆನ್ನೈ ನಡುವೆ ಪ್ರತಿಷ್ಠಿತ
ವಂದೇ ಭಾರತ್ ರೈಲು ಸಂಚಾರ

- ನವೆಂಬರ್ 10ರಂದು ಬೆಂಗಳೂರಲ್ಲಿ ಪ್ರಧಾನಿ ಮೋದಿ ಚಾಲನೆ
- ಭಾರತೀಯ ರೈಲ್ವೆಯಲ್ಲಿ ಅತ್ಯಂತ ಸುಧಾರಿತ ರೈಲು
- ಪ್ರಯಾಣಿಕರ ಸುರಕ್ಷತೆ, ಸುಖಾಸನದ ಪ್ರಯಾಣಕ್ಕೆ ಸರ್ವ ವ್ಯವಸ್ಥೆ





ಬೆಂಗಳೂರು, ಅ.14 (ಕೆಎಂಶಿ)–ಕನ್ನಡ ರಾಜ್ಯೋತ್ಸವದ ಉಡುಗೊರೆಯಾಗಿ ಕೇಂದ್ರ ಸರ್ಕಾರ ವಂದೇ ಭಾರತ್ ರೈಲು ನೀಡಿದ್ದು, ಇದು ಮೈಸೂರು–ಬೆಂಗಳೂರು–ಚೆನ್ನೈ ಮಾರ್ಗವಾಗಿ ಸಂಚರಿಸಲಿದೆ.

ನವೆಂಬರ್ 10 ರಂದು ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಈ ರೈಲಿಗೆ ಚಾಲನೆ ನೀಡಲಿದ್ದು, ಬೆಂಗಳೂರಿಂದ ಮೈಸೂರಿಗೆ ಪ್ರಯಾಣ ಕೇವಲ ಒಂದು ಗಂಟೆ, ಮೈಸೂರಿನಿಂದ ಚೆನ್ನೈಗೆ ಕೇವಲ ಮೂರು ಗಂಟೆಯಲ್ಲಿ ಪ್ರಯಾಣ ಮಾಡಬಹುದಾಗಿದೆ. ಮೈಸೂರು–ಚೆನ್ನೈ ನಡುವೆ 483 ಕಿಲೋಮೀಟರ್ ಇದ್ದು, ಪ್ರತಿ ಗಂಟೆಗೆ 180 ಕಿಲೋಮೀಟರ್ ವೇಗವಾಗಿ ಈ ರೈಲು ಸಂಚರಿಸಿ, ಮೂರು ಗಂಟೆ ಅವಧಿಯಲ್ಲಿ ನಿಗದಿತ ಅಂತರ ತಲುಪಲಿದೆ.

ಮುಂದಿನ ವರ್ಷ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಒಂದಲ್ಲ ಒಂದು ಕಾರ್ಯಕ್ರಮ ಮತ್ತು ಯೋಜನೆಗಳನ್ನು ನೀಡುತ್ತಿದೆ. ಇದರ ಅಂಗವಾಗಿಯೇ ವಂದೇ ಭಾರತ್ ರೈಲು ಸಂಚಾರವೂ ಆರಂಭಗೊಳ್ಳುತ್ತಿದೆ. ಈ ಮೂರು ನಗರಗಳ ನಡುವೆ ವಿಮಾನಕ್ಕಿಂತ ರೈಲಿನ ಮೂಲಕವೇ ಪ್ರಯಾಣಿಕರು ಮತ್ತು ಉದ್ಯಮಿಗಳು ವೇಗವಾಗಿ ಒಂದು ನಗರದಿಂದ ಮತ್ತೊಂದು ನಗರಕ್ಕೆ ಸಂಚಾರ ಮಾಡಬಹುದಾಗಿದೆ. ಪ್ರಯಾಣಿಕರು ಎರಡು ವಿಮಾನ ನಿಲ್ದಾಣಗಳನ್ನು ನಗರ ಕೇಂದ್ರದಿಂದ ಪ್ರವೇಶಿಸಿ ಹೊರಬರಲು ಐದರಿಂದ ಆರು ಗಂಟೆ ಸಮಯಾವಕಾಶವಾಗುತ್ತಿದೆ. ಆದರೆ ಇದೀಗ ಎರಡು ಮೂರು ಗಂಟೆಗಳಲ್ಲಿ ಈ ಮೂರು ಪ್ರಮುಖ ನಗರಗಳನ್ನು ಮುಟ್ಟಬಹುದಾಗಿದೆ. ದೆಹಲಿ–ಉನಾ ಸಂಪರ್ಕಿಸುವ ವಂದೇ ಭಾರತ್ ಎಕ್ಸ್‌ಪ್ರೆಸ್ ಸರಣಿಯ 4ನೇ ರೈಲಿಗೆ ಪ್ರಧಾನಿ ಮೋದಿ ಹಿಮಾಚಲ ಪ್ರದೇಶದಲ್ಲಿ ಗುರುವಾರ ಚಾಲನೆ ನೀಡಿದ್ದಾರೆ. ನಂತರ ರಾಷ್ಟ್ರದ ಐದನೇ ಸರಣಿ ರೈಲಿಗೆ ನವೆಂಬರ್ 10 ರಂದು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ▸ 9ನೇ ಪುಟಕ್ಕೆ

> “ಮೈಸೂರು–ಬೆಂಗಳೂರು–ಚೆನ್ನೈ ಮಾರ್ಗದಲ್ಲಿ 5ನೇ ವಂದೇ ಭಾರತ್ ರೈಲನ್ನು ನ.10ರಿಂದ ಪ್ರಾರಂಭಿಸಲಾಗುತ್ತಿದೆ. ಈ ರೈಲು ಸಂಚಾರದಿಂದ ಹಳೆ ಮೈಸೂರು ಭಾಗದ ಜನತೆಗೆ ತುಂಬಾ ಅನುಕೂಲವಾಗಲಿದೆ ಇಂತಹ ವಿಶ್ವದರ್ಜೆ ರೈಲು ಸೇವೆಯನ್ನು ಮೈಸೂರಿಗೆ ಕಲ್ಪಿಸಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಮೈಸೂರು ಜನತೆ ಪರವಾಗಿ ಧನ್ಯವಾದಗಳು.
> –ಪ್ರತಾಪ್ ಸಿಂಹ, ಮೈಸೂರು–ಕೊಡಗು ಸಂಸದ



ಬಳ್ಳಾರಿಯಲ್ಲಿ ಮತ್ತೆ ‘ಕೈ’ ಬಲ ಪ್ರದರ್ಶನಕ್ಕೆ ನಿರ್ಧಾರ

- ಭಾರತ್ ಜೋಡೋ ಯಾತ್ರೆ ಗಣಿ ನಾಡು ಪ್ರವೇಶ
- ಬೃಹತ್ ಸಾರ್ವಜನಿಕ ಸಭೆ ಆಯೋಜನೆ
- 2010ರಲ್ಲಿ ಸಿದ್ದರಾಮಯ್ಯ, ಬೆಂಗಳೂರು–ಬಳ್ಳಾರಿ ಪಾದಯಾತ್ರೆ ಮೂಲಕ ಅಧಿಕಾರ ‘ಕೈ’ ವಶವಾಗಿತ್ತು
- ಈಗ ಮತ್ತೊಮ್ಮೆ ಇಲ್ಲಿಂದಲೇ ಶಕ್ತಿಸೌಧ ಪ್ರವೇಶಕ್ಕೆ ಪ್ಲಾನ್



ಬೆಂಗಳೂರು, ಅ.14 (ಕೆಎಂಶಿ)–ಗಣಿನಾಡಿನಲ್ಲಿ ಮತ್ತೊಮ್ಮೆ ಶಕ್ತಿ ಪ್ರದರ್ಶನಕ್ಕೆ ಮುಂದಾಗಿರುವ ಕಾಂಗ್ರೆಸ್ ಇದರ ಮೂಲಕ ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಗೆ ರಂಗ ಪ್ರವೇಶ ಮಾಡುತ್ತಿದೆ.

ಪಕ್ಷದ ಅಧಿನಾಯಕ ರಾಹುಲ್‌ಗಾಂಧಿ ಅವರ ಭಾರತ್ ಜೋಡೋ ಯಾತ್ರೆ ಬಳ್ಳಾರಿ ಪ್ರವೇಶ ಮಾಡಿದ್ದು, ಇದರ ರಾಜಕೀಯ ಲಾಭ ಪಡೆಯಲು ಪ್ರದೇಶ ಕಾಂಗ್ರೆಸ್ ಅಲ್ಲಿನ ಮುನ್ಸಿಪಲ್ ಮೈದಾನದಲ್ಲಿ ಬೃಹತ್ ಸಮಾವೇಶ ಹಮ್ಮಿಕೊಂಡಿದೆ.

ಸಮಾವೇಶದಲ್ಲಿ ರಾಹುಲ್‌ಗಾಂಧಿ ರಾಜ್ಯ ಬಿಜೆಪಿ ಸರ್ಕಾರದ ಹಗರಣಗಳ ಬಿಚ್ಚಿಡುವ ಮೂಲಕ ಮತದಾರರಿಗೆ ಸಂದೇಶ ನೀಡಿ, ವಿಧಾನಸಭಾ ಚುನಾವಣೆಗೆ ಚಾಲನೆ ನೀಡಲಿದ್ದಾರೆ. ಸಮಾವೇಶದಲ್ಲಿ ರಾಹುಲ್‌ಗಾಂಧಿ ಅಲ್ಲದೆ, ರಾಜಸ್ಥಾನ ಮುಖ್ಯಮಂತ್ರಿ ಗೆಹ್ಲೋಟ್ ಹಾಗೂ ಛತ್ತೀಸ್‌ಗಢ ಮುಖ್ಯಮಂತ್ರಿ ಭೂಪೇಸ್ ಭಗೇಲ್ ಅಲ್ಲದೆ 18 ರಾಜ್ಯಗಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು, ರಾಷ್ಟ್ರೀಯ ಕಾಂಗ್ರೆಸ್‌ನ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಬಳ್ಳಾರಿ ಸಾರ್ವಜನಿಕ ಸಭೆಯನ್ನು ಯಶಸ್ವಿಗೊಳಿಸಲು ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕಳೆದ ಒಂದು ವಾರದಿಂದ ಪೂರ್ವ ಸಿದ್ಧತೆ ನಡೆಸಿದ್ದಾರೆ. ಸಿದ್ದರಾಮಯ್ಯ ಯಾತ್ರೆ ಬಿಟ್ಟು ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಂಚರಿಸಿ, ಕಾರ್ಯಕರ್ತರನ್ನು ಮತ್ತು ಮುಖಂಡರನ್ನು ಸಮಾವೇಶಕ್ಕೆ ಕರೆತರಲು ನಾಲ್ಕು ದಿನ ಪ್ರವಾಸ ಮಾಡಿದ್ದರು. ಜುಲೈ 2010ರಲ್ಲಿ ಅಂದು ಗಣಿಧಣಿಗಳ ವಿರುದ್ಧ ಬೆಂಗಳೂರಿನಿಂದ ▸ 9ನೇ ಪುಟಕ್ಕೆ

ಮೊದಲ ಬಾರಿಗೆ ಬೆಂಗಳೂರಿಗೆ ಬಂದಿಳಿದ ವಿಶ್ವದ
ಅತೀ ದೊಡ್ಡ ವಾಣಿಜ್ಯ ವಿಮಾನ ‘Emirates EK 562’



ಬೆಂಗಳೂರು, ಅ.14– ಇದೇ ಮೊದಲ ಬಾರಿಗೆ ವಿಶ್ವದ ಅತಿ ದೊಡ್ಡ ವಾಣಿಜ್ಯ ವಿಮಾನ ಸೂಪರ್ ಜಂಬೋ ಏರ್ ಬಸ್ ಶುಕ್ರವಾರ ಬೆಂಗಳೂರಿಗೆ ಬಂದಿಳಿದಿದೆ.

ಎಮಿರೇಟ್ಸ್ ಸಂಸ್ಥೆಯ ಇಎ 562 ಸಂಖ್ಯೆ ಸೂಪರ್ ಜಂಬೋ ಏರ್ ಬಸ್ ಶುಕ್ರವಾರ ಮಧ್ಯಾಹ್ನ 3.30ಕ್ಕೆ ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯಿತು. ಎಮಿರೈಟ್ಸ್ ಏರ್‌ಲೈನ್ಸ್‌ನ ಈ ಬೃಹತ್ ವಿಮಾನವೂ ಡಬಲ್ ಡೆಕ್ಕರ್ ವಿಮಾನವಾಗಿದ್ದು, ಬೆಳಗ್ಗೆ 10 ಗಂಟೆಗೆ ದುಬೈನಿಂದ ಹೊರಟು, ಮಧ್ಯಾಹ್ನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದು ತಲುಪಿದೆ. ಪುನಃ ಮತ್ತೆ ವಿಮಾನವೂ ಬೆಂಗಳೂರಿನಿಂದ ಸಂಜೆ 6.40ಕ್ಕೆ ಹೊರಟು ರಾತ್ರಿ 9ಕ್ಕೆ ದುಬೈ ತಲುಪಿತು. ಈ ಹಿಂದೆಯೇ ಎಮಿರೇಟ್ಸ್ ಏರ್‌ಲೈನ್ಸ್ ಘೋಷಿಸಿದಂತೆ, ▸ 6ನೇ ಪುಟಕ್ಕೆ



ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ನಿಲ್ದಾಣಕ್ಕೆ ಬಂದಿಳಿದ ವಿಶ್ವದ ಅತೀದೊಡ್ಡ ವಾಣಿಜ್ಯ ವಿಮಾನವನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ವೀಕ್ಷಿಸಿದರು.

ಇನ್ನು ನಾಲ್ವರು ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಆರೋಪ

ಮುರುಘಾ ಶರಣರ ವಿರುದ್ಧ ಮೈಸೂರು ನಜರ್‌ಬಾದ್ ಠಾಣೆಯಲ್ಲಿ ಮತ್ತೊಂದು ಪೋಕ್ಸೋ ಪ್ರಕರಣ ದಾಖಲು

- ಇವರೊಂದಿಗೆ ಹಾಸ್ಟೆಲ್ ವಾರ್ಡನ್ ಸೇರಿ 7 ಜನರ ವಿರುದ್ಧ ಪ್ರಕರಣ
- ಚಿತ್ರದುರ್ಗ ಗ್ರಾಮಾಂತರ ಠಾಣೆಗೆ ಕೇಸ್ ವರ್ಗಾವಣೆ
- ಒಡನಾಡಿ ನೆರವಿಂದ ಕಾನೂನು ಮೊರೆ ಹೋದ ಬಾಲಕಿಯರ ಪೋಷಕರು



ಮೈಸೂರು, ಅ.14(ಆರ್‌ಕೆ)–ಇಬ್ಬರು ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ವೆಸಗಿದ ಆರೋಪದ ಮೇರೆಗೆ ಪೋಕ್ಸೋ ಕಾಯಿದೆಯಡಿ ಬಂಧಿತರಾಗಿ ಜೈಲು ಸೇರಿರುವ ಚಿತ್ರದುರ್ಗದ ಮುರುಘಾ ಮಠದ ಡಾ. ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಮತ್ತೆ ನಾಲ್ವರು ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಆರೋಪದ ಮೇರೆಗೆ ಮೈಸೂರಿನ ನಜರ್‌ಬಾದ್ ಠಾಣೆಯಲ್ಲಿ ಗುರುವಾರ ರಾತ್ರಿ 11.45ರಲ್ಲಿ ಮತ್ತೊಂದು ಪೋಕ್ಸೋ ಪ್ರಕರಣ ದಾಖಲಾಗಿದ್ದು, ಈ ಪ್ರಕರಣವನ್ನು ಇಂದು ಬೆಳಗ್ಗೆ ಚಿತ್ರದುರ್ಗ ಗ್ರಾಮಾಂತರ ಠಾಣೆಗೆ ವರ್ಗಾಯಿಸಲಾಗಿದೆ.

ಕೌಟುಂಬಿಕ ಕಲಹದಿಂದಾಗಿ ಪತಿಯನ್ನು ತೊರೆದು, ಮಠದ ದಾಸೋಹ ಭವನದಲ್ಲಿ ಅಡುಗೆ ಸಹಾಯಕಳಾಗಿ ಕೆಲಸ ಮಾಡುತ್ತಿದ್ದ ಮಹಿಳೆಯು ತನ್ನ ಇಬ್ಬರು ಪುತ್ರಿಯರು ಹಾಗೂ ಮತ್ತಿಬ್ಬರು ಅಪ್ರಾಪ್ತ ಬಾಲಕಿಯರ ಮೇಲೆ ಮುರುಘಾ ಶ್ರೀಗಳು ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ತನ್ನ ದೂರಿನಲ್ಲಿ ತಿಳಿಸಿದ್ದು, ಚಿತ್ರದುರ್ಗದ ಅಕ್ಕಮಹಾದೇವಿ ಹಾಸ್ಟೆಲ್‌ನ ವಾರ್ಡನ್ ರಶ್ಮಿ, ಮುರುಘಾ ಮಠದ ಮರಿಸ್ವಾಮಿಗಳಾದ ಬಸವಾದಿತ್ಯ, ಪರಮಶಿವಯ್ಯ, ಗಂಗಾಧರಯ್ಯ, ಮುರುಘಾ ಶ್ರೀಗಳ ಸಹಾಯಕ ಮಹಾಲಿಂಗ, ▸ 9ನೇ ಪುಟಕ್ಕೆ

ಕೆ.ಆರ್.ಪೇಟೆ ತಾಲೂಕು ಅಂಬಿಗರಹಳ್ಳಿ ಬಳಿಯ ತ್ರಿವೇಣಿ ಸಂಗಮದಲ್ಲಿ
ಮಹಾಕುಂಭಮೇಳಕ್ಕೆ ಅದ್ದೂರಿ ಚಾಲನೆ

ನೀರು ಅತ್ಯಮೂಲ್ಯ; ಪೂಜಿಸಿ, ಸಂರಕ್ಷಿಸಿ: ಡಾ.ವೀರೇಂದ್ರ ಹೆಗ್ಗಡೆ ಕರೆ

ಎಂ.ಕೆ.ಮೋಹನ್‌ರಾಜ್


ಕೆ.ಆರ್.ಪೇಟೆ,ಅ.14– ನೀರು ನಮ್ಮ ಜೀವನಾಡಿಯಾಗಿದ್ದು, ಇದನ್ನು ಪೂಜಿಸಿ, ಸಂರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ರಾಜ್ಯಸಭಾ ಸದಸ್ಯರೂ ಆದ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವಿರೇಂದ್ರ ಹೆಗ್ಗಡೆ ಸಲಹೆ ನೀಡಿದ್ದಾರೆ.

ಶುಕ್ರವಾರ ಜಿಲ್ಲಾಡಳಿತದ ವತಿಯಿಂದ ಕೆ.ಆರ್.ಪೇಟೆ ತಾಲೂಕು ಅಂಬಿಗರಹಳ್ಳಿ ಬಳಿಯ ತ್ರಿವೇಣಿ ಸಂಗಮದಲ್ಲಿ ಆಯೋಜಿಸಲಾಗಿದ್ದ ಮಹಾ ಕುಂಭಮೇಳವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬಹಳಷ್ಟು ವಸ್ತುಗಳು ನಮ್ಮ ಜೀವನದಲ್ಲಿ ಸಹಕಾರಿಯಾಗಿರುತ್ತವೆ. ಆಯುಧ ಪೂಜೆಯಲ್ಲಿ ನಾವು ಬಳಸುವಂತಹ ಆಯುಧಗಳು ಹಾಗೂ ವಸ್ತುಗಳಿಗೆ ಕೃತಜ್ಞತೆ ಸಲ್ಲಿಸುತ್ತೇವೆ ಎಂದರು. ನೀರು ಕೃಷಿ, ಕೈಗಾರಿಕೆ ಮಾತ್ರವಲ್ಲ, ನಿತ್ಯದ ಕೆಲಸಕ್ಕೆ ಅನಿವಾರ್ಯ. ಅನಾವೃಷ್ಟಿಯನ್ನು ಅನುಭವಿಸಿದ ಸಂದರ್ಭದಲ್ಲಿ ಪ್ರತಿ ಹನಿ ನೀರಿನ ಬೆಲೆ ತಿಳಿದಿದೆ. ಪ್ರತಿ ದಿನ ನಲ್ಲಿಯಲ್ಲಿ ಸರಬರಾಜು ಆಗುತ್ತಿದ್ದ ನೀರು ಈಗ ನಿಗದಿತ ಸಮಯಕ್ಕೆ ಸೀಮಿತವಾಗುತ್ತಿದೆ. ಕೆ.ಆರ್.ಪೇಟೆಯಲ್ಲಿ ಕಾವೇರಿ, ಲಕ್ಷ್ಮಣ ತೀರ್ಥ ಹಾಗೂ ಹೇಮಾವತಿ ನದಿಗಳು ಇಲ್ಲಿ ಸಂಗಮವಾಗಿವೆ. ಇಲ್ಲಿ ನೀರನ್ನು ಪೂಜಿಸಿ, ಅರಾಧಿಸಲು ಕುಂಭ ಮೇಳ ಹಮ್ಮಿಕೊಳ್ಳಲಾಗಿದೆ. ನೀವೂ ಪುಣ್ಯ ಸ್ನಾನ ಮಾಡಿ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರೇಷ್ಮೆ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿ, ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ ಮೂರು ನದಿಗಳು ಸಮಾಗಮವಾಗುವ ಈ ತ್ರಿವೇಣಿ ಸಂಗಮದಲ್ಲಿ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಮಹಾ ಕುಂಭಮೇಳ ಆಚರಣೆ ಮಾಡುತ್ತಿದ್ದೇವೆ. ಮಂಡ್ಯ, ಮೈಸೂರು, ಚಾಮರಾಜನಗರ, ಬೆಂಗಳೂರು ಹಾಗೂ ಇನ್ನಿತರ ಜಿಲ್ಲೆಗಳಿಂದ ಭಕ್ತಾದಿಗಳು ಮಹಾ ಕುಂಭ ಮೇಳದಲ್ಲಿ ಪಾಲ್ಗೊಂಡು ಶ್ರೀ ಮಲೈ ಮಹದೇಶ್ವರ ಸ್ವಾಮಿಗೆ ಪೂಜೆಯನ್ನು ಸಲ್ಲಿಸಿ ಪುಣ್ಯ ಸ್ನಾನ ಮಾಡಿ, ಅದರ ಫಲವನ್ನು ಪಡೆದುಕೊಳ್ಳಿ ಎಂದು ಹೇಳಿದರು. ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ಮುತುವರ್ಜಿಯಿಂದ ದೇಶದಲ್ಲಿ ಧಾರ್ಮಿಕ ಕ್ಷೇತ್ರಗಳನ್ನು ಪುನರುಜ್ಜೀವನಗೊಳಿಸುತ್ತಿರುವಂತೆ ಕರ್ನಾಟಕ ರಾಜ್ಯದಲ್ಲೂ ಧಾರ್ಮಿಕ ಕಾರಿಡಾರ್‌ಗಳ ಅಭಿವೃದ್ಧಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಒಲವು ತೋರಿಸಿದ್ದಾರೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿರುವ ಅವಕಾಶಗಳ ಬಗ್ಗೆ ವರದಿ ನೀಡುವಂತೆ ಮುಜರಾಯಿ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಕೆ.ಆರ್.ಪೇಟೆಯಲ್ಲಿ ದಕ್ಷಿಣ ಭಾರತದ ಮಹಾಕುಂಭ ಮೇಳವನ್ನು ಅದ್ದೂರಿಯಾಗಿ ಆಯೋಜಿಸಲಾಗಿದೆ. ಮಲೆ ಮಹದೇಶ್ವರರು ಶ್ರೀಶೈಲದಿಂದ ಬಂದಾಗ ಪಾದಸ್ಪರ್ಶ ಮಾಡಿದ್ದ ಪವಿತ್ರ ಸ್ಥಳದಲ್ಲಿ ಇಂತಹ ಕಾರ್ಯಕ್ರಮ ಆಯೋಜಿಸಿರುವುದು ಬಹಳ ವಿಶೇಷ. ಪೂಜ್ಯರ ನೇತೃತ್ವದಲ್ಲಿ ನಡೆಯುತ್ತಿರುವ ಇಂತಹ ಕಾರ್ಯಕ್ರಮಗಳ ಮೂಲಕ ನಮ್ಮ ಮೂಲ ಧಾರ್ಮಿಕ ಸಂಸ್ಕೃತಿಯನ್ನು ಜನ ಮಾನಸದಲ್ಲಿ ಬಿತ್ತಿ ಬೆಳೆಸುವ ಕಾರ್ಯ ನಡೆಸಲಾಗುತ್ತಿದೆ. ಸಂಸ್ಕೃತಿಯನ್ನು ಉಳಿಸುವ, ಬೆಳೆಸುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ಹಾಗೂ ನಮ್ಮ ಸರಕಾರವೂ ಚಿಂತನೆ ನಡೆಸಿದ್ದು, ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದು ಹೇಳಿದರು.

2014ರಲ್ಲಿ ನರೇಂದ್ರ ಮೋದಿ ಅವರು, ಭಾರತದ ಪ್ರಧಾನಿ ಸ್ಥಾನ ವಹಿಸಿಕೊಂಡಾಗಿನಿಂದಲೂ ಹಲವಾರು ಹಿಂದೂ ದೇವಾಲಯಗಳ ಗತ ವೈಭವ ಮರಳುವಂತೆ ಕ್ರಮವಹಿಸಿದ್ದಾರೆ. ಪ್ರಖ್ಯಾತ ದೇವಸ್ಥಾನಗಳ ▸ 6ನೇ ಪುಟಕ್ಕೆ



ಮಹಾ ಕುಂಭಮೇಳದಲ್ಲಿ ಇಂದು ಗಣಪತಿ, ನವಗ್ರಹ, ಮೃತ್ಯುಂಜಯ ಹೋಮ

ಕೆ.ಆರ್.ಪೇಟೆ,ಅ.14– ಅ.15ರಂದು ಬೆಳಗ್ಗೆ 6 ರಿಂದ 9 ಗಂಟೆವರೆಗೆ ಕಳಸ ಪೂಜೆ, ಗಣಪತಿ, ನವಗ್ರಹ, ಮೃತ್ಯುಂಜಯ ಮತ್ತು ಸಹಸ್ರ, ಮೋದಕ ಹೋಮ ನಡೆಯಲಿದೆ. ಬೆಳಗ್ಗೆ 9.30 ರಿಂದ 11:30 ಗಂಟೆವರೆಗೆ ಎಂ.ಎನ್.ಪಿ ರತ್ನಂ ಮತ್ತು ತಂಡದವರಿಂದ ಸಾಕ್ಸೋಫೋನ್ ಕಾರ್ಯಕ್ರಮ, ರವಿ ಶಿವಕುಮಾರ್ ಮತ್ತು ತಂಡ ಗಂಧರ್ವ ಮ್ಯೂಸಿಕ್ ಅಕಾಡೆಮಿ, ಕೆ.ಆರ್ ಪೇಟೆ ರವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಜರುಗಲಿದೆ. ಬೆಳಗ್ಗೆ 11:30 ರಿಂದ 1:30ರವರೆಗೆ ಧಾರ್ಮಿಕ ಸಮ್ಮೇಳನ, ಮಧ್ಯಾಹ್ನ 2:30 ರಿಂದ 5 ಗಂಟೆಯವರೆಗೆ ಕಿಕ್ಕೇರಿ ಕೃಷ್ಣಮೂರ್ತಿ ಮತ್ತು ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ ನಡೆಯಲಿದೆ. ಸಂಜೆ 4 ರಿಂದ 5 ಗಂಟೆಯವರೆಗೆ ಶ್ರೀ ಮಹದೇಶ್ವರ, ಶ್ರೀ ಸಂಗಮೇಶ್ವರ, ಶ್ರೀ ಸ್ವತಂತ್ರ ಸಿದ್ಧಲಿಂಗೇಶ್ವರರಿಗೆ ಏಕಾದಶ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ ಮತ್ತು ಮಂಗಳಾರತಿ ಕಾರ್ಯಕ್ರಮ ನಡೆಯಲಿದೆ. ಸಂಜೆ 5 ರಿಂದ 6:30 ಗಂಟೆಯವರೆಗೆ ಶ್ರೀ ಮಲೆ ಮಹದೇಶ್ವರ ಜೀವನ ಚರಿತ್ರೆ ಕುರಿತು ನಾಟಕ ಪ್ರದರ್ಶನ, ಸಂಜೆ 6:30 ರಿಂದ 7 ಗಂಟೆವರೆಗೆ ವಾರಣಾಸಿಯ ಕಾಶಿಯ ಮಾದರಿಯಲ್ಲಿ ಕಾವೇರಿ ನದಿಯ ತ್ರಿವೇಣಿ ಸಂಗಮದಲ್ಲಿ ವಿಶೇಷ ಗಂಗಾರತಿ, ಸಂಜೆ 7 ರಿಂದ 7.30 ಗಂಟೆವರೆಗೆ ವಿಶೇಷ ಲೇಸರ್ ಶೋ, ಸಂಜೆ 7 ರಿಂದ 9–30 ▸ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮಾವ : ಏನೂ ಅಳಿಯಂದ್ರೆ ಗಿಳಿ ಪಂಜರ ಏತಕ್ಕೆ?
ಅಳಿಯ : ಮಗಳನ್ನು ಗಿಳಿ ಸಾಕಿದ ಹಾಗೆ ಸಾಕಿದ್ದೇವೆ. ಹುಷಾರಾಗಿ ನೋಡಿಕೊಳ್ಳಿ ಅಂದಿದ್ರಲ್ಲ ಮಾವ?

ಮೈಸೂರು ಮಿತ್ರ
ಶನಿವಾರ, 15 ಅಕ್ಟೋಬರ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........
ಒಳ್ಳೆಯ ಕೆಲಸವನ್ನು ಮಾಡುವವನು ಯಾವತ್ತೂ ದುರ್ಗತಿಯನ್ನು ಹೊಂದುವುದಿಲ್ಲ – ಭಗವದ್ಗೀತೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು
{ ಕರೆದು ಹೋಳಿಗೆ ಕೊಟ್ಟರೆ ಬೆಲ್ಲ ಸಾಲದು ಎಂದನಂತೆ

ನಿಮ್ಮ ಪತ್ರಗಳು

ಕಾಮುಕ ಶಿಕ್ಷಕನಿಗೆ ತಕ್ಕ ಶಿಕ್ಷೆಯಾಗಲಿ!

ಮಾನ್ಯರೆ,

ಮಂಡ್ಯ ಜಿಲ್ಲೆ ಮಳವಳ್ಳಿಯಲ್ಲಿ ಮನೆ ಪಾಠಕ್ಕೆಂದು ತೆರಳಿದ್ದ ಬಾಲಕಿಯೊಬ್ಬಳನ್ನು ಶಿಕ್ಷಕನೊಬ್ಬ ಅತ್ಯಾಚಾರವೆಸಗಿ ಕೊಲೆ ಮಾಡಿದ್ದು, ಖಂಡನೀಯವಾಗಿದೆ. ಶಿಕ್ಷಕನೆಂದರೆ ಸದ್ವಿದ್ಯೆ ಕಲಿಸಿ, ಸನ್ನಡತೆಯ ತೋರುವಾತ. ಇಂತಹ ಗುರುವೇ ಈ ರೀತಿಯ ನೀಚ ಕೃತ್ಯದಲ್ಲಿ ಭಾಗಿಯಾದರೆ ಶಿಕ್ಷಕ ವೃತ್ತಿಗೆ ಅರ್ಥವೇನಿದೆ?

ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆ ಮಾಡಿ ತಿಳಿವಳಿಕೆ ಹೇಳಬೇಕಾದ ಶಿಕ್ಷಕರೇ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರವೆಸಗಿ ಕೊಲೆಯಂಥ ಕ್ರೂರ ಕೃತ್ಯದಲ್ಲಿ ಭಾಗಿಯಾಗಿರುವುದು ನಾಚಿಕೆಗೇಡಿತನ ಸಂಗತಿ. ಶಿಕ್ಷಕರನ್ನು ನಂಬಿ ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿದ್ದಾರೆ. ಯಾರೋ ಒಬ್ಬ ಮತಿಗೇಡಿ ಶಿಕ್ಷಕ ಮಾಡಿದ ತಪ್ಪಿನಿಂದಾಗಿ ಇಡೀ ಸಮಾಜ, ಶಿಕ್ಷಕ ವಲಯವನ್ನು ಕೆಟ್ಟ ದೃಷ್ಟಿಯಿಂದ ನೋಡುವಂತಾಗಿದೆ. ತಪ್ಪು ಧೃಡವಾದರೆ ಅಂತಹ ಶಿಕ್ಷಕರನ್ನು ಸೇವೆಯಿಂದಲೇ ವಜಾ ಮಾಡಬೇಕು. ಈ ರೀತಿ ಮಾಡುವುದರಿಂದ ಕೆಟ್ಟ ಶಿಕ್ಷಕರಿಗೆ ತಕ್ಕ ಪಾಠ ಕಲಿಸಿದಂತಾಗುತ್ತದೆ ಹಾಗೂ ಇನ್ನು ಮುಂದೆ ಈ ರೀತಿಯ ಘಟನೆಗಳು ಮರುಕಳಿಸದಂತೆ ತಡೆಯಲು ನೆರವಾಗುತ್ತದೆ. ಈ ನಿಟ್ಟಿನಲ್ಲಿ ಅನ್ಯಾಯಕ್ಕೆ ಒಳಗಾದ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡಲು ಮುಂದಾಗಬೇಕಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಮಂಕಿಪಾಕ್ಸ್ ಸೋಂಕಿಗೆ ಮುನ್ನೆಚ್ಚರಿಕೆ ಅಗತ್ಯ

ಮಾನ್ಯರೆ,

ಕೋವಿಡ್ 19 ಸೋಂಕಿನ ಚೇತರಿಕೆಯಿಂದ ಜನ ಸಾಮಾನ್ಯರು ಹೊರಬರುತ್ತಿರುವ ಸಂದರ್ಭದಲ್ಲಿ ದೆಹಲಿ ಹಾಗೂ ಕೇರಳದಲ್ಲಿ ವಿದೇಶಕ್ಕೆ ಹೋಗದ ವ್ಯಕ್ತಿಗೂ ಈ ಮಂಕಿಪಾಕ್ಸ್ ಕಾಣಿಸಿಕೊಂಡು ಜನರನ್ನು ಬೆಚ್ಚಿ ಬೀಳಿಸಿತ್ತು. ನಾಲ್ಕು ತಿಂಗಳ ನಂತರ ಮೈಸೂರಿನಲ್ಲಿ ಈ ಪ್ರಕರಣ ವರದಿಯಾಗಿರುವುದು ಮತ್ತೊಮ್ಮೆ ಆತಂಕ ಸೃಷ್ಟಿಸಿದೆ.

ಬೇರೆ ರಾಜ್ಯಗಳಿಂದ ಬರುವ ಪ್ರಯಾಣಿಕರನ್ನು ತಪಾಸಣೆ ನಡೆಸಿ ಒಳ ಬಿಡಲಿ ಎಂದು ಸರ್ಕಾರ ಆದೇಶಿಸಿದೆ. ರಾಜ್ಯದ ಗಡಿಭಾಗಗಳಲ್ಲಿ ಹೆಚ್ಚಿನ ಕಟ್ಟೆಚ್ಚರ ವಹಿಸಬೇಕಾಗಿದೆ. ಹೊರ ದೇಶದಿಂದ ಬರುವ ಪ್ರಯಾಣಿಕರನ್ನು ಹೋಂ ಕ್ವಾರಂಟೈನ್‌ಗೆ ಒಳಪಡಿಸುತ್ತಿದ್ದರೂ ದೇಶದಲ್ಲಿ ಎಂಟನೇ ಪ್ರಕರಣವಾಗಿದೆಯೆಂದು ಕೇಂದ್ರ ಆರೋಗ್ಯ ಇಲಾಖೆ ನಾಲ್ಕು ತಿಂಗಳ ಹಿಂದೆಯೇ ತಿಳಿಸಿತು. ಈ ಕಟ್ಟೆಚ್ಚರ ಈಗ ಸಡಿಲಗೊಂಡಿದೆ. ಹಾಗೂ ವಿಶ್ವ ಸಂಸ್ಥೆ ಇದನ್ನು ಜಾಗತಿಕ ಆರೋಗ್ಯ ತುರ್ತು ಪರಿಸ್ಥಿತಿ ಎಂದು ಮಾಡಿದೆ. ಗ್ರಾಮೀಣ ಪ್ರದೇಶದ ಜನರಿಗೆ ಮತ್ತು ಹಿಂದುಳಿದ ಪ್ರದೇಶಗಳ ಜನರಿಗೆ ಮಂಕಿಪಾಕ್ಸ್ ಲಕ್ಷಣಗಳ ಬಗ್ಗೆ ಹೆಚ್ಚು ಜಾಗೃತಿ ಮೂಡಿಸಿ.

–ಕಂಗಾಣಿ ಸೋಮು ಪಿ.ಸಿ., ಕ್ಯಾತಮಾರನಹಳ್ಳಿ ಮೈಸೂರು

ಹಿನಕಲ್ ಫ್ಲೈ ಓವರ್‌ಗೆ ಬಸ್ ಸೇವೆ ಕಲ್ಪಿಸಿ

ಮಾನ್ಯರೆ,

ಮೈಸೂರಿನ ವಿಜಯನಗರ 2ನೇ ಹಂತದಿಂದ ಹಿನಕಲ್‌ಗೆ ಯಾವುದೇ ಬಸ್ ವ್ಯವಸ್ಥೆ ಇಲ್ಲ. ಇದರಿಂದ ಹುಣಸೂರು, ಪಿರಿಯಾಪಟ್ಟಣ, ಕುಶಾಲನಗರ, ಮಡಿಕೇರಿ, ಸೋಮವಾರಪೇಟೆ ಇತರ ಸ್ಥಳಗಳಿಗೆ ಹೋಗುವ ಪ್ರಯಾಣಿಕರಿಗೆ ತುಂಬಾ ಅನಾನುಕೂಲವಾಗಿದೆ. ಬಸ್‌ಗೆ ತೆರಳಬೇಕಾದರೆ ಆಟೋ ಹಿಡಿದು ಅವರು ಕೇಳಿದ್ದಷ್ಟು ಹಣವನ್ನು ನೀಡಬೇಕಾಗಿದೆ. ಹೆಬ್ಬಾಳು ಮಾರ್ಗದ ಬಸ್ಸುಗಳನ್ನು ಹಿನಕಲ್ ಫ್ಲೈ ಓವರ್ ಮತ್ತು ವಿಜಯನಗರ 4ನೇ ಹಂತದವರೆಗೆ ವಿಸ್ತರಿಸಿದರೆ ತುಂಬಾ ಅನುಕೂಲವಾಗುತ್ತದೆ. ಇದರ ಬಗ್ಗೆ ಸಂಬಂಧಪಟ್ಟ ನಗರ ಸಾರಿಗೆ ಅಧಿಕಾರಿಗಳು ಗಮನಹರಿಸಿ ಬಸ್ ಸೌಲಭ್ಯ ಕಲ್ಪಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಮನವಿ.

–ಎ.ವಿ. ರಾಜಶೇಖರ, ಹಿರಿಯ ನಾಗರಿಕರ ಸೇವಾ ಸಮಿತಿ, ಹೆಬ್ಬಾಳು, ಮೈಸೂರು.

ಡಿಜಿಟಲ್ ಬ್ಯಾಂಕಿಂಗ್ ಸೇವೆಗೆ ಎಚ್ಚರಿಕೆಯ ಅಗತ್ಯವಿದೆ

ಮಾನ್ಯರೆ,

ಡಿಜಿಟಲ್ ಬ್ಯಾಂಕಿಂಗ್ ಸೇವೆಯು ತಂತ್ರಜ್ಞಾನ ಬೆಳೆದಂತೆ ಜನಸಾಮಾನ್ಯರಿಗೆ ಅನುಕೂಲದ ಜೊತೆಗೆ ಅನಾನುಕೂಲವು ಹೆಚ್ಚಾಗಿದೆ. ಈ ಕುರಿತಂತೆ ಈಗಾಗಲೇ ದೇಶದಲ್ಲಿ 5ಜೀ ಮೊಬೈಲ್ ಸೇವೆ ಆರಂಭವಾಗಿದ್ದು, ಇಂತಹ ಸಮಯದಲ್ಲಿ ಕೆಲವು ಸೈಬರ್ ಕಿಡಿಗೇಡಿಗಳು ಸಾರ್ವಜನಿಕರಿಗೆ ಹಿಂದೆ ಇದ್ದ 4ಜೀ ಮೊಬೈಲ್ ಸೇವೆಯ ನೆಟ್ ವರ್ಕ್‌ಗಳನ್ನು 5ಜೀ ಸೇವೆಯ ನೆಟ್ ವರ್ಕ್‌ಗೆ "ಅಪ್ ಡೇಟ್" ಮಾಡುವುದಾಗಿ ಹೇಳಿ ವಂಚಿಸುವ ಸಾಧ್ಯತೆಯಿದೆ ಎಂದು ರಾಜ್ಯದ ಪೋಲೀಸರು ಸಾರ್ವಜನಿಕರಿಗೆ ಈಗಾಗಲೇ ಎಚ್ಚರ ವಹಿಸಲು ಮನವಿ ಮಾಡಿದ್ದಾರೆ. ಈ ವಿಷಯವನ್ನು ಸಮಾಜದಲ್ಲಿ ಪ್ರತಿಯೊಬ್ಬರೂ ಅರಿತುಕೊಳ್ಳಬೇಕು. ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಅನಗತ್ಯ ಫ್ಲೆಕ್ಸ್‌ಗಳನ್ನು ತೆಗೆಸಿ ಸಾರ್ವಜನಿಕರಿಗೆ ಉಪಯೋಗವಾಗುವ ವಿಷಯಗಳನ್ನು ಫ್ಲೆಕ್ಸ್ ಹಾಗೂ ನಮ್ಮ ಜನರಿಗೆ ಹತ್ತಿರವಾಗಿರುವ ದೃಶ್ಯ ಮಾಧ್ಯಮ ಹಾಗೂ ಪತ್ರಿಕಾ ಮಾಧ್ಯಮಗಳಲ್ಲಿ ಪ್ರಕಟಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು ಮತ್ತು ಪೊಲೀಸ್ ಇಲಾಖೆಯು ಸೈಬರ್ ಕಳ್ಳರನ್ನು ಪತ್ತೆ ಹಚ್ಚಿ ಬಂಧಿಸಿ ನ್ಯಾಯಾಲಯದ ಮೂಲಕ ಶಿಕ್ಷೆಗೆ ಒಳಪಡಿಸಿ ಸೈಬರ್ ಕಳ್ಳರು ಇಲ್ಲಿಯವರೆಗೆ ಮಾಡಿರುವ ಕೃತ್ಯಗಳಿಗೆ ದಂಡ ವಿಧಿಸಿ ವಂಚಿನೆಗೆ ಒಳಗಾದವರಿಗೆ ನ್ಯಾಯ ದೊರಕಿಸಬೇಕು.

–ನಾಗೇಶ್, ಮಾನಸಗಂಗೋತ್ರಿ.

ಸುಳ್ಳು ಹೇಳಿದರೇ ಸಚಿವರು!


ಮಾನ್ಯರೆ,

ದಸರೆಗೆ ಮಾಡಿದ ದೀಪಾಲಂಕಾರವನ್ನು ಅಕ್ಟೋಬರ್ 10 ರವರೆಗೆ ವಿಸ್ತರಣೆ ಮಾಡಲಾಗಿದೆಯೆಂದು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಚೆಸ್ಕಾಂ ಎಂಡಿ ಜಯವಿಭವಸ್ವಾಮಿಯವರು ಹೇಳಿದ ಹೇಳಿಕೆಗಳು ಮಾಧ್ಯಮಗಳಲ್ಲಿ ವರದಿಯಾಗಿದ್ದನ್ನು ಕಂಡು ನಾವು ಅ.7 ರ ಶುಕ್ರವಾರ ರಾತ್ರಿ ಎಂಟು ಗಂಟೆ ನಂತರ ಮೈಸೂರು ನಗರದ ದೀಪಾಲಂಕಾರ ನೋಡಲು ಕೃಷ್ಣರಾಜ ಬುಲೆವಾರ್ಡ್ ರಸ್ತೆಯಿಂದ ಹೊರಟು ಹುಣಸೂರು ರಸ್ತೆಗೆ ಸೇರಿದೆವು.

ಅಲ್ಲಿಂದಲೇ ಉರಿಯದ ದೀಪ ಸಾಲುಗಳು ನಮ್ಮನ್ನು ಸ್ವಾಗತಿಸಿದವು. ಹಾಗೇ ಮುಂದೆ ಸಾಗಿ ಬಿ.ಎಂ. ಆಸ್ಪತ್ರೆಯ ಬಳಿ ತಿರುಗಿಕೊಂಡು ಕೆ.ಆರ್.ಎಸ್ ರಸ್ತೆಯ ಕಡೆ ಸಾಗಿದೆವು. ಅಲ್ಲಿಂದ ಝಾನ್ಸಿ ಲಕ್ಷ್ಮೀಬಾಯಿ ರಸ್ತೆಗೆ ತಿರುಗಿ ರೈಲ್ವೇ ಸ್ಟೇಷನ್ ದಾಟಿ ಆರ್‌ಎಂಸಿ ಕಡೆಯಿಂದ ಮಿಲೇನಿಯಂ ಸರ್ಕಲ್ ಕಡೆ ಹೋದೆವು. ಅಲ್ಲಿಂದ ಗ್ರಾಮಾಂತರ ಬಸ್ ನಿಲ್ದಾಣದ ಕಡೆ ಹೋದೆವು.

ಪ್ರಮುಖ ರಸ್ತೆಗಳಲ್ಲಿ ದೀಪಾಲಂಕಾರವಿತ್ತಾದರೂ ಬಹಳಷ್ಟು ರಸ್ತೆಯಲ್ಲಿ ಹಾಕಿದ್ದ ಸಾಲು ದೀಪಗಳು ಉರಿಯುತ್ತಿರಲಿಲ್ಲ. ಶೇ85 ರಷ್ಟು ಉರಿಯದ ಸಾಲು ದೀಪಗಳನ್ನು ನೋಡಿ ಬೇಸರವಾಯಿತು. ಎರಡು ದಿವಸ ದೀಪಾಲಂಕಾರ ಮುಂದುವರೆಸಲಾಗುತ್ತದೆಯೆಂಬ ಉಸ್ತುವಾರಿ ಸಚಿವರ ಮಾತನ್ನು ನಂಬಿ ನಾವು ಮೂರ್ಖರಾದೆವು. ದೀಪಾಲಂಕಾರವನ್ನು ಪೂರ್ಣ ಪ್ರಮಾಣದಲ್ಲಿ ಮುಂದುವರೆಸಲಾಗದಿದ್ದರೆ ಸಚಿವರು ಹಾಗೂ ಚೆಸ್ಕಾಂ ಎಂಡಿ ಸುಮ್ಮನಿರಬೇಕಿತ್ತು. ಸುಳ್ಳು ಹೇಳಿ ಜನರಿಗೆ ಮೋಸ ಮಾಡಬಾರದಾಗಿತ್ತು!

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು




ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ : 94482 08746 / 97421 79000

ಚಿಂತನೆ

ಪ್ರಯತ್ನವೇ ಜೀವನದ ರಹದಾರಿ; ಅದೇ ಯಶಸ್ಸಿನ ದಾರಿ



ನಾವು ಜೀವನದಲ್ಲಿ ಏನನ್ನಾದರೂ ಸಾಧಿಸಬೇಕು, ಮನುಷ್ಯ ಎಂದು ಹುಟ್ಟಿದ ಮೇಲೆ ಸಮಾಜಕ್ಕೆ ಉಪಕಾರಿಯಾಗುವಂತಹ ಯಾವುದಾದರೂ ಕೆಲಸ ಮಾಡಬೇಕು, ನನ್ನಲ್ಲಿ ಆರ್ಥಿಕ ಶಕ್ತಿ ಇಲ್ಲದಿದ್ದರೂ ಇರುವುದರಲ್ಲಿ ಏನು ಮಾಡಬಹು ದೋ ಅದನ್ನೆ ಮಾಡುತ್ತೇನೆ, ಒಟ್ಟಿನಲ್ಲಿ ಏನಾದರೂ ಸಾಧನೆ ಮಾಡಬೇಕು ಎಂಬ ಆಸೆ ಸಾಮಾನ್ಯವಾಗಿ ಎಲ್ಲರಲ್ಲೂ ಇರುತ್ತದೆ. ಆದರೆ ಅದನ್ನು ಸಾಧಿಸುವ ಗುರಿ ಕಾಣದೆ ಆಸೆಯನ್ನು ಅದುಮಿಟ್ಟು ಸಾಮಾನ್ಯರಂತೆ ಜೀವನ ಸಾಗಿಸಿ ಬಿಡುತ್ತೇವೆ. ಸ್ವಾಮಿ ವಿವೇಕಾನಂದರು ಚಿಕಾಗೋ ಸಮ್ಮೇಳನಕ್ಕೆ ಹೋಗುವ ಪೂರ್ವದಲ್ಲಿ ಅವರ ಬಗ್ಗೆ ಯಾವ ವಿದೇಶಿಯರಿಗೂ ತಿಳಿದಿರಲಿಲ್ಲ. ಅಷ್ಟೇಕೆ ಭಾರತೀಯರಿಗೂ ಅವರು ಯಾರು ಎಂದು ತಿಳಿದಿರಲಿಲ್ಲ. ಆದರೆ ಅವರು ಅಲ್ಲಿನ ವಿಶ್ವಧರ್ಮ ಸಮ್ಮೇಳನದಲ್ಲಿ ಹಿಂದುತ್ವ ಕುರಿತು, ಭಾರತೀಯತೆಯ ವೈಶಿಷ್ಟ್ಯತೆ ಕುರಿತು ಮಾತನಾಡಿದ ನಂತರ ವಿಶ್ವಪ್ರಸಿದ್ಧರಾದರು. ಸಮ್ಮೇಳನದ ಭಾಷಣದ ಹಿಂದಿನ ದಿನವೂ ಚಳಿಯಲ್ಲಿ ನಡುಗುತ್ತಾ ರೈಲು ನಿಲ್ದಾಣದಲ್ಲಿ ರಾತ್ರಿ ಕಳೆದಿದ್ದ ಅವರು, ಆ ಐತಿಹಾಸಿಕ ಭಾಷಣದ ನಂತರ ಬಹು ಬೇಡಿಕೆಯ ವ್ಯಕ್ತಿಯಾದರು. ಇದು ಅವರಲ್ಲಿದ್ದ ಆತ್ಮವಿಶ್ವಾಸದ ದ್ಯೋತಕ. ಮನಸ್ಸಿದ್ದರೆ ಮಾರ್ಗ ಎಂಬಂತೆ ಸಾಧಿಸುವ ಇಚ್ಛೆ ಇದ್ದಲ್ಲಿ ದಾರಿಗಳು ತಾವಾಗೇ ತೆರೆದುಕೊಳ್ಳುತ್ತವೆ. ಆದರೆ ಪ್ರಯತ್ನ ಮಾಡುವವರು ನಾವೇ ಆಗಬೇಕು. ತಮಿಳುನಾಡಿನ ಪಾಂಡಿಯನ್ ಎಂಬ ಭಿಕ್ಷುಕ ತಾನು ಭಿಕ್ಷೆ ಬೇಡಿ ಸಂಪಾದಿಸಿದ ಸಾವಿರಾರು ರೂಪಾಯಿ ಗಳನ್ನು ಸಾರ್ವಜನಿಕರಿಗೆ ದಾನ ಮಾಡಿದ ಎಂಬುದನ್ನೂ ಕೇಳುತ್ತೇವೆ. ತಾನೇ ಭಿಕ್ಷೆ ಬೇಡುತ್ತಿದ್ದರೂ, ತನ್ನ ಬಳಿ ತನಗೆ ಅಗತ್ಯಕ್ಕಿಂತ ಹೆಚ್ಚಾಗಿದೆ ಎನಿಸಿದಾಗ ಅದನ್ನು ದಾನ ಮಾಡುವುದಿದೆಯಲ್ಲಾ!! ಅದು ಸುಲಭದ ವಿಷಯವಲ್ಲ. ಅದಕ್ಕೆ ಮನಸ್ಥಿತಿ ಮುಖ್ಯವಾಗುತ್ತದೆ.



ಅದೇ ರೀತಿ ತಮಿಳುನಾಡಿನ ಮತ್ತೊಬ್ಬ ಸಾಮಾನ್ಯ ಉದ್ಯೋಗಿ, ಕಲ್ಯಾಣ ಸುಂದರಂ ಎನ್ನುವವರು ಗ್ರಂಥಾಲಯದಲ್ಲಿ ಕೆಲಸ ಮಾಡುತ್ತಿದ್ದರು. ಅವರು ಧರಿಸುತ್ತಿದ್ದುದು ಸಾಮಾನ್ಯ ಪಂಚೆ, ಶರಟು, ಒಂದು ಜೊತೆ ಹವಾಯಿ ಚಪ್ಪಲಿ ಮಾತ್ರ ಅವರು ತಮಗೆ ಬರುತ್ತಿದ್ದ ಪ್ರತಿ ತಿಂಗಳ ವೇತನವನ್ನು ಅನಾಥಾಶ್ರಮಕ್ಕೆ ದಾನ ಮಾಡುತ್ತಿದ್ದುದೇ ಅಲ್ಲದೆ ತಾನೂ ಅದೇ ಅನಾಥಾಲಯದಲ್ಲೇ ವಾಸ ಮಾಡುತ್ತಿದ್ದರು. ಅನಾಥಾಶ್ರಮದ ಮಕ್ಕಳಿಗೆ, ಸಮಯ ಸಿಕ್ಕಾಗಲೆಲ್ಲಾ ಪಾಠ ಮಾಡುತ್ತಿದ್ದರು. ಅವರಿಗೆ ಸೇವೆಯಿಂದ ನಿವೃತ್ತಿಯಾಯಿತು. ಸ್ವಲ್ಪ ಪಿಂಚಣಿ ಹಣವೂ ಬಂತು. ಆ ಹಣವನ್ನು ಐದಾರು ಅನಾಥಾಲಯಗಳಿಗೆ ಹಂಚಿಬಿಟ್ಟರು. ಈ ಬಗ್ಗೆ ತಿಳಿದ ಅಮೆರಿಕಾ ಸರ್ಕಾರ ಅವರಿಗೆ 'ರಿಯಲ್ ಹೀರೋ ಇನ್ ದಿ ವರ್ಲ್ಡ್' ಪ್ರಶಸ್ತಿ ನೀಡಿ 30 ಕೋಟಿ ರೂಪಾಯಿ ನಗದು ಪುರಸ್ಕಾರ ನೀಡಿತು. ಈ ಮನುಷ್ಯ ಅಮೇರಿಕಾದಿಂದ ವಾಪಸ್ಸು ಬಂದ ನಂತರ ನೇರವಾಗಿ ಬ್ಯಾಂಕಿಗೆ ಹೋಗಿ ತನಗೆ ಬಂದಿದ್ದ ಅಷ್ಟೂ ದುಡ್ಡನ್ನು ಪ್ರತಿ ಅನಾಥಾಶ್ರಮಕ್ಕೆ ತಲಾ ಒಂದು ಕೋಟಿಯಂತೆ ಮೂವತ್ತು ಅನಾಥಾಲಯಗಳಿಗೆ ನೀಡಿಬಿಟ್ಟರು. ಅಲ್ಲದೆ ನೇರವಾಗಿ ತಾನು ಹಿಂದೆ ಇದ್ದ ಅನಾಥಾಶ್ರಮಕ್ಕೇ ಬಂದು ಸೇರಿದರು. ಈ ವಿಷಯ ಮಾಧ್ಯಮಗಳಲ್ಲಿ ಪ್ರಕಟವಾದಾಗಲೇ ಸಾರ್ವಜನಿಕರಿಗೆ ಇಂತಹ ಒಬ್ಬ ವ್ಯಕ್ತಿ ನಮ್ಮೊಡನೆ ಇದ್ದಾರೆ ಎಂದು ತಿಳಿದಿದ್ದು. ಇದು ಅವರಿಗೆ ಹೇಗೆ ಸಾಧ್ಯವಾಯಿತು? ಎಂದರೆ ಅದನ್ನು ಮನಸ್ಥಿತಿ ಎಂದು ಹೇಳಬಹುದು. ದುಡ್ಡೇ ಜೀವನ ಎಂದು ಕೊಳ್ಳುವವರಿಗೆ ಇಂತಹ ವ್ಯಕ್ತಿಗಳು ಉತ್ತರವಾಗುತ್ತಾರೆ. ನನಗೆ ತಿನ್ನಲು ಒಂದಷ್ಟು ಆಹಾರ, ಮಲಗಲು ಕೊಂಚ ಜಾಗ, ಉಡಲು ತುಂಡುಬಟ್ಟೆ ಸಾಕೆಂದು ಭಾವಿಸುವ ಇಂತಹ ಮಹನೀಯರು ನಿಜವಾದ ಸಾಧಕರು ಎನಿಸುತ್ತಾರೆ.

ನಾವು ಕಂಡ ಹಾಗೇ ಕಳೆದ ವರ್ಷದ ಪದ್ಮಶ್ರೀ ಪ್ರಶಸ್ತಿ ಪಡೆದ ಹರೇಕಳ ಹಾಜಬ್ಬ ಅವರು, ರಸ್ತೆಯಲ್ಲಿ ನಿಂತು ತಳ್ಳುವ ಗಾಡಿಯಲ್ಲಿ ಹಣ್ಣು ಮಾರಿ ಬಂದ ಹಣದಲ್ಲಿ ತಮ್ಮೂರಿನಲ್ಲಿ ಶಾಲೆ ಕಟ್ಟಿದ್ದಾರೆ. ಹಾಗೆ ನೋಡಿದರೆ 64 ವರ್ಷದ ಅವರು ಶಾಲೆಯ ಮೆಟ್ಟಿಲು ಹತ್ತಿದವರೇ ಅಲ್ಲ. ಆದರೂ ತಮ್ಮೂರಿನಲ್ಲಿ ಒಂದು ಶಾಲೆ ಕಟ್ಟಬೇಕು ಎಂದು ನಿರ್ಧರಿಸಿ ಅದಕ್ಕಾಗಿ ಅವಿರತ ಶ್ರಮಿಸಿ, ಅಕ್ಷರ ಸಂತ ಎನಿಸಿಕೊಂಡರು ಹಾಗೂ ಅವರನ್ನು ಪದ್ಮಶ್ರೀ ಪ್ರಶಸ್ತಿ ಅರಸಿ ಬಂದಿತು. ಅದೇ ರೀತಿ ಕಳೆದ ವರ್ಷದ ಪದಶ್ರೀ ಪ್ರಶಸ್ತಿ ಪಡೆದ ಹಾಲಕ್ಕಿ ಬುಡಕಟ್ಟು ಸಮುದಾಯದ ಶ್ರೀಮತಿ ತುಳಸೀಗೌಡ ಅವರು, ನಮ್ಮ ಸಾಲುಮರದ ತಿಮ್ಮಕ್ಕರಂತೆ ರಸ್ತೆ ಬದಿಯಲ್ಲಿ ಗಿಡಗಳನ್ನು ನೆಟ್ಟು ಪೋಷಿಸುತ್ತಿದ್ದರು. ಅವರ ಪರಿಸರ ಪ್ರೇಮ ಹಾಗೂ ಅದರ ಬಗೆಗಿನ ನಿಷ್ಠೆಯನ್ನು ಪರಿಗಣಿಸಿ ಅವರಿಗೆ ಪದಶ್ರೀ ಪ್ರಶಸ್ತಿ ನೀಡಲಾಯಿತು. ಇನ್ನು ನಮ್ಮ ಸಾಲುಮರದ ತಿಮ್ಮಕ್ಕ ನಮ್ಮ ನಡುವಿನ ಒಂದು ಆದರ್ಶ ದಂತ ಕಥೆ. ಯಾವುದೇ ಫಲಾಪೇಕ್ಷೆ ಇಲ್ಲದೆ ಸಾವಿರಾರು ಗಿಡಗಳನ್ನು ರಸ್ತೆ ಬದಿಯಲ್ಲಿ ನೆಟ್ಟು ಅದಕ್ಕೆ ಪ್ರತಿದಿನ ನೀರು ಹಾಕಿ ಪೋಷಿಸಿದ ಅವರು ನಮಗೆ ಆದರ್ಶರಾಗಬೇಕು. ಇಂತಹವರು ಯಾವ ಶ್ರೀಮಂತಿಕೆ ಮೆರೆಯಲಿಲ್ಲ ಅಥವಾ ತಮ್ಮಲ್ಲಿದ್ದ ಹಣ ಹಂಚಿ ಹೆಸರು ಮಾಡಲಿಲ್ಲ. ಇಂತಹವರು ನಮಗೆ ಸ್ಫೂರ್ತಿಯಾಗುತ್ತಾರೆ.

ನಿಜ ನನ್ನಲ್ಲಿ ಹಣವಿಲ್ಲ, ಇದ್ದಿದ್ದರೆ ನಾನೂ ದಾನ ಮಾಡಿ ಹೆಸರು ಗಳಿಸಬಹುದಾಗಿತ್ತು ಎನಿಸುವವರು ನಮ್ಮ ನಡುವೆ ಸಾಕಷ್ಟು ಜನರಿದ್ದಾರೆ. ಆದರೆ ಹಣವೇ ದಾನದ ಮೂಲ ವಸ್ತುವಲ್ಲ. ತನ್ನೂರಿನ ಜನರಿಗೆ ಓಡಾಡಲು ದಾರಿಯಿಲ್ಲ ಎಂದು ಬೆಟ್ಟಗುಡ್ಡಗಳನ್ನು ಹತ್ತಾರು ವರ್ಷಗಳ ಕಾಲ ಅಗೆದು ದಾರಿ ಮಾಡಿಕೊಟ್ಟವರ ಸಾಹಸ ನಮಗೆ ಗೊತ್ತಿದೆ. ಎಲ್ಲೋ ದೂರದ ಪ್ರದೇಶದಿಂದ ನೆಲ ಅಗೆದು ನೀರಿಗೆ ದಾರಿ ಮಾಡಿ ತನ್ನೂರಿಗೆ ನೀರು ತಂದವರ ಬಗ್ಗೆಯೂ ನಾವು ಕೇಳುತ್ತೇವೆ. ವೈದ್ಯರು ಎಂದರೆ ಹಣ ಮಾಡುವವರು ಎನಿಸಿರುವ ಸನ್ನಿವೇಶದಲ್ಲಿ ಕೇವಲ ಐದು ರೂಪಾಯಿ ಪಡೆದು ಜನರಿಗೆ ಔಷಧೋಪಚಾರ ಮಾಡುವವರ ಬಗ್ಗೆಯೂ ನಾವು ಕೇಳುತ್ತೇವೆ. ಅಂದರೆ ಇಂತಹವರು ಎಂತಹ ಹೃದಯವಂತರು ಅಲ್ಲವೇ?

> ಸ್ವಾಮಿ ವಿವೇಕಾನಂದರು ಚಿಕಾಗೋ ಸಮ್ಮೇಳನಕ್ಕೆ ಹೋಗುವ ಪೂರ್ವದಲ್ಲಿ ಅವರ ಬಗ್ಗೆ ಯಾವ ವಿದೇಶಿಯರಿಗೂ ತಿಳಿದಿರಲಿಲ್ಲ. ಅಷ್ಟೇಕೆ ಭಾರತೀಯರಿಗೂ ಅವರು ಯಾರು ಎಂದು ತಿಳಿದಿರಲಿಲ್ಲ. ಆದರೆ ಅವರು ಅಲ್ಲಿನ ವಿಶ್ವಧರ್ಮ ಸಮ್ಮೇಳನದಲ್ಲಿ ಹಿಂದುತ್ವ ಕುರಿತು, ಭಾರತೀಯತೆಯ ವೈಶಿಷ್ಟ್ಯತೆ ಕುರಿತು ಮಾತನಾಡಿದ ನಂತರ ವಿಶ್ವಪ್ರಸಿದ್ಧರಾದರು. ಸಮ್ಮೇಳನದ ಭಾಷಣದ ಹಿಂದಿನ ದಿನವೂ ಚಳಿಯಲ್ಲಿ ನಡುಗುತ್ತಾ ರೈಲು ನಿಲ್ದಾಣದಲ್ಲಿ ರಾತ್ರಿ ಕಳೆದಿದ್ದ ಅವರು, ಆ ಐತಿಹಾಸಿಕ ಭಾಷಣದ ನಂತರ ಬಹು ಬೇಡಿಕೆಯ ವ್ಯಕ್ತಿಯಾದರು. ಇದು ಅವರಲ್ಲಿದ್ದ ಆತ್ಮವಿಶ್ವಾಸದ ದ್ಯೋತಕ. ಮನಸ್ಸಿದ್ದರೆ ಮಾರ್ಗ ಎಂಬಂತೆ ಸಾಧಿಸುವ ಇಚ್ಛೆ ಇದ್ದಲ್ಲಿ ದಾರಿಗಳು ತಾವಾಗೇ ತೆರೆದುಕೊಳ್ಳುತ್ತವೆ.

ಇಲ್ಲೆಲ್ಲಾ ಕೆಲಸ ಮಾಡುವುದು ಹಣವಲ್ಲ, ಬದಲಿಗೆ ನಿರಂತರ ಪರಿಶ್ರಮ ಹಾಗೂ ಸಾಮಾಜಿಕ ಬದ್ಧತೆ. ಇಂತಹವರ ಜೀವನ, ಇತರರಿಗೆ ಸ್ಫೂರ್ತಿ ನೀಡುವಂತಹುದು. ನಾವು ಅನೇಕ ತೀರ್ಥ ಕ್ಷೇತ್ರಗಳ ಮಹಿಮೆ ಕೇಳುವಾಗ ಕಾಲಿದ್ದೂ ನಡೆಯಲಾಗದ ವ್ಯಕ್ತಿಯನ್ನು ಒಂದು ಕೋತಿ ಅಟ್ಟಿಸಿಕೊಂಡು ಬಂದಾಗ ಗಾಬರಿಯಿಂದ ಆ ವ್ಯಕ್ತಿ ಓಡುತ್ತಾ ದೇವಸ್ಥಾನದ ಬಳಿಗೆ ಬಂದ ಎಂದು ಕೇಳುತ್ತೇವೆ. ಇದು ಕಥೆಯೋ ಏನೋ? ಆದರೂ ಸಹಾ ಮನುಷ್ಯ ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಬಹುದು ಎಂಬುದರ ದ್ಯೋತಕವಾಗುತ್ತದೆ. ಇದನ್ನು ಮನುಷ್ಯ ಪ್ರಯತ್ನ ಎನ್ನಲಾಗುತ್ತದೆ. ಅಂದರೆ ಮನುಷ್ಯ ಪ್ರಯತ್ನದಿಂದ ಸಾಧಿಸಲಾಗದ್ದು ಈ ಪ್ರಪಂಚದಲ್ಲಿ ಯಾವುದೂ ಇಲ್ಲ ಎಂದೂ ಹೇಳಲಾಗುತ್ತದೆ. ಪ್ರಬಲ ಇಚ್ಛಾಶಕ್ತಿ ಇದ್ದರೆ ಸಾಧಿಸುವ ದಾರಿ ತಾನಾಗೇ ತೆರೆದುಕೊಳ್ಳುತ್ತದೆ. ಇಂತಹ ಪ್ರಬಲ ಇಚ್ಛಾಶಕ್ತಿ ಇರುವವರು ಜೀವನದಲ್ಲಿ ಎಂದಿಗೂ ಉತ್ಸಾಹವನ್ನು ಕಳೆದುಕೊಳ್ಳುವು ದಿಲ್ಲ. ಅವರ ಹಾಗೂ ಅವರ ವಯಸ್ಸಿನ ಕಾರಣಕ್ಕೆ ಅವರು ಏನಾದರೂ ಸಾಧನೆ ಮಾಡಬೇಕೆಂದು ಹೊರಟಾಗ, ಯಾವುದೇ ಸಾಧನೆ ಮಾಡದಿರುವವರು ಅವರನ್ನು ಹೀಯಾಳಿಸಿ, ಅವರನ್ನು ಗುರಿಯಿಂದ ವಿಮುಖರಾಗುವಂತೆ ಮಾಡುತ್ತಾರೆ. ಆದರೆ ನನ್ನ ಜೀವನ ನನ್ನದು, ನನಗೆ ಸರಿ ಎನಿಸಿದ್ದನ್ನು ನಾನು ಮಾಡುತ್ತೇನೆ ಎಂದು ಹೊರಡುವವರೇ ಸಾಧಕರಾಗುತ್ತಾರೆ. ಯಾವ ಮನುಷ್ಯ ಸ್ವಪ್ರಯತ್ನವಿಲ್ಲದೆ, ತನ್ನ ಹಣೆ ಬರಹದಲ್ಲಿ ಬರೆದಂತೆ ಆಗುತ್ತದೆ ಎಂದು ಭಾವಿಸುವರೋ ಅವರಿಂದ ಯಾವ ಸಾಧನೆಯೂ ಆಗುವುದಿಲ್ಲ. ಮನಸ್ಥೈರ್ಯ ಹಾಗೂ ತಮ್ಮ ಸಾಮರ್ಥ್ಯದ ಬಗ್ಗೆ ನಂಬಿಕೆ ಇರದವರು ಏನನ್ನು ಸಾಧಿಸಲಾರರು.

ಸಾಧನೆಗೆ ದಾರಿ ಹಲವಾರು. ಅದನ್ನು ಹೀಗೇ ಎಂದು ಹೇಳಲು ಬರುವುದಿಲ್ಲ. ಜೀವನದಲ್ಲಿ ಕಂಡ ಯಾವುದೋ ಘಟನೆ ನಮಗೆ ಪ್ರೇರಣೆ ನೀಡಬಲ್ಲುದು. ಮನುಷ್ಯ ಬುದ್ಧಿಜೀವಿ, ಅವನಿಗೆ ಆಲೋಚಿಸುವ ಶಕ್ತಿ ಇದೆ. ಅವನಿಗೆ ಮನಸ್ಸೂ ಇದೆ. ಇದೆರಡನ್ನು ಉಪಯೋಗಿಸಿಕೊಂಡರೆ ಸಾಧನೆ ಸಾಧ್ಯವಾಗುತ್ತದೆ. ನಮಗೆ ಕನಸು ಇರಬೇಕು, ಆಗ ಸಾಧನೆಗೆ ದಾರಿ ಕಾಣುತ್ತದೆ. ಹಾಗೆ ನೋಡಿದರೆ ಜೀವನದಲ್ಲಿ ಕಷ್ಟ ಅನುಭವಿಸಿದವರು, ವಿವಿಧ ಹೊಡೆತಗಳನ್ನು ತಿಂದವರೇ ಹೆಚ್ಚು ಸಾಧನೆ ಮಾಡಿದ್ದು. ಕಳೆದೆರಡು ವರ್ಷದಲ್ಲಿ ಕೊರೊನಾ ಕಾರಣ ಲಾಕ್‌ಡೌನ್ ಆದಾಗ, ಕರ್ಫ್ಯೂ ಹೇರಲ್ಪಟ್ಟಾಗ ನಮ್ಮ ನಡವಳಿಕೆ ಹೇಗಿತ್ತು? ನೋಡಿ. ಹೊರಗೆ ಹೋಗುವಂತಿಲ್ಲ, ಏನೂ ಮಾಡುವಂತಿಲ್ಲ ಎಂಬ ಸಮಯದಲ್ಲಿ ಅನೇಕರಿಗೆ ಹೊಳೆದಿದ್ದು ಅಶಕ್ತರಿಗೆ ಆಹಾರ ನೀಡುವುದು, ರೋಗಿಗಳ ಯೋಗಕ್ಷೇಮ ವಿಚಾರಿಸುವುದು ಮೊದ ಲಾದವು. ಇದನ್ನು ಯೋಚಿಸಿ, ಸಂಕಲ್ಪ ಮಾಡಿ ಮಾಡಿದ್ದಲ್ಲ, ಬದಲಿಗೆ ಆ ಸಮಯದಲ್ಲಿ ತೆಗೆದುಕೊಂಡ ನಿರ್ಧಾರವಾಗಿತ್ತು. ಅನೇಕರು ತಾವು ಅಶಕ್ತರಿಗೆ ಆಹಾರ ನೀಡುತ್ತಿರುವುದಾಗಿ ಫೋಟೋ ತೆಗೆಸಿ ಪತ್ರಿಕೆಗಳಲ್ಲಿ ಹಾಕಿಸಿಕೊಂಡರು. ಆದರೆ ಯಾವುದೇ ಪ್ರಚಾರ ಬಯಸದ ಸಾವಿರಾರು ಜನರೂ ಹೀಗೆಯೇ ಅಶಕ್ತರಿಗೆ ಊಟೋಪಚಾರ ಮಾಡಿದರು. ಇದು ಸಾಧ್ಯವಾದದ್ದು ಅವರ ಮನೋಬಲದಿಂದ.

ಒಂದೆಡೆ 80 ವರ್ಷದ ವ್ಯಕ್ತಿ ಮಾಡಿದ ಸಾಧನೆ ಅನುಕರಣೀಯ ಅನ್ನಿಸುತ್ತದೆ. ಅವರು ಒಂದು ದಿನ ಪಕ್ಕದ ಮನೆಯವರು ಪೇಟೆಯಿಂದ ಹೊಸ ಬಟ್ಟೆಯ ಬ್ಯಾಗು ಖರೀದಿಸಿದ್ದನ್ನು ಗಮನಿಸಿದರು. ಅದನ್ನು ಕುತೂಹಲದಿಂದ ಒಮ್ಮೆ ನೋಡಿದರು. ಅವರ ಮನಸ್ಸು ಐವತ್ತು ವರ್ಷದ ಹಿಂದಕ್ಕೆ ಹೋಯಿತು. ಅರೇ, ಇದು ನಾನು ಮಾಡುತ್ತಿದ್ದ ನೂಲಿನ ಬ್ಯಾಗಿನ ರೀತಿಯದ್ದಲ್ಲವಾ? ಎನಿಸಿತು. ಅದನ್ನು ಪುನಃ ಪುನಃ ತಿರುಗಿಸಿ ತಿರುಗಿಸಿ ನೋಡಿದರು. ಯಾವುದೋ ಬಣ್ಣಕ್ಕೆ ಯಾವುದೋ ಮ್ಯಾಚ್ ಆಗದ ಕಾಂಬಿನೇಶನ್ ಮಾಡಿರುವುದನ್ನು ಗಮನಿಸಿ ಇದೇಕೆ ಹೀಗೆ, ಇದನ್ನು ತಯಾರಿಸಿದವರಿಗೆ ಅಭಿರುಚಿಯೇ ಇಲ್ಲವೇ ಎನಿಸಿತು. ತಾನು ಏಕೆ ಈಗ ಉತ್ತಮ ಅಭಿರುಚಿಯ ಬ್ಯಾಗುಗಳನ್ನು ತಯಾರಿಸಬಾರದು ಎನಿಸಿತು. ಅದರಂತೆ ಕಾರ್ಯಪ್ರವೃತ್ತರಾದರು. ತಾವೇ ಬ್ಯಾಗು ಹೊಲೆಯುವ ಕೆಲಸ ಆರಂಭಿಸಿದರು. ಮರೆತೇ ಹೋಗಿದ್ದ ನೆಚ್ಚಿನ ಹವ್ಯಾಸ ಅವರ ಕೈಹಿಡಿಯಿತು. ನಂತರ ಅವರು ಇಪ್ಪತ್ತೈದಕ್ಕು ಹೆಚ್ಚಿನ ನಮೂನೆಯ (ಡಿಸೈನ್) ಬಟ್ಟೆಯ ಬ್ಯಾಗು ತಯಾರಿಸಿ ಮಾರುಕಟ್ಟೆಗೆ ಬಿಟ್ಟರು. ನಾಲ್ಕಾರು ಜನರಿಗೆ ಕೆಲಸವನ್ನೂ ನೀಡಿದರು. ತಮ್ಮ ಯಾವುದೋ ಕಾಲದ ಹವ್ಯಾಸ ಅವರಿಗೆ ಒಳ್ಳೆಯ ಹೆಸರು ತಂದಿತು ಹಾಗೂ ಅದು ಅವರಿಗೆ ಜೀವನದ ಹೊಸ ದಾರಿ ತೋರಿಸಿತು.

ಇಂತಹ ಘಟನೆಗಳು ನಮ್ಮ ಜೀವನದಲ್ಲೂ ನಡೆದಿರುತ್ತವೆ. ಅದನ್ನು ಮೆಲುಕು ಹಾಕಬೇಕು. ತಾನು ಏನನ್ನಾದರೂ ಸಾಧಿಸಬಹುದೇ? ಎಂಬ ಚಿಂತನೆ ಮಾಡಬೇಕು. ಸಾಧನೆ ಎಂದರೆ ಯಾವುದನ್ನೋ ಹೊಸದಾಗಿ ಕಂಡುಹಿಡಿಯುವುದು ಎಂದೇನಲ್ಲ. ತಮ್ಮ ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ಏನಾದರೂ ಉದ್ದೇಶದಿಂದ ಮಾಡುವುದು, ಅದರಿಂದ ಸಮಾಜಕ್ಕೆ ಏನಾದರೂ ಉಪಯೋಗ ವಾಗಬೇಕು ಎಂಬುದರತ್ತ ಗಮನವಿರಬೇಕು.

ನಾವು ಮಾಡುವ ಪ್ರಯತ್ನ ಒಂದೇ ಸಲ ಫಲ ನೀಡುತ್ತದೆ ಎಂದೇನಲ್ಲ. ಆದರೆ ಪ್ರಯತ್ನ ಸಾಧನೆಯ ಹಾದಿಯಾಗುತ್ತದೆ ಎಂಬುದನ್ನು ಮರೆಯಬಾರದು. ನಮಗೆ ಅವಕಾಶ ಇಲ್ಲದಿದ್ದಾಗ, ಅವಕಾಶ ಸೃಷ್ಟಿಸಿಕೊಳ್ಳುವ ಚಮತ್ಕಾರವೂ ನಮಗೆ ಗೊತ್ತಿರಬೇಕು. ಸಾಧನೆಗೆ ವಯಸ್ಸಿಲ್ಲ, ಸಾಧನೆಗೆ ಹಣವೇ ಬೇಕೆಂದೂ ಇಲ್ಲ. ಸಾಧನೆಗೆ ಬೇಕಾದದ್ದು ಅವಿರತ ಪ್ರಯತ್ನ ಹಾಗೂ ಮನಸ್ಸು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಪ್ರಯತ್ನವೇ ಜೀವನದ ರಹದಾರಿ, ಕೊನೆಗೆ ಹೆದ್ದಾರಿ. ಅದು ನಮ್ಮಲ್ಲೇ ಇರುವಂತಹುದು. ಅದನ್ನು ಬಳಸಿಕೊಳ್ಳಬೇಕಷ್ಟೇ.



ಇದು ಇನ್ಫೋಸಿಸ್ ಫೌಂಡೇಷನ್‌ನ ಡಾ. ಸುಧಾಮೂರ್ತಿ ಅವರು ಪುನರುಜ್ಜೀವನ ಮಾಡಿಕೊಟ್ಟ ಹೆಬ್ಬಾಳು ಕೆರೆ. ಈ ಕೆರೆಯ ನೀರಿನ ಒಂದು ಭಾಗದಲ್ಲಿ ಕಾಣಿಸುತ್ತಿರುವುದು ನಮ್ಮ ಘನ ಮೈಸೂರು ಮಹಾನಗರ ಪಾಲಿಕೆ ಕೊಟ್ಟಂತಹ ಕೊಡುಗೆ. ವಿಜಯನಗರ, ಮಂಚೇಗೌಡನಕೊಪ್ಪಲು ಹಾಗೂ ಹೆಬ್ಬಾಳು ಮೂಲಕ ಹಾದು ಹೋಗುವ ದೊಡ್ಡ ಮಳೆ ನೀರು ಚರಂಡಿ ಮೂಲಕ ಸಾಗಿ ಬರುವ ಪ್ಲಾಸ್ಟಿಕ್ ತ್ಯಾಜ್ಯ ಕೆರೆಯ ಒಂದೆಡೆ ಮಡುಗಟ್ಟಿ ನಿಂತಿದೆ. ಆದರೆ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿ ವರ್ಗ, ದಾನಿಯೊಬ್ಬರು ಕೊಟ್ಟಂತಹ ಕೊಡುಗೆಯನ್ನು ಕಾಪಾಡಿಕೊಳ್ಳುವ ಬದಲು ಹಾಳು ಮಾಡುತ್ತಿದೆ. ಕೆರೆಯ ಆವರಣದಲ್ಲಿ ಪ್ರತಿನಿತ್ಯ ಬೆಳಗ್ಗೆ, ಸಂಜೆ ವಾಯುವಿಹಾರಕ್ಕೆ ನೂರಾರು ಮಂದಿ ಬರುತ್ತಾರೆ. ಅವರು ಕೆರೆಯ ದುಸ್ಥಿತಿಯನ್ನು ಕಂಡು ಪಾಲಿಕೆ ಅಧಿಕಾರಿ ವರ್ಗಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ. ಇನ್ನೊಂದು ಮಳೆ ನೀರು ಚರಂಡಿಯಲ್ಲಿಯೂ ಇದೇ ರೀತಿಯಲ್ಲಿ ತ್ಯಾಜ್ಯ ಹರಿದು ಬರುತ್ತಿದ್ದು, ಹೂಟಗಳ್ಳಿ ನಗರಸಭೆ ಆಗಾಗ ಸ್ವಚ್ಛಗೊಳಿಸುವ ಮೂಲಕ ಅದು ಕೆರೆಗೆ ಸೇರದಂತೆ ಎಚ್ಚರಿಕೆ ವಹಿಸಿದೆ.

ಡಿ ನೋಟಿಫಿಕೇಷನ್ ಪ್ರಕರಣ

ದೀಪಾವಳಿ ಬಳಿಕ ಬಿಎಸ್‌ವೈಗೆ ಸಂಕಷ್ಟ?

ನವದೆಹಲಿ, ಅ.14– ಬೆಂಗಳೂರಿನ ದೇವನಹಳ್ಳಿಯಲ್ಲಿರುವ ಕೈಗಾರಿಕಾ ಪ್ರದೇಶದಲ್ಲಿ 26 ಎಕರೆ ಭೂಮಿಯನ್ನು ಡಿ ನೋಟಿಫಿಕೇಷನ್ ಮಾಡಿದ ಪ್ರಕರಣವನ್ನು ದೀಪಾವಳಿ ಬಳಿಕ ವಿಚಾರಣೆ ನಡೆಸಲಾಗುವುದು ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಯು.ಯು ಲಲಿತ್ ತಿಳಿಸಿದ್ದಾರೆ.



ತಮ್ಮ ವಿರುದ್ಧ ತನಿಖೆಗೆ ಸೂಚಿಸಿದ್ದ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನ್ಯಾ.ಯು.ಯು ಲಲಿತ್, ಈ ಹಿಂದೆ ಬಿ.ಎಸ್ ಯಡಿಯೂರಪ್ಪ ಪರವಾಗಿ ವಾದ ಮಂಡಿಸಿದ್ದರು. ಈ ಹಿನ್ನೆಲೆ ಅವರ ವಿರುದ್ಧದ ಪ್ರಕರಣವನ್ನು ವಿಚಾರಣೆ ನಡೆಸಲು ನಿರಾಕರಿಸಿದರು. ಬೇರೊಂದು ಪೀಠದಲ್ಲಿ ದೀಪಾವಳಿ ಬಳಿಕ ವಿಚಾರಣೆಗೆ ಪಟ್ಟಿ ಮಾಡಲಾಗುವುದು ಎಂದು ತಿಳಿಸಿದರು. ದೇವನಹಳ್ಳಿಯಲ್ಲಿರುವ ಕೈಗಾರಿಕಾ ಪ್ರದೇಶದಲ್ಲಿ 26 ಎಕರೆ ಭೂಮಿಯನ್ನು ಡಿ ನೋಟಿಫಿಕೇಷನ್ ಮಾಡಿರುವುದಾಗಿ ಆರೋಪಿಸಿ ಅಂದಿನ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ, ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ವಿರುದ್ಧ ಸಾಮಾಜಿಕ ಕಾರ್ಯಕರ್ತ ಅಲಂಪಾಷ ಲೋಕಾಯುಕ್ತಕ್ಕೆ ದೂರು ನೀಡಿದರು. ಪ್ರಕರಣ ವಿಚಾರಣೆ ನಡೆಸಿದ್ದ ಹೈಕೋರ್ಟ್ ತನಿಖೆಗೆ ಸೂಚಿಸಿತ್ತು. ಈ ಆದೇಶ ಪ್ರಶ್ನಿಸಿ ಬಿಎಸ್‌ವೈ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದಾರೆ.

ಮೈಸೂರು ಚಲೋ ಚಳವಳಿ ಸ್ಮರಣಾರ್ಥ ಸ್ವಾತಂತ್ರ್ಯ ಹೋರಾಟಗಾರರ ಮೆರವಣಿಗೆ

ಮೈಸೂರು, ಅ.4–ಸ್ವಾತಂತ್ರ್ಯದ ಹೋರಾಟದ ವೇಳೆ ನಡೆದ ಮೈಸೂರು ಚಲೋ ಚಳವಳಿ ಸ್ಮರಣಾರ್ಥ ಮೈಸೂರು ಜಿಲ್ಲೆ ಮತ್ತು ನಗರ ಸ್ವಾತಂತ್ರ್ಯ ಹೋರಾಟಗಾರರ ಸಂಘದ ವತಿಯಿಂದ ಅ.24ರಂದು ಮೆರವಣಿಗೆ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಗ್ಗೆ 10 ಗಂಟೆಗೆ ಸುಬ್ಬರಾಯನಕೆರೆ ಆವರಣದಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಸಂಘದಲ್ಲಿ ಕಾರ್ಯಕ್ರಮ ನಡೆಯಲಿದ್ದು, 11 ಗಂಟೆಗೆ ಮೆರವಣಿಗೆ ಹೊರಡುತ್ತದೆ. ಸುಬ್ಬರಾಯನಕೆರೆಯಿಂದ ಆರಂಭವಾಗುವ ಮೆರವಣಿಗೆಯಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ಸಾರೋಟ್‌ನಲ್ಲಿ ಸಾಗಿ ರಾಮಸ್ವಾಮಿ ವೃತ್ತಕ್ಕೆ ತೆರಳಿ ಮೈಸೂರು ಚಲೋ ಚಳವಳಿಯಲ್ಲಿ ಜೀವ ಬಲಿದಾನ ಮಾಡಿದ ಬಾಣಾವರದ ರಾಮಸ್ವಾಮಿ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದ ನಂತರ ಮೆರವಣಿಗೆಯು ರಾಮಸ್ವಾಮಿ ವೃತ್ತದಿಂದ ಸಂಸ್ಕೃತ ಪಾಠಶಾಲೆ ವೃತ್ತ, ಸಯ್ಯಾಜಿರಾವ್ ರಸ್ತೆ, ಜಗನ್ಮೋಹನ ಪ್ಯಾಲೇಸ್, ಹವೀಲಾ ಕಾನ್ವೆಂಟ್ ರಸ್ತೆ, ನಾರಾಯಣಶಾಸ್ತ್ರಿ ರಸ್ತೆ ಮೂಲಕ ಸುಬ್ಬರಾಯನಕೆರೆ ತಲುಪಲಿದೆ ಎಂದು ಸಂಘದ ಅಧ್ಯಕ್ಷ ವೈ.ಸಿ.ರೇವಣ್ಣ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮಳವಳ್ಳಿಯಲ್ಲಿ ಅಪ್ರಾಪ್ತ ಬಾಲಕಿ ಹತ್ಯೆಗೆ ಖಂಡನೆ

ಮೈಸೂರಲ್ಲಿ ಮೊಂಬತ್ತಿ ಬೆಳಗಿಸಿ ಶ್ರದ್ಧಾಂಜಲಿ



ಮೈಸೂರು ವಿವಿ ಸಂಶೋಧನಾ ವಿದ್ಯಾರ್ಥಿಗಳು ಮಾನಸ ಗಂಗೋತ್ರಿಯಲ್ಲಿ ಮೊಂಬತ್ತಿ ಬೆಳಗಿಸಿ ಶ್ರದ್ಧಾಂಜಲಿ ಸಲ್ಲಿಸಿದರು.



ಮೈಸೂರಿನ ಗಾಂಧಿ ವೃತ್ತದ ಬಳಿ ಟೀಂ ಮೈಸೂರು ಪ್ರತಿಷ್ಠಾನದ ವತಿಯಿಂದ ಮೃತ ಬಾಲಕಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಅ.14(ಎಸ್‌ಬಿಡಿ)– ಮಂಡ್ಯದ ಮಳವಳ್ಳಿಯಲ್ಲಿ ಅಪ್ರಾಪ್ತ ವಿದ್ಯಾರ್ಥಿನಿ ಮೇಲೆ ಕಾಮುಕ ಶಿಕ್ಷಕ ಅತ್ಯಾಚಾರವೆಸಗಿ, ಹತ್ಯೆ ಮಾಡಿರುವ ಘಟನೆಯನ್ನು ಮೈಸೂರಿನ ವಿವಿಧ ಸಂಘಟನೆಗಳು ಖಂಡಿಸಿ, ಮೇಣದ ದೀಪ ಬೆಳಗಿಸುವ ಮೂಲಕ ಮೃತ ಬಾಲಕಿಗೆ ಶ್ರದ್ಧಾಂಜಲಿ ಸಲ್ಲಿಸಿದವು.

'ಟೀಂ ಮೈಸೂರು ಪ್ರತಿಷ್ಠಾನ'ದ ವತಿಯಿಂದ ನಗರದ ಮಹಾತ್ಮ ಗಾಂಧಿ ವೃತ್ತದಲ್ಲಿ ಒಂದು ನಿಮಿಷ ಮೌನಾಚರಣೆ ಮಾಡಿ, ಮೊಂಬತ್ತಿ ಹೊತ್ತಿಸಿ ಬಾಲಕಿ ಆತ್ಮಕ್ಕೆ ಶಾಂತಿ ಕೋರಲಾಯಿತು. ಈ ಪೈಶಾಚಿಕ ಕೃತ್ಯವೆಸಗಿದ ಕಾಮುಕನನ್ನು ಕೂಡಲೇ ಗಲ್ಲಿಗೇರಿಸಬೇಕು. ಇಂತಹ ಕೃತ್ಯ ಮರುಕಳಿಸದಂತೆ ಶಿಕ್ಷೆಯನ್ನು ಕಠಿಣಗೊಳಿಸಬೇಕೆಂದು ಇದೇ ವೇಳೆ ಆಗ್ರಹಿಸಲಾಯಿತು.

ಈ ವೇಳೆ ಟೀಂ ಮೈಸೂರು ಸಂಚಾಲಕ ಗೋಕುಲ್ ಗೋವರ್ಧನ್, ಸಹ ಸಂಚಾಲಕ ಯಶವಂತ, ಬಿಜೆಪಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ಸೋಮಶೇಖರ್ ರಾಜು, ತಂಡದ ಅನಿಲ್ ಜೈನ್, ಕಿರಣ್ ಜೈರಾಮ್ ಗೌಡ, ಆನಂದ್, ಮುರಳಿ, ಲಿಂಗರಾಜು, ಯತೀಶ್, ಸುನೀಲ್, ಸುಮಂತ್, ಗಣೇಶ, ರಘು ಮತ್ತಿತರರಿದ್ದರು.

ವಿದ್ಯಾರ್ಥಿಗಳ ಖಂಡನೆ: ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘದ ವತಿಯಿಂದ ಮಾನಸ ಗಂಗೋತ್ರಿ ಗಡಿಯಾರ ಗೋಪುರದ ಬಳಿ ಮೃತ ಬಾಲಕಿಗೆ ಶ್ರದ್ಧಾಂಜಲಿ ಸಮರ್ಪಿಸಲಾಯಿತು. ಬಾಲಕಿ ಮೇಲೆ ಅತ್ಯಾಚಾರವೆಸಗಿ ಹತ್ಯೆ ಮಾಡಿರುವ ಪಾಪಿಗೆ ಕ್ಷಮೆಯೇ ಇಲ್ಲ. ಇಂತಹ ನೀಚ ಘಟನೆಗಳು ಮತ್ತೆ ನಡೆಯದಂತೆ ಪೊಲೀಸ್ ಇಲಾಖೆ ಎಚ್ಚರವಹಿಸಬೇಕೆಂದು ಶ್ರದ್ಧಾಂಜಲಿ ಸಭೆಯಲ್ಲಿದ್ದ ಸಂಶೋಧನಾ ವಿದ್ಯಾರ್ಥಿಗಳು ಆಗ್ರಹಿಸಿದರು.

ಸಂಘದ ಗೌರವಾಧ್ಯಕ್ಷ ಮಹೇಶ್ ಸೊಸ್ಲೆ, ಅಧ್ಯಕ್ಷ ನಟರಾಜ್ ಶಿವಣ್ಣ, ಉಪಾಧ್ಯಕ್ಷ ರಾಜೇಶ್, ಸಂಶೋಧನಾ ವಿದ್ಯಾರ್ಥಿಗಳಾದ ಪಾರ್ಥ, ರಾಘವೇಂದ್ರ, ನಂಜುಂಡಸ್ವಾಮಿ, ಪ್ರವೀಣ್, ರಂಗನಾಥ್, ನಾಗಮಲ್ಲು, ಮುತ್ತುರಾಜ್, ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.



ಭಾರತ ಐಕ್ಯತಾ ಯಾತ್ರೆ ಸಂದರ್ಭ ರಾಹುಲ್ ಗಾಂಧಿ ಹಾಗೂ ಸಿದ್ದರಾಮಯ್ಯ ಜೊತೆಗೂಡಿ ಓಡುತ್ತಿರುವ ಭಾವಚಿತ್ರವನ್ನು ಬಳ್ಳಾರಿ ಬಳಿ ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಸಿದ್ದರಾಮಯ್ಯನವರಿಗೆ ಕೆಪಿಸಿಸಿ ಸದಸ್ಯ ಕೆ.ಮರಿಗೌಡ, ಚಾಮುಂಡೇಶ್ವರಿ ಬ್ಲಾಕ್ ಅಧ್ಯಕ್ಷ ಎ.ಸತೀಶ್ ಕುಮಾರ್, ಪರಿಶಿಷ್ಟ ಜಾತಿ ವಿಭಾಗದ ಮೈಸೂರು ಜಿಲ್ಲಾ ಅಧ್ಯಕ್ಷ ಸಿದ್ದರಾಜು, ಡಿಸಿಸಿ ಸದಸ್ಯ ರವಿ.ಬಿ, ಮಣಿ ನೀಡಿ ಸಂಭ್ರಮಿಸಿದರು.

ಸೈಕಾಲಜಿ ಫಿಟ್‌ನೆಸ್ ಅಸೆಸ್‌ಮೆಂಟ್ ನೆಪದಲ್ಲಿ ಮೆಡಿಕಲ್ ಕಾಲೇಜು ಸಹಾಯಕ ಪ್ರಾಧ್ಯಾಪಕರ ಸುಲಿಗೆ

ಬಹುಮಾನದ ಆಸೆ ತೋರಿಸಿ ಮಹಿಳೆಗೆ ಮೋಸ

ಮೈಸೂರು, ಅ.14– ಸೇನಾಧಿಕಾರಿ ಎಂದು ಪರಿಚಯಿಸಿಕೊಂಡು ಐವತ್ತು ಮಂದಿಗೆ ಸೈಕಾಲಜಿ ಫಿಟ್‌ನೆಸ್ ಅಸೆಸ್‌ಮೆಂಟ್ ಮಾಡಿಸಿಕೊಡಬೇಕು ಎಂದು ಹೇಳಿ ಖಾಸಗಿ ವೈದ್ಯಕೀಯ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್‌ಗೆ ಆನ್‌ಲೈನ್ ಮೂಲಕ 1.25 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ.

ಕ್ರೈಂ ಬಾಕ್ಸ್

ಮೈಸೂರಿನ ಖಾಸಗಿ ಮೆಡಿಕಲ್ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿದ್ದು, ಸೈಕಾಲಜಿ ಕ್ಲಿನಿಕ್ ನಡೆಸುತ್ತಿರುವ ರಿತ್ವಿಕ್ ಎಸ್.ಕಶ್ಯಪ್ ಅವರನ್ನು ಸಂಪರ್ಕಿಸಿದ ವ್ಯಕ್ತಿಯು ತಾನು ಆರ್ಮಿಯವನೆಂದು ಪರಿಚಯಿಸಿಕೊಂಡು 50 ಮಂದಿಗೆ ಸೈಕಾಲಜಿ ಫಿಟ್‌ನೆಸ್ ಅಸೆಸ್‌ಮೆಂಟ್ ಮಾಡಿಸಿಕೊಡಬೇಕೆಂದು ಹೇಳಿ ಅವರಿಂದ ಆನ್‌ಲೈನ್ ಮೂಲಕ 1.25 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ.

ಮತ್ತೊಂದು ಪ್ರಕರಣದಲ್ಲಿ ಕನ್ನಡ ಮ್ಯಾಟ್ರಿಮೋನಿ ವೆಬ್‌ಸೈಟ್‌ನಲ್ಲಿ ಪರಮೇಶ್ ಪ್ರದೀಪ್ ಎಂಬ ಹೆಸರಿನಲ್ಲಿ ಹೂಟಗಳ್ಳಿಯಲ್ಲಿ ವಾಸವಿರುವ ಶಿಕ್ಷಕಿ ಬಿ.ಜೆ.ಕವಿತಾ(38) ಎಂಬುವರಿಗೆ ಪರಿಚಯವಾದ ವಂಚಕ ಉಡುಗೊರೆ ಕಳುಹಿಸುವುದಾಗಿ ತಿಳಿಸಿ ಹಂತ ಹಂತವಾಗಿ ಅವರಿಂದ ಆನ್‌ಲೈನ್ ಮೂಲಕ 4.45 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ.

ಇನ್ನೊಂದು ಪ್ರಕರಣದಲ್ಲಿ ಚಾಮುಂಡಿಪುರಂನಲ್ಲಿ ವಾಸವಿರುವ ಎಂಜಿನಿಯರ್ ಎ.ರಕ್ಷಿತ್(26) ಎಂಬುವರಿಗೆ ಟೆಲಿಗ್ರಾಂ ಆ್ಯಪ್ ಮೂಲಕ ಪರಿಚಯವಾದ ವ್ಯಕ್ತಿ ಟ್ರೇಡಿಂಗ್ ಮಾಡುವುದರ ಬಗ್ಗೆ ತಿಳಿಸಿ ವೆಬ್‌ಸೈಟ್‌ವೊಂದಕ್ಕೆ 56.39 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚನೆ ಎಸಗಿದ್ದಾನೆ. ಈ ಮೂರೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಸ್ನಾನ ಮಾಡುತ್ತಿದ್ದ ಮಹಿಳೆ ವೀಡಿಯೋ ಮಾಡಿದ ಎಫ್‌ಡಿಎ ವಿರುದ್ಧ ಪ್ರಕರಣ ದಾಖಲು

ಶ್ರೀರಂಗಪಟ್ಟಣ, ಅ.14–ತನ್ನ ಸಹೋದ್ಯೋಗಿ ಮಹಿಳೆಯ ಸೊಸೆ ಸ್ನಾನ ಮಾಡುತ್ತಿದ್ದಾಗ ಮೊಬೈಲ್‌ನಲ್ಲಿ ವಿಡಿಯೋ ಚಿತ್ರೀಕರಣ ಮಾಡಿದ ಆರೋಪದ ಮೇರೆಗೆ ಕೆಆರ್‌ಎಸ್‌ನಲ್ಲಿರುವ ಕಾಡಾ ಜಲ ಸಂಪನ್ಮೂಲ ಇಲಾಖೆಯ ಪ್ರಥಮ ದರ್ಜೆ ಸಹಾಯಕನ ಮೇಲೆ ಪ್ರಕರಣ ದಾಖಲಾಗಿದೆ.

ಕೆಆರ್‌ಎಸ್‌ನ ಕೆಇಆರ್‌ಎಸ್ ಕ್ವಾಟ್ರರ್ಸ್‌ನಲ್ಲಿ ವಾಸವಿರುವ ಪ್ರಥಮ ದರ್ಜೆ ಸಹಾಯಕ ಟಿ.ವಿ.ಸಂತೋಷ್ ಕುಮಾರ್(32) ಎಂಬಾತ ಅದೇ ಕ್ವಾಟ್ರರ್ಸ್‌ನಲ್ಲಿ ವಾಸವಿರುವ ಸಹೋದ್ಯೋಗಿ ಮಹಿಳೆಯ ಸೊಸೆ ಅ.5ರಂದು ಸಂಜೆ ಸ್ನಾನ ಮಾಡುತ್ತಿದ್ದಾಗ ಬಾತ್ ರೂಂನ ಕಿಟಕಿ ಮೂಲಕ ಇಣಕಿ ನೋಡಿದ್ದಲ್ಲದೇ ಮೊಬೈಲ್‌ನಲ್ಲಿ ಚಿತ್ರೀಕರಣ ಮಾಡಿದ್ದಾನೆ. ಇದನ್ನು ಗಮನಿಸಿದ ಮಹಿಳೆಯ ಸೊಸೆ ಕಿರುಚಿಕೊಂಡಾಗ ಆಕೆಯ ಪತಿ ಮತ್ತು ಅತ್ತೆ ಇದನ್ನು ಗಮನಿಸಿ ಓಡಿ ಹೋಗುತ್ತಿದ್ದ ಸಂತೋಷ್ ಕುಮಾರ್‌ನನ್ನು ಹಿಡಿದು ಆತನ ಕೈಯ್ಯಲ್ಲಿದ್ದ ಮೊಬೈಲ್ ಅನ್ನು ಕಿತ್ತುಕೊಂಡಿದ್ದಾರೆ. ಈ ಸಂಬಂಧ ಮಹಿಳೆಯು ಅ.9ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೆಆರ್‌ಎಸ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮಂಡ್ಯದ ಉಗ್ರಾಣ ನಿಗಮದಲ್ಲಿ 7.87 ಲಕ್ಷ ಮೌಲ್ಯದ ಪಡಿತರ ದುರುಪಯೋಗ

ಮಂಡ್ಯ, ಅ.14–ಮಂಡ್ಯದ ಕೇಂದ್ರಿಯ ಉಗ್ರಾಣ ನಿಗಮದಲ್ಲಿ ಸಂಗ್ರಹಿಸಿದ್ದ 7.87 ಲಕ್ಷ ರೂ. ಮೌಲ್ಯದ ಪಡಿತರ ಧಾನ್ಯಗಳನ್ನು ಅಲ್ಲಿನ ಉದ್ಯೋಗಿಗಳೇ ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ ಮಂಡ್ಯ ಸೆಂಟ್ರಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಉಗ್ರಾಣದ ಮೇಲ್ವಿಚಾರಕರಾಗಿರುವ ಜೂನಿಯರ್ ಸೂಪರಿಂಟೆಂಡೆಂಟ್ ಕೆ.ಎಂ.ವೆಂಕಟೇಶ್, ಉಗ್ರಾಣದ ಸಹಾಯಕರಾಗಿರುವ ಎಸ್.ಎಚ್.ಜಿಲಾನಿ ಮತ್ತು ಜಿ.ಪ್ರಸನ್ನ ಆರೋಪಕ್ಕೆ ಗುರಿಯಾಗಿರುವವರು.

ವಿವರ: ಸಾರ್ವಜನಿಕರಿಗೆ ವಿತರಣೆ ಮಾಡುವ ಪಡಿತರ ಧಾನ್ಯಗಳನ್ನು ಮಂಡ್ಯ ಮೈಸೂರು ಸಕ್ಕರೆ ಕಾರ್ಖಾನೆ ಪಕ್ಕದಲ್ಲಿರುವ ಕೇಂದ್ರಿಯ ಉಗ್ರಾಣ ನಿಗಮದಲ್ಲಿ ಸಂಗ್ರಹಿಸಿ, ನಂತರ ಸರಬರಾಜು ಮಾಡಲಾಗುತ್ತದೆ. 6 ತಿಂಗಳು ಅಥವಾ ವರ್ಷಕ್ಕೊಮ್ಮೆ ದೆಹಲಿಯಿಂದ ವಿಜಿಲೆನ್ಸ್ ಅಧಿಕಾರಿಗಳು ಆಗಮಿಸಿ ಪರಿವೀಕ್ಷಣೆ ಮಾಡುತ್ತಾರೆ. ಅದರಂತೆ ಕಳೆದ ಸೆ.2ರಂದು ಅಧಿಕಾರಿಗಳು ಪರಿವೀಕ್ಷಣೆಗೆ ಬಂದಾಗ ಅಕ್ಕಿ ದಾಸ್ತಾನಿನಲ್ಲಿ ವ್ಯತ್ಯಾಸ ಕಂಡು ಬಂದಿದ್ದು, ಈ ಹಿನ್ನೆಲೆಯಲ್ಲಿ ಬೆಂಗಳೂರಿನ ಕೇಂದ್ರೀಯ ಉಗ್ರಾಣ ನಿಗಮದ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ರಾಹುಲ್ ನಾರಾಯಣ ಗಾಯಕ್ವಾಡ್ ನೇತೃತ್ವದಲ್ಲಿ ಆಡಿಟ್ ನಡೆದಿದೆ. ಈ ವೇಳೆ 2022ರ ಮಾ.10ರಂದು ತಲಾ 10 ಕೆಜಿಯ 285 ಚೀಲ ಅಕ್ಕಿ (19,270 ಕೆಜಿ) ಲಾರಿ ವ್ಯಾಗನ್‌ನಿಂದ ಲಾರಿ (ಕೆಎ 10 2509)ಯಲ್ಲಿ ಉಗ್ರಾಣಕ್ಕೆ ಕಳುಹಿಸಲಾಗಿದೆ. ಆದರೆ ಆರೋಪಿಗಳು ಉಗ್ರಾಣಕ್ಕೆ 211 ಚೀಲ (11,410 ಕೆಜಿ) ಮಾತ್ರ ಬಂದಿರುವುದಾಗಿ ನಮೂದು ಮಾಡುವ ಮೂಲಕ 7860 ಕೆಜಿ ಅಕ್ಕಿಯನ್ನು ಕಡಿಮೆ ತೋರಿಸಿದ್ದಾರೆ. ಅಲ್ಲದೇ ಒಟ್ಟಾರೆ ಸರ್ಕಾರಿ ದರ 7,87,850 ರೂ. ಮೌಲ್ಯದ 22,510 ಕೆಜಿ(453 ಚೀಲ) ಅಕ್ಕಿಯನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮಂಡ್ಯ ಸೆಂಟ್ರಲ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಹೊಸೂರಿನಲ್ಲಿ ರಾಸಾಯನಿಕ ಬಾಯ್ಲರ್ ಸ್ಫೋಟ: 150ಕ್ಕೂ ಹೆಚ್ಚು ಮಕ್ಕಳು ಆಸ್ಪತ್ರೆಗೆ ದಾಖಲು

ಹೊಸೂರು, ಅ.14– ತಮಿಳುನಾಡು ಮತ್ತು ಕರ್ನಾಟಕ ಗಡಿ ಭಾಗದಲ್ಲಿ ಕೆಮಿಕಲ್ ಬಾಯ್ಲರ್ ಸ್ಫೋಟಗೊಂಡು ರಾಸಾಯನಿಕ ಸೋರಿಕೆಯಾದ ಪರಿಣಾಮ ಉಸಿರಾಟ ತೊಂದರೆಯಾಗಿ 150ಕ್ಕೂ ಹೆಚ್ಚು ಮಕ್ಕಳು ಆಸ್ಪತ್ರೆಗೆ ದಾಖಲಾಗಿದ್ದಾರೆ. ಹೊಸೂರು ಪಟ್ಟಣದಲ್ಲಿ ಖಾಸಗಿ ಕಾರ್ಖಾನೆ ರಾಸಾಯನಿಕ ಬಾಯ್ಲರ್ ಸ್ಫೋಟಗೊಂಡ ಪರಿಣಾಮ ರಾಸಾಯನಿಕ ಸೋರಿಕೆಯಾಗಿದೆ. ಇದರಿಂದ ಗಾಳಿಯಲ್ಲಿ ರಾಸಾಯನಿಕ ಹರಡಿಕೊಂಡಿದೆ. ಇದರಿಂದ ಕಾರ್ಖಾನೆ ಮುಂಭಾಗದಲ್ಲಿರುವ ಕಾರ್ಪೋರೇಷನ್ ಶಾಲೆಯ 150ಕ್ಕೂ ಹೆಚ್ಚಿನ ಮಕ್ಕಳು ಉಸಿರಾಟ ತೊಂದರೆಯಿಂದ ಬಳಲುತ್ತಿದ್ದಾರೆ. ಕೂಡಲೇ ಮಕ್ಕಳನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಧಾರ್ಮಿಕ ಚಟುವಟಿಕೆಗಳಿಗೆ ಹೊಸ ಸ್ವರೂಪ

ಮಹಾ ಕುಂಭಮೇಳದ ಉತ್ಸವ, ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ





ಕೆ.ಆರ್.ಪೇಟೆ,ಅ.14– ಮೂರು ನದಿಗಳು ಸಂಗಮವಾಗುವ ಸ್ಥಳದಲ್ಲಿ ಮಹಾ ಕುಂಭ ಮೇಳವನ್ನು ಮಾಡುವುದರ ಮೂಲಕ ಈ ಭಾಗದ ಎಲ್ಲಾ ಜನರನ್ನು ಜಾಗೃತಗೊಳಿಸುವ ಕೆಲಸವಾಗಿದೆ. ಕೆ.ಆರ್.ಪೇಟೆಯಲ್ಲಿ ಧಾರ್ಮಿಕ ಚಟುವಟಿಕೆಗೆ ಹೊಸ ಸ್ವರೂಪವನ್ನು ನೀಡಲಾಗುತ್ತಿದೆ ಎಂದು ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ವಿ.ಸುನೀಲ್ ಕುಮಾರ್ ತಿಳಿಸಿದರು.

ಮಹಾಕುಂಭಮೇಳದ ಅಂಗವಾಗಿ ಕೆ.ಆರ್.ಪೇಟೆಯಲ್ಲಿ ನಡೆದ ಮಂಡ್ಯ ಜಿಲ್ಲೆಯ ಉತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದ ಅವರು, ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಸಂಗಮ ನಿರ್ಮಾಣವಾಗಿರುವ ಹಿನ್ನೆಲೆ ಕುಂಭಮೇಳ ಕಾರ್ಯಕ್ರಮ ಮಾಡಿ ಈ ಸಂಗಮವನ್ನು ದೊಡ್ಡ ಪ್ರಮಾಣದಲ್ಲಿ ಜನರಿಗೆ ಪರಿಚಯಿಸುವ ನಿಟ್ಟಿನಲ್ಲಿ ನಾಡಿನ ಸಾಧು ಸಂತರನ್ನು ಆಹ್ವಾನಿಸಿ ಕುಂಭಮೇಳದ ಮಹತ್ವವನ್ನು ತಿಳಿಸುವಂತಹ ಉತ್ತಮ ಕಾರ್ಯಕ್ರಮವನ್ನು ಡಾ.ನಾರಾಯಣಗೌಡ ಅವರು ಮಾಡುತ್ತಿದ್ದಾರೆ ಎಂದು ಹೇಳಿದರು.

ಭಾರತದ ಸಂಸ್ಕೃತಿ ನಿಂತಿರುವುದು ಧಾರ್ಮಿಕತೆಯ ತಳಅದಿಯಲ್ಲಿ. ಸಾಂಸ್ಕೃತಿಕವಾಗಿ ಭಾರತ ಶ್ರೀಮಂತವಾಗಿರುವ ಹಿನ್ನಲೆಯಲ್ಲಿ ಜಗತ್ತಿನ ಎಲ್ಲ ಜನರು ಭಾರತವನ್ನು ನೋಡಲು ಬರುತ್ತಾರೆ. ಭಾರತದಲ್ಲಿರುವ ಸಾಂಸ್ಕೃತಿಕ ಚಟುವಟಿಕೆಗಳು,ಧಾರ್ಮಿಕತೆಯ ಆಚರಣೆಗಳು, ನದಿ ಪರ್ವತವನ್ನು ಪೂಜಿಸುವ ಪದ್ಧತಿಗಳು ಇದೆ. ಬೇರೆ ದೇಶಗಳಲ್ಲಿ ಈ ರೀತಿಯ ಸಂಸ್ಕೃತಿಗಳು ಇಲ್ಲ. ಆಗಾಗಿ ನಮ್ಮ ಭಾರತ ದೇಶವನ್ನು ಇತರೆ ದೇಶಗಳ ಗೌರವಿಸುತ್ತದೆ ಎಂದು ಹೇಳಿದರು.

ಮೂರು ನದಿಗಳು ಸಂಗಮವಾಗುವ ತ್ರಿವೇಣಿ ಸಂಗಮವು ಕೆ.ಆರ್ ಪೇಟೆಯಲ್ಲಿ ಇರುವುದು ನಿಜಕ್ಕೂ ಪುಣ್ಯವಾಗಿದೆ. ಈ ಸಂಗಮವನ್ನು ಉಳಿಸಿ, ಇನ್ನಷ್ಟು ವಿಸ್ತರಿಸುತ್ತಾ ಬೆಳೆಸಿಕೊಂಡು ಹೋಗುವಂತಹ ಕೆಲಸವನ್ನು ಮಾಡೋಣ. ಕುಂಭಮೇಳವನ್ನು ಗ್ರಾಮೀಣ ಭಾಗದಲ್ಲಿ ಮಾಡುವ ಮೂಲಕ ಧಾರ್ಮಿಕ ಆಚರಣೆಗಳು, ಸಾಂಸ್ಕೃತಿಕ ಹಿರಿಮೆಯನ್ನು ಇದರಿಂದ ಹೆಚ್ಚು ಮಾಡುವುದರ ಜೊತೆ ಯಲ್ಲಿ ಮನಸಿನೊಳಗಿರುವಂತಹ ಧಾರ್ಮಿಕ ಜಾಗೃತಿಯನ್ನು ಮಾಡುವ ಉತ್ತಮ ಪ್ರಯತ್ನ ಈ ಕಾರ್ಯ ಕ್ರಮಲ್ಲಿ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಮಾತನಾಡಿ, 9 ವರ್ಷದ ನಂತರ ಕುಂಭ ಮೇಳವನ್ನು ಮಾಡಲಾಗುತ್ತಿದೆ. ಮಧ್ಯಮ ಕುಟುಂಬ, ಬಡ ಕುಟುಂಬ ವಿದ್ಯಾವಂತರ ಪ್ರತಿನಿತ್ಯ ಮನೆಯಲ್ಲಿ ದೇವರನ್ನು ಪೂಜಿಸುವ ಸಂಸ್ಕಾರ ನಮ್ಮದು. ಮೂರು ನದಿಗಳು ಸೇರು ವಂತಹ ಈ ಪವಿತ್ರ ಸ್ಥಳದಲ್ಲಿ ಬಂದಂತ ಮಲೆ ಮಹದೇಶ್ವರರು ಪಾದ ಸ್ಪರ್ಶ ಮಾಡಿರುವಂತಹ ಪುಣ್ಯವಾದ ಸ್ಥಳವಾಗಿದೆ ಎಂದರು.

ಕುಂಭಮೇಳಕ್ಕೆ 40ಕ್ಕಿಂತ ಹೆಚ್ಚು ಮಠಾಧೀಶರು ಹೊರ ರಾಜ್ಯ, ಜಿಲ್ಲೆಗಳಿಂದ ಸಾಧುಸಂತರರು ಬರುವ ಪುಣ್ಯ ಸ್ಥಳವಾಗಿದೆ ಎಂದು ಕಾರ್ಯಕ್ರಮವನ್ನು ರೂಪಿಸಿ ಡಾ.ನಾರಾಯಣಗೌಡ ಅವರ ನೇತೃತ್ವದಲ್ಲಿ ಕುಂಭಮೇಳ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ. ಮಹದೇಶ್ವರ ದೇವಸ್ಥಾನವನ್ನು ಪ್ರತಿಷ್ಠಾಪನೆ ಮಾಡಿದ ನಂತರ ಪ್ರತಿನಿತ್ಯ ಪೂಜೆ ಮಾಡಬೇಕು. ಶಾಶ್ವತವಾದ ಕಾರ್ಯಕ್ರಮವನ್ನು ರೂಪಿಸುವುದಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ ಎಂದರು.

ಜಿಲ್ಲೆಯ ಅಭಿವೃದ್ಧಿಗೆ ಮುಖ್ಯಮಂತ್ರಿಗಳು ಹಾಗೂ ಸಚಿವರು ಸಾಕಷ್ಟು ಅನುದಾನವನ್ನು ನೀಡಿದ್ದಾರೆ. ಡಿಸೆಂಬರ್ ಜನವರಿ ತಿಂಗಳ ಒಳಗೆ ರಸ್ತೆಗಳ ಕಾಮಗಾರಿ ಮುಗಿಯುತ್ತದೆ. ಜಿಲ್ಲೆಯಲ್ಲಿ ಮೈಶುಗರ್ ಕಾರ್ಖಾನೆಯೂ ಉಳಿಯಬೇಕು ಇದರಿದ ರೈತರಿಗೆ ಅನುಕೂಲವಾಗಬೇಕು ಎಂಬ ಉದ್ದೇಶದಿಂದ ಪ್ರಾಮಾಣಿಕವಾದ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರೇಷ್ಮೆ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ, ಜಿಲ್ಲಾಧಿಕಾರಿ ಎಸ್.ಅಶ್ವತಿ, ಜಿ.ಪಂ. ಸಿಇಓ ಶಾಂತ ಎಲ್.ಹುಲ್ಮನಿ, ಉಪವಿಭಾಗಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ತಹಶೀಲ್ದಾರ್ ರೂಪ, ಮೂಡಾ ಅಧ್ಯಕ್ಷ ಶ್ರೀನಿವಾಸ್, ಆಳ್ವಾಸ್ ಸಂಸ್ಥೆಯ ಮುಖ್ಯಸ್ಥ ಮೋಹನ್ ಆಳ್ವಾಸ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮಳವಳ್ಳಿಯಲ್ಲಿ ಬಾಲಕಿ ಮೇಲೆ ಅತ್ಯಾಚಾರ, ಹತ್ಯೆ ಪ್ರಕರಣ

ಆರೋಪಿ ಟ್ಯೂಷನ್ ಟೀಚರ್‌ಗೆ ನ್ಯಾಯಾಂಗ ಬಂಧನ

- ತ್ವರಿತಗತಿಯಲ್ಲಿ ವಿಚಾರಣೆ ನಡೆಸುವಂತೆ ಎಡಿಜಿಪಿ ಸೂಚನೆ
- ಆರೋಪಿಗೆ ಗಲ್ಲು ಶಿಕ್ಷೆ ವಿಧಿಸಲು ಬಾಲಕಿಯ ಕುಟುಂಬಸ್ಥರ ಆಗ್ರಹ
- ಬಾಲಕಿ ನಿವಾಸಕ್ಕೆ ಸಚಿವರಾದ ಅಶ್ವತ್ಥ್, ಗೋಪಾಲಯ್ಯ, ನಿಖಿಲ್ ಭೇಟಿ



ಮಂಡ್ಯ/ಮಳವಳ್ಳಿ,ಅ.14– ಕಳೆದ ಮಂಗಳವಾರ ಮಳವಳ್ಳಿ ಪಟ್ಟಣದ ನಿರ್ಮಾಣ ಹಂತದ ಕಟ್ಟಡದಲ್ಲಿ ಅತ್ಯಾಚಾರಕ್ಕೊಳಗಾಗಿ ಹತ್ಯೆಯಾಗಿದ್ದ 10 ವರ್ಷದ ಬಾಲಕಿ ಪ್ರಕರಣಕ್ಕೆ ಸಂಬಂಧಿಸಿದಂತೆ ಟ್ಯೂಷನ್ ಟೀಚರ್ ಕಾಂತರಾಜು ವಿರುದ್ಧ ಪೋಕ್ಸೋ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಅ.11ರಂದು ಟ್ಯೂಷನ್‌ಗೆ ಹೋಗಿ ಬರುವುದಾಗಿ ತೆರಳಿದ್ದ ಬಾಲಕಿ ನಾಪತ್ತೆಯಾಗಿದ್ದಳು. ಬಳಿಕ ಶವವಾಗಿ ಪತ್ತೆಯಾಗಿದ್ದಳು. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ಪೊಲೀಸರು ಬಾಲಕಿಯ ಪೋಷಕರ ದೂರಿನಂತೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಟ್ಯೂಷನ್ ಟೀಚರ್ ಕಾಂತರಾಜುನನ್ನು ಮಳವಳ್ಳಿ ಟೌನ್ ಪೊಲೀಸರು ವಶಕ್ಕೆ ಪಡೆದಿದ್ದರು.

ಈ ಬಗ್ಗೆ ಮಂಡ್ಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಅ.11 ರಂದು ಟ್ಯೂಷನ್ ಇದೆಯಾ ಎಂದು ಬಾಲಕಿ ಕಾಂತರಾಜುಗೆ ಫೋನ್ ಮಾಡುತ್ತಾಳೆ. ಮೊದಲು ಸಂಜೆ ಟ್ಯೂಷನ್ ಇರುವುದಾಗಿ ಹೇಳುವ ಆತ ಬಳಿಕ ದಸರಾ ರಜೆ ಇದೆಯಾ ಎಂದು ಕೇಳಿ ನಂತರ 11 ಗಂಟೆಗೆ ಟ್ಯೂಷನ್‌ಗೆ ಬರಲು ಸೂಚಿಸುತ್ತಾನೆ. ಶಿಕ್ಷಕನ ಅಣತಿಯಂತೆ ಬಾಲಕಿ, ಬೆಳಗ್ಗೆ 11ಕ್ಕೆ ಟ್ಯೂಷನ್‌ಗೆ ತೆರಳಿದಾಗ ಆತ ಬಾಲಕಿಗೆ ಚಾಕೊಲೇಟ್ ಕೊಡಿಸುವುದಾಗಿ ಮಳವಳ್ಳಿ ಪಟ್ಟಣದ ಮೈಸೂರು ರಸ್ತೆಯಲ್ಲಿರುವ ನಿರ್ಮಾಣ ಹಂತದ ಕಟ್ಟಡಕ್ಕೆ ಕರೆದುಕೊಂಡು ಹೋಗುತ್ತಾನೆ ಎಂದು ವಿವರಿಸಿದರು.

ಬಳಿಕ ಆತ ಬಾಲಕಿಯ ಮೇಲೆ ಅಮಾನುಷವಾಗಿ ಲೈಂಗಿಕ ದೌರ್ಜನ್ಯ ನಡೆಸಿ, ಆಕೆಯನ್ನು ಹತ್ಯೆ ಮಾಡಿ ಬಳಿಕ ಪಕ್ಕದಲ್ಲೇ ಇದ್ದ ಸಂಪ್‌ಗೆ ಎಸೆದು ಬಾಲಕಿ ಕಾಣುತ್ತಿಲ್ಲ ಎಂದಾಗ ತಾನು ಸಹ ಅನುಮಾನ ಬಾರದಂತೆ ಬಾಲಕಿಯನ್ನು ಹುಡುಕುವ ನೆಪದಲ್ಲಿ ಕಳ್ಳಾಟವಾಡಿದ್ದು, ಬಳಿಕ ಪೊಲೀಸರ ಮುಂದೆ ತಪ್ಪೊಪ್ಪಿಕೊಂಡಿದ್ದಾನೆ ಎಂದು ಅವರು ಹೇಳಿದರು.

ಅತ್ಯಾಚಾರವಾದ ಜಾಗದಲ್ಲಿ ಕೆಲವು ಕುರುಹುಗಳು ಹಾಗೂ ಸೂಕ್ತ ಸಾಕ್ಷಿಗಳು ಪತ್ತೆಯಾದ ಹಿನ್ನೆಲೆಯಲ್ಲಿ ಆರೋಪಿಯನ್ನು ಪತ್ತೆ ಹಚ್ಚಲು ಸುಲಭವಾಯಿತು ಎಂದ ಅವರು, ಆತನ ಮೇಲೆ ಆರೋಪ ಸಾಬೀತಾದ ಬಳಿಕ ದಾಖಲು ಮಾಡಿದ್ದ ಎಫ್‌ಐಆರ್‌ಗೆ ಪೋಕ್ಸೋ ಹಾಗೂ ಅತ್ಯಾಚಾರ ಪ್ರಕರಣವನ್ನು ದಾಖಲಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದೇವೆ. ತನಿಖೆ ಮುಂದುವರೆದಿದೆ ಎಂದು ತಿಳಿಸಿದರು.

ಆರೋಪಿಯನ್ನು ನಿನ್ನೆ ಮಹಜರು ಪಡಿಸಿದ ಬಳಿಕ ಹೆಚ್ಚಿನ ವಿಚಾರಣೆಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಬಳಿಕ ಆತನಿಗೆ ನ್ಯಾಯಾಲಯ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿದ್ದು, ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಇನ್ನು ಈತ ಅತ್ಯಾಚಾರ ಹಾಗೂ ಕೊಲೆ ಮಾಡಿರುವುದನ್ನು ಒಪ್ಪಿಕೊಂಡಿರುವುದರಿಂದ ಎಲ್ಲಾ ಸಾಕ್ಷಿಗಳನ್ನು ಮಳವಳ್ಳಿ ಟೌನ್ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

ತ್ವರಿತಗತಿಯಲ್ಲಿ ವಿಚಾರಣೆಗೆ ಎಡಿಜಿಪಿ ಸೂಚನೆ: ಇನ್ನು ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಎಡಿಜಿಪಿ ಅಲೋಕ್ ಕುಮಾರ್, ತ್ವರಿತಗತಿಯಲ್ಲಿ ವಿಚಾರಣೆ ನಡೆಸಿ, ತ್ವರಿತ ನ್ಯಾಯಾಲಯದ ಮೂಲಕ ಆರೋಪಿಗೆ ಅತಿಬೇಗ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕೆಂದು ಮಂಡ್ಯ ಎಸ್ಪಿ ಯತೀಶ್‌ಗೆ ಸೂಚಿಸಿದ್ದಾರೆ.

ಆರೋಪಿಗೆ ಗಲ್ಲು ಶಿಕ್ಷೆಗೆ ಕುಟುಂಬಸ್ಥರ ಒತ್ತಾಯ: ಇನ್ನು ಆರೋಪಿ ಕಾಂತರಾಜುಗೆ ಗಲ್ಲು ಶಿಕ್ಷೆ ವಿಧಿಸಬೇಕು. ಆಗ ಮಾತ್ರ ಆಕೆಯ ಆತ್ಮಕ್ಕೆ ಶಾಂತಿ, ನಮ್ಮ ಕುಟುಂಬಕ್ಕೆ ನೆಮ್ಮದಿ ಸಿಗಲಿದೆ ಎಂದು ಕುಟುಂಬಸ್ಥರು ಅಳಲು ತೋಡಿಕೊಂಡಿದ್ದಾರೆ.

ನಮ್ಮ ಮಗಳು ಡಾಕ್ಟರ್ ಆಗುವ ಕನಸು ಹೊಂದಿದ್ದಳು. ಆದರೆ ಆಕೆಯ ಕನಸು ಈಗ ನುಚ್ಚು ನೂರಾಗಿದೆ. ನಮ್ಮ ಮಗಳಿಗೆ ಹಿಂಸೆ ನೀಡಿ ಹತ್ಯೆ ಮಾಡಿದ್ದಾನೆ. ಆ ಹಿಂಸೆ ಅವನಿಗೂ ಕೊಟ್ಟು, ಗಲ್ಲಿಗಾಕಬೇಕು. ಪ್ರಧಾನಿ ನರೇಂದ್ರ ಮೋದಿಗೂ ಈ ಬಗ್ಗೆ ಮನವಿ ಮಾಡುವೆ ಎಂದು ದಿವ್ಯ ತಂದೆ, ತಾಯಿ ಆಕ್ರೋಶ ವ್ಯಕ್ತಪಡಿಸಿದರು.

ಬಾಲಕಿ ನಿವಾಸಕ್ಕೆ ಭೇಟಿ: ಬಾಲಕಿ ನಿವಾಸಕ್ಕೆ ಸಚಿವರುಗಳಾದ ಡಾ.ಅಶ್ವತ್ಥ ನಾರಾಯಣ, ಗೋಪಾಲಯ್ಯ, ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರ್‌ಸ್ವಾಮಿ ಅವರುಗಳು ಭೇಟಿ ನೀಡಿ ಸಾಂತ್ವನ ಹೇಳಿದರಲ್ಲದೆ, ಆರೋಪಿಗೆ ಕಠಿಣ ಶಿಕ್ಷೆ ಆಗಲಿದೆ ಎಂದು ತಿಳಿಸಿದರು.

ಭಾರೀ ಮಳೆ: ಅಪಾಯದ ಸ್ಥಿತಿಯಲ್ಲಿ ತೊಣ್ಣೂರುಕೆರೆ

ಅಪಾರ ಪ್ರಮಾಣದ ಬೆಳೆ ಹಾನಿ, ಶಾಸಕ ಸಿ.ಎಸ್.ಪುಟ್ಟರಾಜು ಭೇಟಿ, ಪರಿಶೀಲನೆ

ಪಾಂಡವಪುರ, ಅ.14– ಕಳೆದ ರಾತ್ರಿ ಸುರಿದ ಭಾರೀ ಮಳೆಗೆ ತಾಲೂಕಿನ ವಿವಿಧೆಡೆ ಕೆರೆ–ಕಟ್ಟೆಗಳು ಉಕ್ಕಿ ಹರಿದಿದ್ದು, ಅಪಾರ ಪ್ರಮಾಣದ ನಷ್ಟ ಸಂಭವಿಸಿದೆ.

ತಾಲೂಕಿನ ಐತಿಹಾಸಿಕ ತೊಣ್ಣೂರುಕೆರೆ ಉಕ್ಕಿ ಹರಿದಿದ್ದು, ಅಪಾಯದ ಸ್ಥಿತಿಯಲ್ಲಿದೆ. ರಾತ್ರಿಯಿಡಿ ಧಾರಾಕಾರವಾಗಿ ಮಳೆ ಸುರಿದ ಹಿನ್ನೆಲೆಯಲ್ಲಿ ಕೆರೆಗೆ ಒಳ ಹರಿವಿನ ಪ್ರಮಾಣ ಹೆಚ್ಚಾಗಿ ಕೋಡಿ ಬಿದ್ದಿದೆ. ನೀರು ಉಕ್ಕಿ ಹರಿದು ಅನಾಹುತ ಸಂಭವಿಸಿದೆ. ಕೋಡಿ ನೀರು ಅಧಿಕ ಪ್ರಮಾಣದಲ್ಲಿ ಹರಿದ ಹಿನ್ನೆಲೆಯಲ್ಲಿ ಕೆರೆಯ ಏರಿಯ ಮೇಲೆ ಹೋಗುವ ರಸ್ತೆ ತುಂಬೆಲ್ಲಾ ನೀರು ಹರಿದು ಅಪಾಯ ಸೃಷ್ಟಿಸಿದೆ. ಅಧಿಕ ಪ್ರಮಾಣದಲ್ಲಿ ಕೋಡಿಬಿದ್ದಿರುವುದರಿಂದ ರೈತರ ಅಪಾರ ಪ್ರಮಾಣದ ಬೆಳೆ ನಷ್ಟವಾಗಿದೆ. ಒಂದು ವೇಳೆ ಶುಕ್ರವಾರ ರಾತ್ರಿಯೂ ಸಹ ಇದೇ ರೀತಿಯಲ್ಲಿ ಮಳೆ ಸುರಿದರೆ ಸಾವಿರ ವರ್ಷ ಇತಿಹಾಸವಿರುವ ತೊಣ್ಣೂರುಕೆರೆಗೆ ಅಪಾಯ ಉಂಟಾಗುವ ಸಾಧ್ಯತೆ ಇದೆ.



ಶಾಸಕರು ಭೇಟಿ: ತೊಣ್ಣೂರು ಕೆರೆ ಉಕ್ಕಿ ಹರಿದು ಅನಾಹುತ ಸಂಭವಿಸಿರುವ ವಿಷಯ ತಿಳಿದ ಶಾಸಕ ಸಿ.ಎಸ್.ಪುಟ್ಟರಾಜು ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕೆರೆಯ ಏರಿಯ ಮೇಲೆ ರಸ್ತೆಗಳ ಮೇಲೆ ನೀರು ಹರಿದು ಬರುತ್ತಿದ್ದು, ನೀರಿನಲ್ಲಿಯೇ ಕೆರೆ ಏರಿಯ ಮೇಲೆ ಹೋಗಿ ಪರಿಶೀಲನೆ ನಡೆಸಿದರು. ಇದಕ್ಕೂ ಮೊದಲು ತಹಸೀಲ್ದಾರ್ ನಯನ ಅವರು ಸಹ ಭೇಟಿ ನೀಡಿ ಪರಿಶೀಲಿಸಿದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಕಳೆದ ರಾತ್ರಿ ಸುರಿದ ಧಾರಾಕಾರ ಮಳೆಯಿಂದಾಗಿ ತೊಣ್ಣೂರುಕೆರೆ ಅಧಿಕ ಪ್ರಮಾಣದಲ್ಲಿ ನೀರು ಹರಿದು ಅಪಾಯದ ಅಂಚಿನಲ್ಲಿದೆ. ಕೆರೆ ಪರಿಶೀಲನೆ ನಡೆಸಿ ಹೆಚ್ಚುವರಿ ನೀರನ್ನು ಕೆರೆಯಿಂದ ಹೇಗೆ ಹೊರಗಡೆ ಹೋಗುವಂತೆ ಕ್ರಮವಹಿಸಲು ಅಧಿಕಾರಿಗಳು ಹಾಗೂ ನೀರಾವರಿ ತಜ್ಞರು ಆಗಮಿಸುತ್ತಿದ್ದಾರೆ. ಕಳೆದ ಬಾರಿಯೂ ಸಹ ಇದೇ ರೀತಿ ಮಳೆಯಾಗಿ ನೀರು ಬಂದು ಅವಾಂತರ ಸೃಷ್ಟಿಸಿತ್ತು. ಆ ವೇಳೆ ಕೆರೆಗೆ ಬರುವ ಅಧಿಕ ನೀರನ್ನು ಹೊರಗಡೆ ಹೋಗುವಂತೆ ಮಾಡಲು ಕ್ರಮವಹಿಸಲಾಗಿತ್ತು ಎಂದರು.

ಲಕ್ಷ್ಮೀ ಸಾಗರ ಹಾಗೂ ತೊಣ್ಣೂರು ಕೆರೆ ಗ್ರಾಮಕ್ಕೆ ಅಪಾಯ ಎದುರಾಗಿದೆ, ಜತೆಗೆ ನೂರಾರು ಎಕರೆ ರೈತರ ಬೆಳೆ ನಷ್ಟವಾಗಿದೆ. ಮನೆಗಳಿಗೆ ಹಾನಿಯುಂಟಾಗುತ್ತಿದೆ. ಮನೆ ಹಾನಿ ಹಾಗೂ ಬೆಳೆ ಹಾನಿಯಾಗಿರುವ ಜನರಿಗೆ ಪರಿಹಾರ ಕೊಡಲು ಕ್ರಮವಹಿಸಲಾಗಿದೆ. ನಾಳೆಯೂ ಸಹ ಇದೇ ಪ್ರಮಾಣದಲ್ಲಿ ಮಳೆಯಾದರೆ ತೊಣ್ಣೂರು ಕೆರೆಗೆ ಬಹಳ ತೊಂದರೆ ಯಾಗುವ ಸನ್ನಿವೇಶವಿದೆ. ಪ್ರವಾಹದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರಿಗೂ ಸಹ ಮಾಹಿತಿ ನೀಡಿದ್ದು ಸ್ಥಳಕ್ಕೆ ಆಗಮಿಸು ತ್ತಿದ್ದಾರೆ. ಏನೇ ಆದರೂ ಕೆರೆ ಅಕ್ಕಪಕ್ಕ ಗ್ರಾಮಗಳ ನಿವಾಸಿಗಳು ಎಚ್ಚರಿಕೆಯಿಂದ ಇರಬೇಕು ಎಂದು ಮನವಿ ಮಾಡಿದರು.



ಹುಟ್ಟುಹಬ್ಬ ಆಚರಿಸಿಕೊಂಡ ಶ್ರೀರಂಗಪಟ್ಟಣದ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರನ್ನು ತಾಲೂಕಿನ ಕೆ.ಶೆಟ್ಟಹಳ್ಳಿ ಗ್ರಾಪಂ ಅಧ್ಯಕ್ಷ ಬೋರಪ್ಪ ಮತ್ತು ಜೆಡಿಎಸ್ ಮುಖಂಡರು ಅಭಿನಂದಿಸಿದರು.

ಮೂರನೇ ಪುಟದಿಂದ

ಮಹಾಕುಂಭಮೇಳಕ್ಕೆ ಅದ್ಧೂರಿ ಚಾಲನೆ

ಜೀರ್ಣೋದ್ಧಾರ ನಡೆಸಲಾಗಿದೆ. ಕಾಶಿ ವಿಶ್ವನಾಥ ಧಾಮ, ಶ್ರೀ ಮಹಾಕಾಲ್ ಲೋಕ, ಕೇದಾರನಾಥ್ ದೇವಾಲಯ, ಸೋಮನಾಥ ದೇವಾಲಯ, ಜಮ್ಮು ಕಾಶ್ಮೀರ ಕೇಂದ್ರಾಡಳಿತ ಪ್ರದೇಶವಾದಾಗಿನಿಂದ ಅಲ್ಲೂ ದೇವಸ್ಥಾನಗಳ ಜೀರ್ಣೋದ್ಧಾರ ನಡೆಸಲಾಗುತ್ತಿದೆ. ಇದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲೂ ಧಾರ್ಮಿಕ ಕಾರಿಡಾರ್‌ಗಳನ್ನು ಅಭಿವೃದ್ಧಿಗೊಳಿಸುವತ್ತ ಚಿಂತನೆ ನಡೆಸಲಾಗುತ್ತಿದೆ ಎಂದು ಹೇಳಿದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ ಮಾತನಾಡಿ, ಕಳೆದ 10 ವರ್ಷಗಳಲ್ಲೇ ಅತೀ ಹೆಚ್ಚು ಅನುದಾನ ನೀಡುವ ಮೂಲಕ ಬಸವರಾಜ ಬೊಮ್ಮಾಯಿ ನೇತೃತ್ವದ ಸರಕಾರ ಮುಜರಾಯಿ ಇಲಾಖೆಗೆ ಮಹತ್ವ ನೀಡಿದೆ. ಇದರಿಂದಾಗಿ 10 ಹಲವು ವಿಶೇಷ ಯೋಜನೆಗಳನ್ನು ಪ್ರಾರಂಭಿಸಲು ಸಾಧ್ಯವಾಗಿದೆ. ರಾಜ್ಯದಲ್ಲೂ ಕಾಶಿ, ಉಜ್ಜೈನಿಯಂತಹ ಕಾರಿಡಾರ್ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು ಒಲವು ವ್ಯಕ್ತಪಡಿಸಿದ್ದಾರೆ. ವಿಜಯನಗರ ಜಿಲ್ಲೆಯ ಪ್ರವಾಸ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಮುತುವರ್ಜಿಯಲ್ಲಿ ಅಭಿವೃದ್ಧಿಗೊಳಿಸಲಾದ ಕಾರಿಡಾರ್‌ಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿಯವರ ದೇವಸ್ಥಾನಗಳ ಸಮಗ್ರ ಅಭಿವೃದ್ಧಿಯ ಕನಸನ್ನು ಸಾಕಾರಗೊಳಿಸುವುದು ನಮ್ಮ ಉದ್ದೇಶವಾಗಿದೆ. ಮಹಾಕುಂಭ ಮೇಳದ ಕೀರ್ತಿ ಮನೆ ಮನೆಗಳಿಗೆ ತಿಳಿಯಬೇಕು. ಮೂರು ನದಿಗಳು ಸೇರುವ ತ್ರಿವೇಣಿ ಸಂಗಮದಲ್ಲಿ ಪುಣ್ಯ ಸ್ನಾನವನ್ನು ಮಾಡಿ ಭಗವಂತನ ಆಶೀರ್ವಾದವನ್ನು ಪಡೆಯೋಣ ಎಂದು ತಿಳಿಸಿದರು. ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದ ಜೀ ಮಹಾರಾಜ್, ಕಾಗಿನೆಲೆ ಕನಕಗುರು ಪೀಠ ಶ್ರೀ ಶಿವಾನಂದಪುರಿ ಸ್ವಾಮೀಜಿ, ಬೇಬಿ ಮಠ ಮತ್ತು ಚಂದ್ರವನ ಆಶ್ರಮ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಶ್ರೀ ಮಲೆ ಮಹದೇಶ್ವರ ಬೆಟ್ಟ ಸುಕ್ಷೇತ್ರ ಶ್ರೀ ಸಾಲೂರು ಬೃಹನ್ಮಠ ಪೀಠಾಧ್ಯಕ್ಷ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ವಹಿಸಿದ್ದರು. ವೇದಿಕೆಯಲ್ಲಿ ಅಬಕಾರಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ಜಿಲ್ಲಾಧಿಕಾರಿ ಎಸ್.ಅಶ್ವತಿ, ಜಿ.ಪಂ. ಸಿಇಒ ಶಾಂತ ಎಲ್.ಹುಲ್ಮನಿ, ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್ ನಾಗರಾಜು, ಉಪವಿಭಾಗಾಧಿಕಾರಿ ಬಿ.ಸಿ ಶಿವಾನಂದಮೂರ್ತಿ, ತಹಶೀಲ್ದಾರ್ ರೂಪ, ಕುಂಭ ಮೇಳ ಸಂಯೋಜಕ ಸಣ್ಣ ಸ್ವಾಮಿಗೌಡ, ಮುಡಾ ಅಧ್ಯಕ್ಷ ಶ್ರೀನಿವಾಸ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಬಳಿಕ ಕೆ.ಆರ್.ಪೇಟೆ ತಾಲೂಕಿನ ತ್ರಿವೇಣಿ ಸಂಗಮದಲ್ಲಿ ಮಹಾ ಕುಂಭಮೇಳದ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಳವಳ್ಳಿ ಮಹದೇವಸ್ವಾಮಿ ಮತ್ತು ತಂಡದವರಿಂದ ಜಾನಪದ ಗೀತೆ ಗಾಯನ ನಡೆಯಿತು.

ನವಗ್ರಹ, ಮೃತ್ಯುಂಜಯ ಹೋಮ

ಗಂಟೆವರೆಗೆ ಜೆಎಸ್‌ಎಸ್ ಸಂಸ್ಥೆಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಮಹಾ ಕುಂಭಮೇಳದ ಧಾರ್ಮಿಕ ಸಭೆಯು ಅ.15 ರಂದು ಬೆಳಿಗ್ಗೆ 11ಗಂಟೆಗೆ ಜರುಗಲಿದ್ದು, ಆದಿ ಚುಂಚನಗಿರಿ ಪೀಠಾಧ್ಯಕ್ಷರಾದ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಕೋಡಿಮಠದ ಶ್ರೀಗಳು ಸೇರಿದಂತೆ ಅನೇಕ ಮಠಾಧೀಶರು ಭಾಗವಹಿ ಸಲಿದ್ದಾರೆ. ಧಾರ್ಮಿಕ ಸಭೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಉದ್ಘಾಟನೆ ಮಾಡಲಿದ್ದಾರೆ. ರೇಷ್ಮೆ, ಯುವ ಸಬಲೀಕರಣ ಹಾಗೂ ಕ್ರೀಡೆ ಸಚಿವ ನಾರಾಯಣಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಘನ ಉಪಸ್ಥಿತಿ. ವಿಶೇಷ ಆಹ್ವಾನಿತರಾಗಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಆಗಮಿಸಲಿದ್ದಾರೆ.

ವಾಣಿಜ್ಯ ವಿಮಾನ 'Emirates EK 562'

ಜಂಬೋ ಜೆಟ್‌ನ ಮೊದಲ ಹಾರಾಟ ಅಕ್ಟೋಬರ್ 30ರ ರಾತ್ರಿ ದುಬೈನಿಂದ ಟೇಕಾಫ್ ಆಗಿ ಅ.31ಕ್ಕೆ ಬೆಂಗಳೂರಿನಲ್ಲಿ ಲ್ಯಾಂಡ್ ಆಗಬೇಕಿತ್ತು. ಆದರೆ, ಎರಡು ವಾರದ ಮುನ್ನವೇ ಬೃಹತ್ ಲೋಹದ ಹಕ್ಕಿ ಬೆಂಗಳೂರು ತಲುಪಿರುವುದು ವಿಮಾನ ಪ್ರಯಾಣಿಕರಲ್ಲಿ ಸಂತಸ ತಂದಿದೆ. ಎ380 ಸರಣಿಯ ಈ ವಿಮಾನವು ಡಬಲ್ ಡೆಕ್ಕರ್ ವಿಮಾನವಾಗಿದ್ದು, 500ಕ್ಕಿಂತ ಹೆಚ್ಚು ಆಸನ ಸಾಮರ್ಥ್ಯ ಹೊಂದಿದೆ. ವಿಮಾನದಲ್ಲಿ ಫಸ್ಟ್ ಕ್ಲಾಸ್, ಎಕಾನಮಿ ಮತ್ತು ಬ್ಯುಸಿನೆಸ್ ಟಿಕೆಟ್ ವ್ಯವಸ್ಥೆ ಇದೆ. ಎಕಾನಮಿ ಕ್ಲಾಸ್ ವಿಶಾಲವಾಗಿದ್ದು, ಹೆಚ್ಚುವರಿ ಲೆಗ್‌ರೂಮ್ ಹೊಂದಿದೆ. ಬ್ಯುಸಿನೆಸ್ ಕ್ಲಾಸ್‌ನಲ್ಲಿ ಸೀಟ್ ವ್ಯವಸ್ಥೆ ಮಾತ್ರ ಹೊಂದಿದೆ, ಫಸ್ಟ್ ಕ್ಲಾಸ್‌ನಲ್ಲಿ ಖಾಸಗಿ ಸೂಟ್‌ಗಳು ಮತ್ತು ಶವರ್ ಸ್ಪಾಗಳನ್ನು ಹೊಂದಿದೆ.

ನಾಳೆ 'ಶಿಷ್ಯರು ಮೆಚ್ಚಿದ ಗುರು' ಪ್ರಶಸ್ತಿ ಪ್ರದಾನ

ಮೈಸೂರು, ಅ.14– ಮೈಸೂರಿನ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ವತಿಯಿಂದ ಕೊಡಮಾಡುವ 'ಶಿಷ್ಯರು ಮೆಚ್ಚಿದ ಗುರು' ಪ್ರಶಸ್ತಿಗೆ 14 ಮಂದಿಯನ್ನು ಆಯ್ಕೆ ಮಾಡಲಾಗಿದೆ.

ಜಯನಗರದಲ್ಲಿರುವ ಟ್ರಸ್ಟ್ ಆವರಣದಲ್ಲಿ ಅ.16ರ ಬೆಳಗ್ಗೆ 10.30ಕ್ಕೆ ನಡೆಯಲಿರುವ ಕಾರ್ಯಕ್ರಮದಲ್ಲಿ ಟಿ.ಆರ್.ಶಂಕರಪ್ಪ (ಪ್ರಾಥಮಿಕ ಶಾಲೆ ವಿಭಾಗ), ಎಸ್.ಹರ್ಷ(ಪ್ರೌಢಶಾಲೆ), ಸಿದ್ದರಾಜು ಬೆಳ್ಳಂಯ್ಯ(ಪಿಯು ಕಾಲೇಜು), ಎಚ್.ಕೆ.ರಾಮಚಂದ್ರ(ಐಟಿಐ), ಜಿ.ಅಮರನಾಥ(ಡಿಪ್ಲೊಮಾ), ಡಾ.ಎಂ.ಎಸ್.ಮನೋನ್ಮಣಿ(ಪದವಿ), ಡಾ.ಎಂ.ಆರ್.ಪೂಜಾ (ಎಂಜಿನಿಯರಿಂಗ್), ಡಾ.ಲಕ್ಷ್ಮೀಗೌಡ(ವೈದ್ಯಕೀಯ), ಡಾ.ಎಂ.ಎನ್.ಸಂಜಿತ್(ಕಾನೂನು), ಎಂ.ಎನ್.ಪರಮಶಿವಯ್ಯ (ದೈಹಿಕ ಶಿಕ್ಷಣ), ಜಿ.ಎಂ.ಸತೀಶ್(ಸ್ಪರ್ಧಾತ್ಮಕ ಪರೀಕ್ಷೆ), ಡಾ.ಬಿ.ಪಿ.ಮೂರ್ತಿ(ಯೋಗ), ಎಸ್.ಸುನೀತಾ (ನೃತ್ಯ ಕಲೆ) ಹಾಗೂ ಡಾ.ಎಚ್.ಆರ್.ಕನ್ನಿಕಾ(ಕಲಾ ವಿಭಾಗ) ಅವರಿಗೆ ನೇಗಿಲಯೋಗಿ ವಿದ್ಯಾವರ್ಧಕ ಮೈಸೂರು ವಿಭಾಗ ಮಟ್ಟದ 'ಶಿಷ್ಯರು ಮೆಚ್ಚಿದ ಗುರು' ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಲಾಗುವುದು. ಶಾಸಕ ಎಲ್.ನಾಗೇಂದ್ರ, ಕವಯತ್ರಿ ಡಾ.ಕವಿತಾ ರೈ, ಟ್ರಸ್ಟ್ ಗೌರವಾಧ್ಯಕ್ಷ ಪ್ರೊ.ಕೆ.ಆರ್.ರಂಗಯ್ಯ, ಉಪಾಧ್ಯಕ್ಷ ಬರಕ್ಕಿ ಪಿ.ಮಹದೇವಪ್ಪ, ಪ್ರಾಂಶುಪಾಲೆ ಎಚ್.ಎನ್.ಗೀತಾಂಬಾ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

ರಾಜ್ಯದ ವಿವಿಧೆಡೆ ಮುಂದಿನ 24 ಗಂಟೆಗಳಲ್ಲಿ ಭಾರೀ ಮಳೆ

ಬೆಂಗಳೂರು, ಅ.14– ರಾಜ್ಯದ ವಿವಿಧೆಡೆ ಮುಂದಿನ 24 ಗಂಟೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆಗಳಿವೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ.

ಭಾರೀ ಮಳೆ ಮುನ್ನೆಚ್ಚರಿಕೆ: ಮುಂದಿನ 24 ಘಂಟೆಗಳಲ್ಲಿ ಕರಾವಳಿಯ ಎಲ್ಲಾ ಜಿಲ್ಲೆಗಳ ಮತ್ತು ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಕಲಬುರ್ಗಿ, ಕೊಪ್ಪಳ, ರಾಯಚೂರು, ವಿಜಯಪುರ, ಯಾದಗಿರಿ ಜಿಲ್ಲೆಗಳಲ್ಲಿ ಹಾಗೂ ದಕ್ಷಿಣ ಒಳನಾಡಿನ ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಮಗಳೂರು, ದಾವಣಗೆರೆ, ಹಾಸನ, ಕೊಡಗು, ಮಂಡ್ಯ, ರಾಮನಗರ ಮತ್ತು ತುಮಕೂರು ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ದೇಶ ಇಬ್ಭಾಗ, ರಾಜ್ಯ 3 ಭಾಗ: ಹಾಸನಾಂಬ ಜಾತ್ರೆಯಲ್ಲಿ ಬ್ರಹ್ಮಾಂಡ ಗುರೂಜಿ ಭವಿಷ್ಯ

ಹಾಸನ: ವರ್ಷಕ್ಕೊಮ್ಮೆ ದರ್ಶನ ಭಾಗ್ಯ ಕರುಣಿಸುವ ಹಾಸನಾಂಬ ಜಾತ್ರಾ ಮಹೋತ್ಸವ ಅದ್ದೂರಿಯಾಗಿ ನಡೆಯುತ್ತದೆ. ಎರಡನೇ ದಿನವಾದ ಇಂದು ಶುಕ್ರವಾರ ಹಲವು ಗಣ್ಯರು ಹಾಗೂ ಸಾವಿರಾರು ಭಕ್ತರು ದೇವಿಯ ದರ್ಶನ ಪಡೆದರು. ರಾಜ್ಯದ ವಿವಿಧ ಮೂಲೆಗಳಿಂದ ಆಗಮಿಸಿದ ಭಕ್ತಸಾಗರ ಬೆಳಗ್ಗೆಯಿಂದಲೇ ಸರತಿ ಸಾಲಿನಲ್ಲಿ ನಿಂತು ದೇವಿಯನ್ನು ನೋಡಿ ಕಣ್ತುಂಬಿಕೊಂಡರು. 2023 ರಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರಲಿ ಅಂತಾ ಪ್ರಾರ್ಥನೆ ಸಲ್ಲಿಸಿದ್ದೇನೆ ಎಂದು ಮಾಜಿ ಸಚಿವ ಎಚ್.ಡಿ.ರೇವಣ್ಣ ಹೇಳಿದರು. ಮತ್ತೊಂದೆಡೆ ಬ್ರಹ್ಮಾಂಡ ಗುರೂಜಿ ಮಾತನಾಡಿದ್ದು, ದೇಶ ಇಬ್ಭಾಗವಾಗುತ್ತದೆ, ರಾಜ್ಯ ಮೂರು ಓಳಾಗುತ್ತದೆ ಎಂದು ಸ್ಫೋಟಕ ಭವಿಷ್ಯ ನುಡಿದರು.

ಬ್ರಹ್ಮಾಂಡ ಗುರೂಜಿ ಖ್ಯಾತಿಯ ನರೇಂದ್ರ ಬಾಬು ಶರ್ಮಾ ಕೂಡ ಹಾಸನಾಂಬ ದೇವಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ದರ್ಶನ ಪಡೆದ ಬಳಿಕ ಮಾತನಾಡಿದ ಅವರು, ಪಾರ್ಲಿಮೆಂಟ್ ಕಟ್ಟಿದ್ದಾರೆ, ಅದು ಭಾರಿ ಘೋರ ಆಗಿರುತ್ತದೆ. ಚಂದ್ರ ಇಲ್ಲ ಪೂರ್ತಿಯಾಗಿ ಕುಜನಾಂಶ ಆಗಿರಬೇಕು. ಹಾಸನಾಂಬೆಯ ಸನ್ನಿಧಿಯಲ್ಲಿ ಹೇಳುತ್ತೇನೆ ಭಾರತ ದೇಶ ಎರಡು ಭಾಗ ಆಗುತ್ತದೆ. ಎರಡೆರಡು ರಾಷ್ಟ್ರಪತಿ ಆಗುವುದು ಸತ್ಯ, ಕರ್ನಾಟಕ ಮೂರು ಭಾಗ ಆಗುತ್ತದೆ. ಮೂರು ಜನ ಸಿಎಂ, ಮೂರು ರಾಜ್ಯಪಾಲರು ಬರುತ್ತಾರೆ. ಆಂಧ್ರ ಎರಡಾಯಿತು, ನಮ್ಮದು ಒಂದು ಕೈ ಮೇಲಾಗಿ ಮೂರಾಗುತ್ತದೆ. ವಿಧಾನಸೌಧ ಮುಳುಗುತ್ತದೆ ಎಂದು ವೀರ ಪ್ರಮೇಯದಲ್ಲಿ ಬರೆದಿದೆ. ಘಟಪ್ರಭಾ, ಮಲಪ್ರಭಾದಲ್ಲಿ ಪ್ರವಾಹ ಆಗಿದೆ. ಬೆಳಗಾವಿ ಭಾಗ ಕೂಡ ಒಂದು ರಾಜ್ಯ ಆಗುತ್ತದೆ ಎಂದು ಭಯಾನಕ ಭವಿಷ್ಯ ನುಡಿದರು.



ಡಿ. ಅಂತ್ಯಕ್ಕೆ ಐದು ಗ್ರಹಗಳ ಆಗಮನ: ಕಲಿಯುಗದ ಅಂತ್ಯ ಕಾಲಕ್ಕೆ ರೋಗಗಳು ಜಾಸ್ತಿ ಆಗುತ್ತದೆ. ಡಿಸೆಂಬರ್ ಅಂತ್ಯಕ್ಕೆ ಐದು ಗ್ರಹಗಳು ಒಟ್ಟಿಗೆ ಬರುತ್ತವೆ. ಒಂಭತ್ತು ತಿಂಗಳು ಕೂರುತ್ತದೆ. ಎರಡು ಗ್ರಹಣಗಳು ಹತ್ತಿರ ಬರಬಾರದು. ಜನರಿಗೆ ನೀರಿನ ಅಭಾವ, ಬೆಂಕಿ, ಗಲಾಟೆ, ಘರ್ಷಣೆ, ಸ್ವಂತದವರ ಹತ್ತಿರ ಘರ್ಷಣೆಗಳು ಆಗುತ್ತವೆ ಎಂದರು.

ಶಿವನ ಮೇಲೆ ಆಣೆ ಇದು ಸತ್ಯ: ಗುರೂಜಿ ರಾಜ್ಯದಲ್ಲಿ ಯಾರೂ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ. ದೇವರ ಸತ್ಯವಾಗಿ ಹೇಳುತ್ತೇನೆ, 31 ವರ್ಷದೊಳಗಿನವರು ಎಚ್ಚೆತ್ತುಕೊಂಡು ಮುನ್ನಡೆಯಬೇಕು. ಇದು ಸತ್ಯ ಎಂದು ಭವಿಷ್ಯ ನುಡಿದಿದ್ದಾರೆ.

ಎಎಪಿ ಬಗ್ಗೆ ಗುರೂಜಿ ನುಡಿದ ಭವಿಷ್ಯ: ವೀರ ಬ್ರಮ್ಮಯ್ಯ, ಕೈವಾರ ತಾತಯ್ಯ, ಮಂಟೆ ಸ್ವಾಮಿಗಳು ಶಾಸನ ಬರೆದು ಇಟ್ಟಿದ್ದಾರೆ, ಇದು ನಡೆಯುವುದು ಸತ್ಯ. ಈ ಭಾರಿ ಬರುವುದು ಬೇರೆ ಸಂಸಾರ. ಮುಖ್ಯಮಂತ್ರಿ ಆಯ್ಕೆ ವಿಚಾರದಲ್ಲಿ ಬಹಳಷ್ಟು ಗೊಂದಲ ನಡೆಯುತ್ತದೆ. ಪೊರಕೆಯಿಂದ ದೆಹಲಿಯನ್ನು ಗುಡಿಸಿರುವ ಪಕ್ಷ, ಪಂಜಾಬ್, ಗುಜರಾತ್‌ನಲ್ಲೂ ಒಂದಿಷ್ಟು ಗುಡಿಸಿದೆ. ಚಪ್ಪಲಿ, ಪೊರಕೆಯನ್ನು ಲಕ್ಷ್ಮಿಗೆ ಹೋಲಿಸುತ್ತೇವೆ. ಭಿಕ್ಷೆ ಬೇಡಿ ಒಂದು ಸರ್ಕಾರ ನಡೆಸುವ ಅವಕಾಶಗಳು ಈ ಭಾರಿ ಬರುತ್ತದೆ. ಸುಮಾರು ಏಳು ಪಕ್ಷಗಳು ಸೇರಿಕೊಂಡು ಸರ್ಕಾರ ಮಾಡಬೇಕಾಗುತ್ತದೆ. ಮಾಂಸದ ಊಟ ಹಾಕಿದರು, ತೀರ್ಥ ಕೊಟ್ಟರು ಎಂದು ವೋಟ್ ಹಾಕಬೇಡಿ. ಯಾವ ಮನುಷ್ಯ ಸರಿಯಾಗಿ ಕೆಲಸ ಮಾಡುತ್ತಾನೆಯೋ, ಅಂತಹವರನ್ನು ಶಾಸಕನಾಗಿ ಆಯ್ಕೆ ಮಾಡಿ ಎಂದು ತಿಳಿಸಿದರು.

ಹಿಮಾಚಲ ಪ್ರದೇಶ ವಿಧಾನಸಭೆಗೆ ನ.12ಕ್ಕೆ ಚುನಾವಣೆ: ಡಿಸೆಂಬರ್ 8ಕ್ಕೆ ಮತಎಣಿಕೆ

ನವದೆಹಲಿ, ಅ.14– ಚುನಾವಣಾ ಆಯೋಗ ಹಿಮಾಚಲ ಪ್ರದೇಶ ವಿಧಾನಸಭೆ ಚುನಾವಣೆ ವೇಳಾಪಟ್ಟಿ ಬಿಡುಗಡೆ ಬಿಡುಗಡೆ ಮಾಡಿದ್ದು, ನವೆಂಬರ್ 12ರಂದು ಮತದಾನ ನಡೆಯಲಿದೆ.

ಕೇಂದ್ರ ಚುನಾವಣಾ ಆಯೋಗ ಶುಕ್ರವಾರ ಹಿಮಾಚಲ ಪ್ರದೇಶ ವಿಧಾನಸಭೆಗೆ ಚುನಾವಣೆಗೆ ದಿನಾಂಕ ನಿಗದಿ ಮಾಡಿದ್ದು, ನವೆಂಬರ್ 12ಕ್ಕೆ ಮತದಾನ ನಡೆಯಲಿದ್ದು, 68 ಕ್ಷೇತ್ರಗಳಿಗೆ ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದೆ. ಡಿಸೆಂಬರ್ 8ರಂದು ಮತ ಎಣಿಕೆ ನಡೆದು ಫಲಿತಾಂಶ ಹೊರಬೀಳಲಿದೆ. ಹಿಮಾಚಲ ಸದನದ ಅವಧಿಯು ಜನವರಿ 8, 2023 ರಂದು ಕೊನೆಗೊಳ್ಳುತ್ತದೆ. ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸಲು ನಾವು ಬದ್ಧರಾಗಿದ್ದೇವೆ. ಯಾವುದೇ ತೊಡಕಿಲ್ಲದೆ ಚುನಾವಣೆ ಆಯೋಜನೆಗೆ ಎಲ್ಲ ಕ್ರಮ ಕೈಗೊಳ್ಳಲಾಗುವುದು. ಚುನಾವಣೆಯಲ್ಲಿ ಜನರ ಭಾಗವಹಿಸುವಿಕೆಯನ್ನು ಹೆಚ್ಚಿಸಲು ನಾವು ಪ್ರಯತ್ನಗಳನ್ನು ಮಾಡುತ್ತಿದ್ದೇವೆ ಮತ್ತು ನಾವು ಚುನಾವಣೆಗಳ ಮೂಲಕ ಮಹಿಳಾ ಸಬಲೀಕರಣವನ್ನು ತೋರಿಸಲು ಪ್ರಯತ್ನಿಸುತ್ತೇವೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಹೇಳಿದ್ದಾರೆ. ಅಂತೆಯೇ ರಾಜಕೀಯ ಪಕ್ಷಗಳು, ರಾಜ್ಯದ ಮುಖ್ಯ ಕಾರ್ಯದರ್ಶಿ, ಡಿಜಿಪಿ, ಪೊಲೀಸ್ ಇಲಾಖೆ ಮತ್ತು ಪೊಲೀಸ್ ನೋಡಲ್ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಲಾಗಿದೆ ಎಂದು ಅವರು ಹೇಳಿದ್ದಾರೆ.

ಹಿಮಾಚಲ ಪ್ರದೇಶದ 68 ವಿಧಾನಸಭಾ ಕ್ಷೇತ್ರಗಳಲ್ಲಿ 55 ಲಕ್ಷಕ್ಕೂ ಹೆಚ್ಚು ಮತದಾರರು ತಮ್ಮ ಹಕ್ಕು ಚಲಾಯಿಸಲು ಅರ್ಹರಾಗಿದ್ದಾರೆ. ಈ ಪೈಕಿ 1.86 ಲಕ್ಷ ಮತದಾರರು ಮೊದಲ ಬಾರಿಗೆ ಮತದಾನ ಮಾಡುತ್ತಿದ್ದು, 80 ವರ್ಷಕ್ಕಿಂತ ಮೇಲ್ಪಟ್ಟ 1.22 ಲಕ್ಷ ಮತ್ತು 100 ವರ್ಷಕ್ಕಿಂತ ಮೇಲ್ಪಟ್ಟ 1,184 ಮತದಾರರಿದ್ದಾರೆ ಎಂದು ಆಯೋಗ ಹೇಳಿದೆ. ಇನ್ನು ಗುಜರಾತ್ ವಿಧಾನಸಭೆ ಚುನಾವಣೆ ದಿನಾಂಕವನ್ನು ನಂತರ ಪ್ರಕಟಿಸುವುದಾಗಿ ಅವರು ಹೇಳಿದ್ದಾರೆ. ಗುಜರಾತ್ ಅಸೆಂಬ್ಲಿಯ ಅವಧಿಯು ಫೆಬ್ರವರಿ 18, 2023 ರಂದು ಕೊನೆಗೊಳ್ಳುತ್ತದೆ. 182 ಸ್ಥಾನಗಳ ಗುಜರಾತ್ ವಿಧಾನಸಭೆಯಲ್ಲಿ 111 ಬಿಜೆಪಿ ಮತ್ತು 62 ಕಾಂಗ್ರೆಸ್ ಶಾಸಕರಿದ್ದಾರೆ.

68 ಸದಸ್ಯರ ಹಿಮಾಚಲ ಪ್ರದೇಶ ವಿಧಾನ ಸಭೆಗೆ ಕಳೆದ ಬಾರಿ ನಡೆದ ಚುನಾವಣೆಯಲ್ಲಿ, ಭಾರತೀಯ ಜನತಾ ಪಕ್ಷ (ಬಿಜೆಪಿ) ಕಾಂಗ್ರೆಸ್ ಪಕ್ಷವನ್ನು ಸೋಲಿಸಿ 44 ಸ್ಥಾನಗಳನ್ನು ಗೆದ್ದುಕೊಂಡಿತು ಮತ್ತು 2017 ರಲ್ಲಿ ಕಾಂಗ್ರೆಸ್ ಕೇವಲ 21 ಸ್ಥಾನಗಳನ್ನು ಗಳಿಸಿತ್ತು. ಪ್ರಸ್ತುತ, ಹಿಮಾಚಲ ಪ್ರದೇಶ ವಿಧಾನಸಭೆಯಲ್ಲಿ ಬಿಜೆಪಿ 45 ಶಾಸಕರನ್ನು ಹೊಂದಿದ್ದರೆ, ಕಾಂಗ್ರೆಸ್ 22 ಮತ್ತು ಸಿಪಿಎಂ 1 ಶಾಸಕರನ್ನು ಹೊಂದಿದೆ.

ಮಹಾಕುಂಭ ಮೇಳದಲ್ಲಿ ವಿಶೇಷ ಗಂಗಾರತಿ



ಮಂಡ್ಯ, ಅ.14– ಕೆ.ಆರ್.ಪೇಟೆಯ ತ್ರಿವೇಣಿ ಸಂಗಮದಲ್ಲಿ ಮಹಾ ಕುಂಭಮೇಳದ ಪ್ರಯುಕ್ತ ವಿಶೇಷ ಗಂಗಾರತಿ ನೆರೆದವರ ಆಕರ್ಷಿಸಿತು.

ಇಂದಿನಿಂದ ಆರಂಭವಾಗಿರುವ ಕುಂಭಮೇಳದಲ್ಲಿ ವಾರಾಣಾಸಿಯಿಂದ ಗಂಗಾರತಿ ಮಾಡುವ ಆಗಮಿಕರನ್ನು ಕರೆಸಿ ಹೇಮಾವತಿ, ಲಕ್ಷ್ಮಣ ತೀರ್ಥ, ಕಾವೇರಿ ನದಿಯ ಸಂಗಮದಲ್ಲಿ ವಿಶೇಷವಾಗಿ ಗಂಗಾರತಿ ನೆರವೇರಿಸಲಾಯಿತು. ಇದನ್ನು ಭಕ್ತ ಸಮೂಹ ಕಣ್ತುಂಬಿಕೊಂಡರು.

ಈ ವೇಳೆ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಚಂದ್ರವನದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ.ನಾರಾಯಣಗೌಡ ಉಪಸ್ಥಿತರಿದ್ದರು.

ಜಲಾಂತರ್ಗಾಮಿ 'ಐಎನ್‌ಎಸ್ ಅರಿಹಂತ'ದಿಂದ ಕ್ಷಿಪಣಿಯ ಯಶಸ್ವಿ ಉಡಾವಣೆ

ನವದೆಹಲಿ: ಜಲಾಂತರ್ಗಾಮಿ ಐಎನ್‌ಎಸ್ ಅರಿಹಂತದಿಂದ ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು (ಎಸ್‌ಎಲ್‌ಬಿಎಂ) ಬಂಗಾಳ ಕೊಲ್ಲಿಯಲ್ಲಿ ಶುಕ್ರವಾರ ಯಶಸ್ವಿಯಾಗಿ ಉಡಾಯಿಸಲಾಯಿತು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಬಂಗಾಳ ಕೊಲ್ಲಿಯಲ್ಲಿ ಪೂರ್ವನಿರ್ಧರಿತ ಗುರಿಯನ್ನು ಈ ಕ್ಷಿಪಣಿಯು ಬಹಳ ನಿಖರವಾಗಿ ತಲುಪಿತು. ಈ ಕ್ಷಿಪಣಿ ವ್ಯವಸ್ಥೆಯ ಕಾರ್ಯಾಚರಣೆ ಹಾಗೂ ತಾಂತ್ರಿಕ ಪರಿಮಾಣಗಳನ್ನು ಈ ಪರೀಕ್ಷೆ ಸಾಬೀತುಪಡಿಸಿತು. ಇದು ಭಾರತದ ಪಡೆಗಳ ದಾಳಿ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಿದೆ.

ದಸರಾ ವಸ್ತು ಪ್ರದರ್ಶನದಲ್ಲಿ

ಕಾನೂನು ಅರಿವು ಮಳಿಗೆ ಉದ್ಘಾಟನೆ

ಕಾನೂನು ಸಲಹೆ, ರಾಜೀ ಸಂಧಾನ, ಉಚಿತ ಕಾನೂನು ಸೇವೆ, ಕಾನೂನು ಸಾಕ್ಷರತೆ, ಖಾಯಂ ಜನತಾ ಅದಾಲತ್ ಬಗ್ಗೆ ಮಾಹಿತಿ





ಮೈಸೂರು, ಅ.14(ಜಿಎ)– ಮೈಸೂರು ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ತೆರೆದಿರುವ ಮಳಿಗೆಯನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷರಾದ ಎಂ.ಎಲ್. ರಘುನಾಥ್ ಅವರು ಶುಕ್ರವಾರ ಸಂಜೆ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ಕಾನೂನು ಬಗ್ಗೆ ಅರಿವು ಮೂಡಿಸುವುದು ಮತ್ತು ಲೋಕ ಅದಾಲತ್ ಸೇರಿದಂತೆ ಇನ್ನಿತರ ಸೇವೆಗಳ ಕುರಿತು ಪ್ರಚಾರದ ಮೂಲಕ ಜನರಿಗೆ ತಿಳಿಸುವುದು ಈ ಮಳಿಗೆಯ ಮುಖ್ಯ ಉದ್ದೇಶವಾಗಿದೆ ಎಂದರು.

ಎಲ್ಲಾ ಕಾನೂನು ಸೇವೆಗಳನ್ನು ಉಚಿತವಾಗಿ ನೀಡಲಾಗುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಪ್ರಾಪ್ತ ವಯಸ್ಕರಿಗೆ, ವಿಕಲಚೇತನರಿಗೆ, ಬುದ್ಧಿ ಮಾಂದ್ಯರಿಗೆ, ಪ್ರಕೃತಿ ವಿಕೋಪಕ್ಕೆ ಒಳಗಾಗದವರಿಗೆ, ಕಾರ್ಮಿಕರಿಗೆ, ಮಹಿಳೆಯರಿಗೆ ಯಾವುದೇ ಆದಾಯದ ಮಿತಿ ಅಗತ್ಯತೆ ಇಲ್ಲದೆ ಹಾಗೂ ಇತರರರಿಗೆ ವಾರ್ಷಿಕ ಆದಾಯ ಮೂರು ಲಕ್ಷ ರೂ. ಒಳಗಡೆ ಇರುವವರಿಗೆ ಕಾನೂನು ನೆರವು ನೀಡಲಾಗುವುದು ಎಂದು ಅವರು ಹೇಳಿದರು.

ಕಾನೂನು ಸೇವೆಗಳ ಪ್ರಾಧಿಕಾರದ ಅಡಿಯಲ್ಲಿ ಯಾವುದೇ ಆದಾಯ ಮಿತಿಯ ಅಗತ್ಯವಿಲ್ಲದೆ ಎಲ್ಲರೂ ಕಾನೂನು ಸಲಹೆ ಪಡೆಯಲು ಅರ್ಹರಾಗಿರುತ್ತಾರೆ. ಅಲ್ಲದೆ ಸರ್ಕಾರಿ ಕಚೇರಿ, ಪೊಲೀಸ್ ಠಾಣೆಗಳಲ್ಲಿ ಜನ ಸಾಮಾನ್ಯರಿಗೆ ಎದುರಾಗುವ ಸಮಸ್ಯೆಗಳು ಹಾಗೂ ಇತರೆ ಕಾನೂನಿಗೆ ಸಂಬಂಧಪಟ್ಟ ಎಲ್ಲ ವಿಷಯ ಗಳ ಬಗ್ಗೆಯೂ ಕಾನೂನು ಸಲಹೆಯನ್ನು ಮತ್ತು ನೆರವು ನೀಡುವ ಕಾರ್ಯವನ್ನು ಪ್ರಾಧಿಕಾರ ಮಾಡುತ್ತದೆ ಎಂದು ತಿಳಿಸಿದರು.

ಇದೇ ವೇಳೆ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಮಾತನಾಡಿ, 3 ತಿಂಗಳ ಅವಧಿಯವರೆಗೂ ಈ ಮಳಿಗೆ ಪ್ರತಿನಿತ್ಯ ಸಂಜೆ 4 ರಿಂದ ರಾತ್ರಿ 8ರವರೆಗೂ ಸಾರ್ವಜನಿಕರಿಗೆ ಲಭ್ಯವಿರಲಿದ್ದು, ಕಾನೂನಿಗೆ ಸಂಬಂಧಪಟ್ಟ ಕೆಲ ಪುಸ್ತಕಗಳು ಮತ್ತು ಕೈಪಿಡಿಗಳು ಇವೆ. ಈ ಸಂದರ್ಭದಲ್ಲಿ ಒಬ್ಬರು ವಕೀಲರು ಮತ್ತು ಸ್ವಪ್ರೇರಿತ ಕಾನೂನು ಸ್ವಯಂ ಸೇವಕರು ಇರಲಿದ್ದಾರೆ ಇವರಿಂದ ಪ್ರಾಧಿಕಾರದ ಕುರಿತು ಮಾಹಿತಿಯನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಮಳಿಗೆಯ ವಿಶೇಷತೆಗಳು: ಕಾನೂನು ಸೇವೆಗಳ ಪ್ರಾಧಿಕಾರದಿಂದ ಉಚಿತವಾಗಿ ದೊರಕುವ ಸೇವೆ ಗಳಾದ ಉಚಿತ ಕಾನೂನು ಸೇವೆ, ಉಚಿತ ಕಾನೂನು ಸಲಹೆ, ರಾಜೀ ಸಂಧಾನ, ಜನತಾ ನ್ಯಾಯಾಲಯಗಳ ಮೂಲಕ ನ್ಯಾಯಾಲಯ ದಲ್ಲಿರುವ ಪ್ರಕರಣಗಳ ಇತ್ಯರ್ಥ, ವ್ಯಾಜ್ಯಪೂರ್ವ ಸಮಸ್ಯೆಗಳ ಪರಿಹಾರ, ಕಾನೂನು ಸಾಕ್ಷರತೆ, ಮಧ್ಯಸ್ಥಿಕೆ ಕೇಂದ್ರಗಳ ಮೂಲಕ ಸಂಧಾನ ವ್ಯವಸ್ಥೆ, ಪರ್ಯಾಯ ವ್ಯಾಜ್ಯ ಪರಿಹಾರದ ವ್ಯವಸ್ಥೆ ಮತ್ತು ಖಾಯಂ ಜನತಾ ಅದಾಲತ್ (P.L.A) ಮುಖಾಂತರ ಕೆಲವು ಸಾರ್ವಜನಿಕ ಉಪಯುಕ್ತ ಸೇವೆಗಳ ವಿವಾದ ಗಳ ಇತ್ಯರ್ಥಗಳ ಕುರಿತು ಮಾಹಿತಿ ಲಭ್ಯವಿದೆ.

ಅವಿದ್ಯಾವಂತ ಮಹಿಳೆ ವಂಚಿಸಿ ಜಮೀನು ನುಂಗಿದ ಪ್ರಕರಣ

ಪ್ರಕರಣ ದಾಖಲು

ಮೈಸೂರು, ಅ.14–ಅವಿದ್ಯಾವಂತ ಮಹಿಳೆಯ ಜಮೀನನ್ನು ಆಕೆಗೆ ಅರಿಯದಂತೆ ಸಂಬಂಧಿಕರೇ ತಮ್ಮ ಹೆಸರಿಗೆ ನೋಂದಣಿ ಮಾಡಿಸಿ ಕೊಂಡು ವಂಚಿಸಿರುವ ಬಗ್ಗೆ ನ್ಯಾಯಾಲಯದ ಆದೇಶದ ಮೇರೆಗೆ ಮೇಟಗಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೀರನಗೆರೆ ನಿವಾಸಿ ಶಾರದಮ್ಮ(62) ಸಂಬಂಧಿಕರಿಂದ ವಂಚನೆಗೊಳಗಾದವರಾಗಿದ್ದು, ಆಕೆಯ ಪತಿಯ ಸಹೋದರಿ ಲಕ್ಷ್ಮಮ್ಮ(70), ಲಕ್ಷ್ಮಮ್ಮ ಪುತ್ರ ಲೋಕೇಶ (50), ಪುತ್ರಿ ಪೂರ್ಣಿಮಾ(40), ಸಂಬಂಧಿಕಳಾದ ಭಾಗ್ಯಮ್ಮ(66) ಆರೋಪಕ್ಕೆ ಗುರಿಯಾಗಿರುವವರು.

ವಿವರ: ಶಾರದಮ್ಮ ಅವರು ತಮಗೆ ಸೇರಿದ ಕಳಸ್ತವಾಡಿ ಗ್ರಾಮದ ಸರ್ವೆ ನಂಬರ್ 145/5ರಲ್ಲಿ ಇರುವ 2 ಎಕರೆ 12 ಗುಂಟೆ ಜಮೀನು ಪೈಕಿ 32 ಗುಂಟೆ ಜಮೀನನ್ನು ಮಾರಾಟ ಮಾಡಲು ಉದ್ದೇಶಿಸಿದ್ದರು. ಅವಿದ್ಯಾವಂತರಾಗಿರುವ ಅವರಿಗೆ ಸಹಕರಿಸುವುದಾಗಿ ಆರೋಪಿಗಳು ಮುಂದೆ ಬಂದು ಜಾನ್ ಎಂಬುವರಿಗೆ 32 ಗುಂಟೆ ಜಮೀನನ್ನು 18 ಲಕ್ಷ ರೂ.ಗಳಿಗೆ ಮಾರಾಟ ಮಾಡಿ, ಅದನ್ನು 12 ಲಕ್ಷಕ್ಕೆ ಮಾರಲಾಗಿದೆ ಎಂದು ಶಾರದಮ್ಮ ಅವರಿಗೆ ತಿಳಿಸಿ, 10 ಲಕ್ಷ ರೂ. ಕೊಟ್ಟು ಉಳಿದ 2 ಲಕ್ಷ ರೂ. ನಂತರ ಕೊಡುವುದಾಗಿ ತಿಳಿಸಿದ್ದಾರೆ.

ಇತ್ತೀಚೆಗೆ ತನ್ನ ಜಮೀನನ್ನು 18 ಲಕ್ಷಕ್ಕೆ ಮಾರಾಟ ಮಾಡಿ ತನಗೆ 12 ಲಕ್ಷ ಎಂದು ಸಂಬಂಧಿಕರು ಸುಳ್ಳು ಹೇಳಿದ್ದಾರೆ ಎಂಬ ವಿಚಾರ ಶಾರದಮ್ಮನವರಿಗೆ ಜಮೀನು ಖರೀದಿಸಿದ ಜಾನ್ ಎಂಬುವರಿಂದ ತಿಳಿದು ಬಂದಿದೆ. ಈ ಹಿನ್ನೆಲೆಯಲ್ಲಿ ತನ್ನ ಜಮೀನಿನ ದಾಖಲಾತಿಗಳನ್ನು ಅವರು ವಿದ್ಯಾವಂತರ ಸಹಕಾರದಿಂದ ಪರಿಶೀಲಿಸಿದಾಗ 2011ರ ಫೆ.7ರಂದು ಜಾನ್ ಎಂಬುವರಿಗೆ ಶಾರದಮ್ಮನವರಿಂದ 32 ಗುಂಟೆ ಜಮೀನು ನೋಂದಣಿ ಮಾಡಿಸಿದ ವೇಳೆ ಶಾರದಮ್ಮನವರ ಅರಿವಿಗೆ ಬಾರದಂತೆ ಆರೋಪಿ ಲೋಕೇಶ 1 ಎಕರೆ 20 ಗುಂಟೆ ಜಮೀನನ್ನು ತನ್ನ ಹೆಸರಿಗೆ ನೋಂದಾಣಿ ಮಾಡಿಸಿಕೊಂಡಿದ್ದಾನೆ. ಈ ವಿಚಾರವನ್ನು ಕೇಳಿದಾಗ ಎಲ್ಲಾ ಆರೋಪಿಗಳು ಸೇರಿ ಶಾರದಮ್ಮ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಕೊಲೆ ಬೆದರಿಕೆ ಹಾಕಿದ್ದಾರೆಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಬೀರುವಿನಲ್ಲಿಟ್ಟಿದ್ದ ಚಿನ್ನಾಭರಣ ಕಳವು: ಮೊಮ್ಮಗನ ಮೇಲೆ ಸಂಶಯ

ಸೋಮವಾರಪೇಟೆ, ಅ.14–ಮನೆಯ ಬೀರುವಿನಲ್ಲಿಟ್ಟಿದ್ದ ಚಿನ್ನಾಭರಣ ಕಳುವಾಗಿರುವ ಘಟನೆ ಸೋಮವಾರಪೇಟೆಯ ರೇಂಜರ್ ಬ್ಲಾಕ್‌ನಲ್ಲಿ ನಡೆದಿದ್ದು, ಈ ಚಿನ್ನಾಭರಣವನ್ನು ಮಹಿಳೆಯೋರ್ವರ ಮೊಮ್ಮಗನೇ ಕಳವು ಮಾಡಿರಬಹುದೆಂದು ಸಂಶಯ ವ್ಯಕ್ತಪಡಿಸಿ, ಪೊಲೀಸರಿಗೆ ದೂರು ಸಲ್ಲಿಸಲಾಗಿದೆ.

ಅಲ್ಲಿನ ನಿವಾಸಿ ಮರಿಯಮ್ಮ(65) ಎಂಬುವರು ಸಾಕುಮಗನ ಇಬ್ಬರು ಮಕ್ಕಳೊಂದಿಗೆ ವಾಸಿಸುತ್ತಿದ್ದಾರೆ. ಮಕ್ಕಳ ವಿದ್ಯಾಭ್ಯಾಸದ ಹೊಣೆಯನ್ನೂ ಅವರೇ ವಹಿಸಿಕೊಂಡಿದ್ದಾರೆ. ಅ.12ರಂದು ಅವರು ತಮ್ಮ ಗಾರ್ಡ್ರೆಜ್ ಬೀರುವಿನಲ್ಲಿ ಇಟ್ಟಿದ್ದ ಆಭರಣಗಳ ಬಾಕ್ಸ್ ಅನ್ನು ನೋಡಿದಾಗ ಅದರಲ್ಲಿದ್ದ 34 ಗ್ರಾಂ ತೂಕದ ಚಿನ್ನಾಭರಣ ಕಳುವಾಗಿರುವುದು ಗೊತ್ತಾಗಿದೆ. ಈ ಚಿನ್ನಾಭರಣವನ್ನು ಅಪ್ರಾಪ್ತ ವಯಸ್ಸಿನ ತನ್ನ ಮೊಮ್ಮಗನೇ ಕಳವು ಮಾಡಿರಬಹುದೆಂದು ಶಂಕೆ ವ್ಯಕ್ತಪಡಿಸಿ ಅವರು ನೀಡಿದ ದೂರನ್ನು ಸೋಮವಾರಪೇಟೆ ಠಾಣೆ ಪೊಲೀಸರು ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಸಕ್ಕರೆ ಸಚಿವರ ನೇತೃತ್ವದಲ್ಲಿ ಕಬ್ಬು ಬೆಲೆ ನಿಗದಿ ಸಂಬಂಧ ಇಂದು ಬೆಂಗಳೂರಲ್ಲಿ ಸಭೆ

ಮೈಸೂರು, ಅ.14(ಎಸ್‌ಬಿಡಿ)– ಕಬ್ಬು ಬೆಲೆ ನಿಗದಿ ಹಾಗೂ ಬೆಳೆಗಾರರ ಸಮಸ್ಯೆ ಸಂಬಂಧ ಚರ್ಚಿಸಲು ನಾಳೆ(ಅ.15) ಬೆಂಗಳೂರಿನ ವಿಕಾಸಸೌಧದಲ್ಲಿ ರೈತ ಮುಖಂಡರ ಸಭೆ ಕರೆಯಲಾಗಿದೆ.

ವಿಕಾಸಸೌಧ 3ನೇ ಮಹಡಿ, ಕೊಠಡಿ ಸಂಖ್ಯೆ 322ರಲ್ಲಿ ಬೆಳಗ್ಗೆ 11ಕ್ಕೆ ಸಕ್ಕರೆ ಸಚಿವ ಶಂಕರ್ ಬಿ.ಪಾಟೀಲ್ ಮುನೇನಕೊಪ್ಪ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿದ್ದು, 2022–23ನೇ ಹಂಗಾಮು ಕಬ್ಬಿಗೆ ಬೆಲೆ ನಿಗದಿ ಹಾಗೂ ಬೆಳೆಗಾರರ ಸಮಸ್ಯೆ ಕುರಿತು ರಾಜ್ಯ ರೈತ ಸಂಘಟನೆಗಳ ಮುಖಂಡರೊಂದಿಗೆ ಚರ್ಚೆ ನಡೆಸಲಿದ್ದಾರೆ. ಈ ಸಂಬಂಧ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಪತ್ರಿಕಾ ಹೇಳಿಕೆ ನೀಡಿದ್ದು, ಒಂದು ಟನ್ ಕಬ್ಬಿಗೆ 4,500 ರೂ. ನಿಗದಿ ಮಾಡಬೇಕು ಹಾಗೂ ಕೂಡಲೇ ಸರ್ಕಾರ ಎಸ್‌ಎಪಿ ಘೋಷಣೆ ಮಾಡಬೇಕೆಂದು ಒತ್ತಾಯಿಸಿ ವಿಜಯದಶಮಿ(ಅ.5)ಯಂದು ಕರ್ನಾಟಕ ರಾಜ್ಯ ರೈತ ಸಂಘದ ಕರೆ ಮೇರೆಗೆ ಮೈಸೂರು, ಮಂಡ್ಯ ಜಿಲ್ಲೆಯ 8 ಕಡೆ ಕಬ್ಬು ಬೆಳೆಗಾರರು ಪ್ರತಿಭಟನೆ ನಡೆಸಿದ್ದೆವು. ಅ.15ರೊಳಗೆ ಸಭೆ ಕರೆಯುವುದಾಗಿ ಸರ್ಕಾರ ಭರವಸೆ ನೀಡಿದ್ದರಿಂದ ಅಂದಿನ ಚಳವಳಿ ಕೈಬಿಡಲಾಗಿತ್ತು. ಅದರಂತೆ ಸಭೆ ಕರೆದಿದ್ದು, ಕಬ್ಬು ಟನ್‌ಗೆ 1 ಸಾವಿರ ರೂ. ಎಸ್‌ಎಪಿ ಘೋಷಣೆ ಮಾಡಬೇಕು, ಈ ಸಂಬಂಧ ತೀರ್ಮಾನಿಸಲು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ನಿಗದಿಪಡಿಸುವಂತೆ ಒತ್ತಾಯಿಸುವುದಾಗಿ ತಿಳಿಸಿದ್ದಾರೆ.

ಸರ್ಕಾರಿ ಗೌರವಗಳೊಂದಿಗೆ ಯೋಧನ ಅಂತ್ಯಕ್ರಿಯೆ

ಉತ್ತರಾಖಂಡ್‌ನಲ್ಲಿ ಕರ್ತವ್ಯದಲ್ಲಿದ್ದ ವೇಳೆ ಹೃದಯಾಘಾತದಿಂದ ನಿಧನರಾಗಿದ್ದ ಸುಬೇದಾರ್

ಶಾಸಕ ಕೆ.ಜಿ.ಬೋಪಯ್ಯ ಸೇರಿದಂತೆ ನೂರಾರು ಮಂದಿಯಿಂದ ಅಂತಿಮ ದರ್ಶನ





ಮಡಿಕೇರಿ,ಅ.14– ಉತ್ತರಾಖಂಡ್‌ನಲ್ಲಿ ಸೇವೆಯಲ್ಲಿದ್ದ ಸಂದರ್ಭದಲ್ಲಿ ಹೃದಯಾಘಾತದಿಂದ ವಿಧಿವಶರಾದ ಸೋಮವಾರಪೇಟೆ ತಾಲೂಕಿನ ತಾಕೇರಿ ಗ್ರಾಮ ನಿವಾಸಿ ಸುಬೇದಾರ್ ನಾಪಂಡ ಸಿ.ಮಹೇಶ್ ಅಂತ್ಯಕ್ರಿಯೆ ಸರ್ಕಾರಿ ಗೌರವಗಳೊಂದಿಗೆ ಶುಕ್ರವಾರ ಸ್ವಗ್ರಾಮದಲ್ಲಿ ನೆರವೇರಿತು.

ಕಿರಗಂದೂರು ಪ್ರಾಥಮಿಕ ಶಾಲೆಯಲ್ಲಿ ಮೃತರ ಪಾರ್ಥಿವ ಶರೀರವನ್ನಿಟ್ಟು ಸಾರ್ವಜನಿಕರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಶಾಸಕ ಕೆ.ಜಿ. ಬೋಪಯ್ಯ, ವಿಧಾನಪರಿಷತ್ ಮಾಜಿ ಸದಸ್ಯೆ ಶಾಂತೆಯಂಡ ವೀಣಾ ಅಚ್ಚಯ್ಯ ಸೇರಿದಂತೆ ನೂರಾರು ಮಂದಿ ಸಾರ್ವಜನಿಕರು ಪುಷ್ಪ ನಮನ ಸಲ್ಲಿಸುವ ಮೂಲಕ ಸುಬೇದಾರ್ ನಾಪಂಡ ಸಿ.ಮಹೇಶ್ ಅವರಿಗೆ ಅಂತಿಮ ಗೌರವ ನಮನ ಸಮರ್ಪಿಸಿದರು.

ಉತ್ತರಾಖಂಡ್‌ನ ಜೋಷಿಮಠ್‌ನಿಂದ ಆಗಮಿಸಿದ್ದ ಸುಬೇದಾರ್ ವಿ.ಮಣಿ, ಹವಾಲ್ದಾರ್ ಪ್ರಸಾದ್, ನಾಯಕ್ ಟಿ.ಆರ್. ರಾಹುಲ್ ಅವರುಗಳು ಮೃತರ ಪಾರ್ಥಿವ ಶರೀರದ ಮೇಲೆ ಹೊದಿಸಲಾಗಿದ್ದ ರಾಷ್ಟ್ರಧ್ವಜವನ್ನು ಗೌರವ ಪೂರ್ವಕವಾಗಿ ತೆಗೆದು ಸುಬೇದಾರ್ ನಾಪಂಡ ಮಹೇಶ್ ಅವರ ಪತ್ನಿ ವಿನಿತಿ ಅವರಿಗೆ ಹಸ್ತಾಂತರಿಸಿದರು. ತಂದೆಯ ಅಗಲಿಕೆಯ ನೋವನ್ನು ನುಂಗಿಕೊಂಡ ಪುಟ್ಟ ಮಗಳು ತೀಕ್ಷ ಹಾಗೂ ಪುತ್ರ ಕವನ್ ತಮ್ಮ ತಂದೆಯ ಪಾರ್ಥಿವ ಶರೀರದ ಮೇಲೆ ಹೊದಿಸಿದ್ದ ರಾಷ್ಟ್ರಧ್ವಜಕ್ಕೆ ಸೆಲ್ಯೂಟ್ ಸಮರ್ಪಿಸುವ ಮೂಲಕ ಗೌರವ ವಿದಾಯ ಸಲ್ಲಿಸಿದರು.

ಈ ವೇಳೆ ಸುತ್ತಲು ನೆರೆದಿದ್ದ ಮಂದಿಯ ಕಣ್ಣಾಲಿಗಳು ತೇವಗೊಂಡವು. ಮೃತರ ಪಾರ್ಥಿವ ಶರೀರದ ಮುಂದೆ ನಾಪಂಡ ಮಹೇಶ್ ಅವರ ತಾಯಿ ಮಲ್ಲಿಗೆ, ಅವರ ಪತ್ನಿ, ಮಕ್ಕಳು ಹಾಗೂ ಕುಟುಂಬಸ್ಥರು ರೋಧಿಸುತ್ತಿದ್ದ ದೃಶ್ಯ ಮನ ಕಲಕುವಂತಿತ್ತು.

ಕೊಡಗು ಪೊಲೀಸ್ ಇಲಾಖೆಯ ವತಿಯಿಂದ ಡಿವೈಎಸ್‌ಪಿ ಗಂಗಾಧರಪ್ಪ ಪೊಲೀಸ್ ಇನ್ಸ್‌ಪೆಕ್ಟರ್ ರಾಮಚಂದ್ರನಾಯಕ್ ಅವರು ಹೂಗುಚ್ಛ ಅರ್ಪಿಸಿ ಗೌರವ ವಂದನೆ ಸಲ್ಲಿಸಿದರು. ಮಡಿಕೇರಿ ಡಿಎಆರ್ ಘಟಕದ ಸಿಬ್ಬಂದಿ, ಆರಕ್ಷಕ ಉಪನಿರೀಕ್ಷಕ ಡಿ.ಬಿ.ಸುಬ್ರಮಣ್ಯ ಅವರ ನೇತೃತ್ವದಲ್ಲಿ ಕುಶಾಲತೋಪು ಸಿಡಿಸಿದರು. ಎಎಸ್‌ಐ ಸಿದ್ದೇಶ್ ಅವರ ನೇತೃತ್ವದಲ್ಲಿ ಪೊಲೀಸರ ತಂಡ ಬ್ಯಾಂಡ್ ಮೂಲಕ ನಮನ ಸಲ್ಲಿಸಿತು.

ಉಪವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ತಹಶೀಲ್ದಾರ್ ನರಗುಂದ್ ಕಂದಾಯ ಇಲಾಖಾ ಅಧಿಕಾರಿಗಳು, ಕಿರಗಂದೂರು ಗ್ರಾಮ ಪಂಚಾಯಿತಿ ಅಧ್ಯಕ್ಷರು ಸೇರಿದಂತೆ ಸದಸ್ಯರು, ಗ್ರಾಮಾಭಿವೃದ್ಧಿ ಸಮಿತಿ ಪ್ರಮುಖರು, ಗ್ರಾಮದ ಹಿರಿಯರು ಅಂತ್ಯಸಂಸ್ಕಾರ ಸಂದರ್ಭ ಭಾಗಿಯಾಗಿ ನಮನ ಸಲ್ಲಿಸಿದರು. ಬಳಿಕ ಸುಬೇದಾರ್ ನಾಪಂಡ ಸಿ. ಮಹೇಶ್ ಅವರ ಪಾರ್ಥಿವ ಶರೀರವನ್ನು ತೆರೆದ ಜೀಪಿನಲ್ಲಿ ಮೆರವಣಿಗೆ ಮೂಲಕ ರುದ್ರಭೂಮಿವರೆಗೆ ಕೊಂಡೊಯ್ಯಲಾಯಿತು. ನಂತರ ಕೊಡವ ಸಮುದಾಯದ ಅಂತಿಮ ವಿಧಿವಿಧಾನದಂತೆ ಅಂತ್ಯ ಸಂಸ್ಕಾರ ನಡೆಸಲಾಯಿತು.

ಅರೆಭಾಷೆ ತೊಟ್ಟಿಲು ತೂಗಲು ಎಲ್ಲರೂ ಕೈಜೋಡಿಸಿ

'ಅರೆಭಾಷೆ ಅಕಾಡೆಮಿ ಸಾಧನೆಯ ಹಾದಿ' ಕೃತಿ ಬಿಡುಗಡೆ



ಮಡಿಕೇರಿ,ಅ.14– ಅತ್ಯಂತ ಶ್ರೀಮಂತವಾದ ಅರೆಭಾಷೆಯ ತೊಟ್ಟಿಲನ್ನು ತೂಗಲು ಎಲ್ಲರೂ ಕೈಜೋಡಿಸಬೇಕೆಂದು ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಲಕ್ಷ್ಮೀನಾರಾಯಣ ಕಜೆಗದ್ದೆ ಅವರು ಮನವಿ ಮಾಡಿದ್ದಾರೆ.

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಮೂರು ವರ್ಷಗಳ ಅವಧಿ ಪೂರ್ಣಗೊಳ್ಳುತ್ತಿರುವ ಹಿನ್ನೆಲೆ, ನಗರದ ಗೌಡ ಸಮಾಜದ ಸಭಾಂಗಣದಲ್ಲಿ 'ಅರೆಭಾಷೆ ಅಕಾಡೆಮಿ ಸಾಧನೆಯ ಹಾದಿ' ಕೃತಿಯನ್ನು ಅಕಾಡೆಮಿ ಸದಸ್ಯರೊಂದಿಗೆ ಅನಾವರಣಗೊಳಿಸಿ, ಸಂವಾದದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅಕಾಡೆಮಿಯ ಜವಾಬ್ದಾರಿಯನ್ನು ಸದಸ್ಯರೊಂದಿಗೆ 2019ರ ಅ.15ರಂದು ವಹಿಸಿಕೊಂಡ ಬಳಿಕ, ಅರೆಭಾಷಾ ಸಂಸ್ಕೃತಿ, ಸಾಹಿತ್ಯ ಪರಂಪರೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನ ಕಾರ್ಯ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತು ಅದರ ಅನುಷ್ಠಾನ ಹಂತಗಳಲ್ಲಿ ಸಾಕಷ್ಟು ಸವಾಲುಗಳಿದ್ದವು. ಹೀಗಿದ್ದೂ ತಮ್ಮ ಅವಧಿಯಲ್ಲಿ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿಯ ಯೋಜನೆಗಳನ್ನು ರೂಪಿಸಿಕೊಂಡು ಅನುಷ್ಠಾನಗೊಳಿಸುವ ಪ್ರಾಮಾಣಿಕವಾಗಿ ಪ್ರಯತ್ನಿಸಿರುವುದಾಗಿ ಹೇಳಿದರು.

ಹೊಸ ಆಯಾಮ: ಅಕಾಡೆಮಿ ತನ್ನ ಅವಧಿಯಲ್ಲಿ ಅತ್ಯಂತ ಪ್ರಮುಖವಾಗಿ ಅರೆಭಾಷಾ ಪದಕೋಶ, ವಿಶ್ವಕೋಶ ಮತ್ತು ಅರೆಭಾಷೆ ಪಾರಂಪರಿಕ ವಸ್ತುಕೋಶವನ್ನು ಸಿದ್ಧಗೊಳಿಸಿದೆ. ಅದಲ್ಲದೆ ಪದಕೋಶ, ವಿಶ್ವಕೋಶಗಳು ಜಗತ್ತಿನ ಯಾವುದೇ ಭಾಗದಲ್ಲಿ ಅರೆಭಾಷಿಗರಿಗೆ ಸುಲಭವಾಗಿ ದೊರಕುವಂತೆ ಮಾಡಲು 'ಡಿಜಿಟಲೀಕರಣ' ತಂತ್ರಜ್ಞಾನವನ್ನು ಬಳಸಿರುವುದು ಅತ್ಯಂತ ತೃಪ್ತಿಯನ್ನು ನೀಡಿದೆ. ಇದರಿಂದ ಅರೆಭಾಷೆಯ ಮಾಹಿತಿಯನ್ನು ಎಲ್ಲರೂ ಆನ್‌ಲೈನ್ ಮೂಲ ಪಡೆಯಲು ಸಾಧ್ಯವಾಗಿದೆಯೆಂದು ಹೇಳಿದರು.

ಸಮುದಾಯಕ್ಕೆ ಸೀಮಿತವಲ್ಲ: ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯನ್ನು ಒಂದು ಸಮುದಾಯಕ್ಕೆ ಸೀಮಿತವಾಗಿ ನೋಡುವ ಅಪಾಯವಿದೆ. ಈ ಹಿನ್ನೆಲೆ ಅಕಾಡೆಮಿ ಅರೆಭಾಷೆಯನ್ನು ಅರೆಭಾಷಾ ಸಮೂಹದಿಂದ ಹೊರಗಿರುವ, ಭಾಷಾ ಅಭಿಮಾನವಿರುವವರ ಕಡೆಯೂ ತನ್ನ ನೋಟವನ್ನು ಹರಿಸಿದೆ. ಈ ಪ್ರಯತ್ನದಿಂದ ಅಕಾಡೆಮಿ ಆಯೋಜಿಸುವ ಅರೆಭಾಷಾ ನಾಟಕ, ಯಕ್ಷಗಾನ ಹೀಗೆ ಮೊದಲಾದ ಚಟುವಟಿಕೆ, ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಅರೆಭಾಷಾ ಸಮೂಹಕ್ಕೆ ಸೇರದವರು, ಭಾಷೆಯ ಬಗ್ಗೆ ಅಭಿಮಾನ ಉಳ್ಳವರು ತಮ್ಮನ್ನು ತೊಡಗಿಸಿಕೊಂಡದ್ದನ್ನು ಅವರು ಸ್ಮರಿಸಿದರು. ಇಂದು ಅರೆಭಾಷೆ ಸಂಸ್ಕೃತಿಯ ಶ್ರೀಮಂತಿಕೆ, ಅದರ ಸೊಗಡಿನ ಪರಿಚಯವನ್ನು ನಾಡಿಗೆ ಮಾಡಿಕೊಡುವ ಪ್ರಯತ್ನದ ಒಂದು ಹೆಜ್ಜೆ ಇಟ್ಟಿರುವುದಾಗಿ ಅವರು ಹೇಳಿದರು. ಅರೆಭಾಷೆಯಲ್ಲಿ ಸಾಹಿತ್ಯ ಕೃಷಿ ಹಿಂದೆಂದಿಗಿಂತಲೂ ಹೆಚ್ಚಾಗಿ ನಡೆಯುವ ಅಗತ್ಯತೆ ಇರುವುದಾಗಿ ತಿಳಿಸಿದ ಲಕ್ಷ್ಮೀನಾರಾಯಣ ಕಜೆಗದ್ದೆ, ಆ ಮೂಲಕ ಭಾಷೆಯ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಬೆಳೆಸಿಕೊಳ್ಳಬೇಕೆಂದು ಎಂದರು.

ತಲೆಮಾರಿನ ಆತಂಕ: ಮನೆ ಮನೆಗಳಲ್ಲಿ ಅರೆಭಾಷೆಯ ಬಳಕೆ ಹೆಚ್ಚಾಗಬೇಕು ಎನ್ನುವ ಆಶಯದೊಂದಿಗೆ, ಇಂದಿನ ತಲೆಮಾರು ತಮ್ಮ ಮಾತೃಭಾಷೆಯಿಂದ ದೂರ ಸರಿಯುತ್ತಿರುವ ಆತಂಕವನ್ನು ಲಕ್ಷ್ಮೀನಾರಾಯಣ ಕಜೆಗದ್ದೆ ವ್ಯಕ್ತಪಡಿಸಿದರು. ಈ ಎಲ್ಲಾ ಸವಾಲುಗಳನ್ನು ಮೆಟ್ಟಿ ನಿಲ್ಲುವ ಅಗತ್ಯತೆ ಇದೆ. ಪ್ರಸ್ತುತ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅರೆಭಾಷಾ ಸಂಶೋಧನಾ ಕೇಂದ್ರವನ್ನು ಮಾಡುವ ಪ್ರಯತ್ನಗಳು ಜಾರಿಯಲ್ಲಿದೆಯಲ್ಲದೆ ಶಾಲಾ ಕಾಲೇಜುಗಳ ಪಠ್ಯದಲ್ಲಿ ಭಾಷಾ ವಿಷಯವನ್ನಾಗಿ 'ಅರೆಭಾಷಾ' ಕಲಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲೂ ಪ್ರಯತ್ನಗಳು ಸಾಗಿದೆ. ಸುಬ್ರಹ್ಮಣ್ಯದ ಕಾಲೇಜಿನಲ್ಲಿ ಅರೆಭಾಷೆಯನ್ನು ಒಂದು ಭಾಷಾ ವಿಷಯವನ್ನಾಗಿ ಕಲಿಸಲು ಮುಂದೆ ಬಂದಿರುವುದನ್ನು ಹೆಮ್ಮೆಯಿಂದ ಅವರು ತಿಳಿಸಿದರು.

ಅಕಾಡೆಮಿ ಸದಸ್ಯ ಡಾ. ವಿಶ್ವನಾಥ ಬದಿಕಾನ ಅವರು, ಪದಕೋಶ ಮತ್ತು ವಿಶ್ವಕೋಶ ರಚನೆಯ ತಮ್ಮ ಅನುಭವಗಳನ್ನು ಹಂಚಿಕೊಂಡರು. ಆರು ತಿಂಗಳ ಅವಧಿಯ ನಿರಂತರ ಪ್ರಯತ್ನ ಮತ್ತು ಇಂದಿನ ಮಾಹಿತಿ ತಂತ್ರಜ್ಞಾನದ ಸಹಕಾರದೊಂದಿಗೆ ಅರೆಭಾಷಾ ಪದಕೋಶವನ್ನು ರಚಿಸಲಾಗಿದ್ದು, ಇದರಲ್ಲಿ 18 ಸಾವಿರಕ್ಕೂ ಹೆಚ್ಚಿನ ಪದಗಳ ಅರ್ಥವನ್ನು, ಅದರ ಬಳಕೆಯ ವಿಧಾನಗಳನ್ನು ತಿಳಿಯಪಡಿಸಲಾಗಿದೆ. ಇದರ ರಚನೆ ಒಂದು ಅದ್ಭುತವಾದ ಅನುಭವ ತಮಗೆ ನೀಡಿರುವುದಾಗಿ ತಿಳಿಸಿದರಲ್ಲದೆ, ವಿಶ್ವಕೋಶದಲ್ಲಿ 25 ಲೇಖಕರ ವಿವಿಧ ವಿಷಯಗಳ ಅರೆಭಾಷಾ ಲೇಖನಗಳಿರುವ ಬಗ್ಗೆ ಮಾಹಿತಿ ನೀಡಿದರು.

ಅಕಾಡೆಮಿ ರಿಜಿಸ್ಟ್ರಾರ್ ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿ ಚಿನ್ನಸ್ವಾಮಿ, ಅಕಾಡೆಮಿ ಅಧ್ಯಕ್ಷರು ಮತ್ತು ಸದಸ್ಯರ ಕ್ರಿಯಾಶೀಲವಾದ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆಯ ನುಡಿಗಳನ್ನಾಡಿದರು.

ಈ ಸಂದರ್ಭ ಅಕಾಡೆಮಿ ಸದಸ್ಯ ಎ.ಕೆ. ಧನಂಜಯ ಅಗೋಳಿಕಜೆ, ಜಾನಕಿ ಬ್ರಹ್ಮ, ಸ್ಮಿತಾ ಅಮೃತರಾಜ್, ಚಂದ್ರಾವತಿ ಬಡ್ಡಡ್ಕ, ಡಾ. ದಯಾನಂದ ಕೂಡಕಂಡಿ, ಕುಸುಮಾಧರ ಎ.ಟಿ, ಜಯಪ್ರಕಾಶ್ ಮೋಂಟಡ್ಕ, ಪುರುಷೋತ್ತಮ ಕಿರ್ಲಾಯ, ಡಾ. ಪುರುಷೋತ್ತಮ ಕೆ.ವಿ., ಕಿರಣ್ ಕುಂಬಳಚೇರಿ ಉಪಸ್ಥಿತರಿದ್ದರು.

ನ.12, ರಾಷ್ಟ್ರೀಯ ಮೆಗಾ ಲೋಕ ಅದಾಲತ್



ವಿರಾಜಪೇಟೆ, ಅ.14– ನ.12 ರಂದು ನಡೆಯಲಿರುವ ರಾಷ್ಟ್ರೀಯ ಮೆಗಾ ಲೋಕ ಅದಾಲತ್‌ನ ಪೂರ್ವಭಾವಿ ಸಭೆಯು ಹಿರಿಯ ನ್ಯಾಯಾಧೀಶರಾದ ಎಂ.ಜಿ.ಲೋಕೇಶ್ ಅವರ ಅಧ್ಯಕ್ಷತೆಯಲ್ಲಿ ನ್ಯಾಯಾಲಯದ ಸಭಾಂಗಣದಲ್ಲಿ ನಡೆಯಿತು.

ಸಭೆಯಲ್ಲಿ ಮಾತನಾಡಿದ ಅವರು ಮೆಗಾ ಲೋಕ ಅದಾಲತ್‌ನಲ್ಲಿ ಚೆಕ್‌ಬೌನ್ಸ್ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಿಕೊಳ್ಳುವಂತೆ ಸೂಚಿಸಿದರು. ಪೊಲೀಸರು ಸಮನ್ಸ್ ಹಾಗೂ ವಾರಂಟ್‌ಗಳನ್ನು ತಡಮಾಡದೆ ಸಮಯಕ್ಕೆ ಸರಿಯಾಗಿ ಜಾರಿ ಮಾಡುವಂತಾಗಬೇಕು ಎಂದರು.

ಈ ಸಂದರ್ಭ ನ್ಯಾಯಾಧೀಶ ಸಂತೋಷ್ ಕೊಠಾರಿ ಅವರು ಮಾತನಾಡಿ ನ್ಯಾಯಾಲಯದ ಆವರಣ ಮತ್ತು ಮುಂಭಾಗದ ರಸ್ತೆಯಲ್ಲಿ ವಾಹನಗಳನ್ನು ನಿಲುಗಡೆಗೊಳಿಸುವುದರಿಂದ ಇತರ ವಾಹನಗಳು ಸಂಚಾರಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಪುರಸಭೆಯ ಮುಖ್ಯಾಧಿಕಾರಿ ಚಂದ್ರ ಕುಮಾರ್ ಅವರೊಂದಿಗೆ ವಾಹನಗಳ ನಿಲುಗಡೆಗೆ ಜಾಗ ನೀಡುವಂತೆ ಚರ್ಚಿಸಲಾಯಿತು.

ಸಭೆಯಲ್ಲಿ ಜಿಲ್ಲಾ ಅಪರ ಹಾಗೂ ಸತ್ರ ನ್ಯಾಯಾಧೀಶರಾದ ಸುಜಾತ, ಅಪರ ಸಿವಿಲ್ ನ್ಯಾಯಾಧೀಶರಾದ ಮಹಾಲಕ್ಷ್ಮಿ, ವಕೀಲರ ಸಂಘದ ಅಧ್ಯಕ್ಷ ಐ.ಆರ್.ಪ್ರಮೋದ್, ಸರ್ಕಾರಿ ಅಭಿಯೋಜಕರಾದ ಯಾಸಿನ್ ಅಹ್ಮದ್, ಸಿ.ಬಿ. ಅನಿತಾ, ನಗರ ಪೊಲೀಸ್ ಠಾಣಾಧಿಕಾರಿ ಶ್ರೀಧರ್, ಶಿರಸ್ತೇದಾರ್ ಅಣ್ಣು ನಾಯಕ್, ಕೆ.ಎಂ.ದೇವಯ್ಯ ಇತರರು ಭಾಗವಹಿಸಿದ್ದರು.

ಅ.17, ತಲಕಾವೇರಿ ಪವಿತ್ರ ತೀರ್ಥೋದ್ಭವ

ಮಡಿಕೇರಿ, ಅ.14– ಇದೇ ಅಕ್ಟೋಬರ್ 17 ರಂದು ರಾತ್ರಿ 7.21 ಗಂಟೆಗೆ ಸಲ್ಲುವ ಮೇಷ ಲಗ್ನದಲ್ಲಿ 'ಶ್ರೀ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ' ಸಂಭವಿಸುವುದರಿಂದ, ಈ ಬಗ್ಗೆ ಅಗತ್ಯ ಸಿದ್ಧತೆ ಮಾಡಿಕೊಂಡಿರುವ ಸಂಬಂಧ ಅಧಿಕಾರಿಗಳಿಂದ ಪ್ರಭಾರ ಜಿಲ್ಲಾಧಿಕಾರಿ ಭಂವರ್ ಸಿಂಗ್ ಮೀನಾ ಮಾಹಿತಿ ಪಡೆದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಮೀನಾ ಅವರು, ಪವಿತ್ರ ತೀರ್ಥೋದ್ಭವವು ರಾತ್ರಿ ಸಂಭವಿಸುವುದರಿಂದ ಅಗತ್ಯ ಬೆಳಕು ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ತಲಕಾವೇರಿಯಲ್ಲಿ ಗಣ್ಯರು ಹಾಗೂ ಮಾಧ್ಯಮವರಿಗೆ ಹಿಂದಿನ ವರ್ಷದಂತೆ ಪ್ರತ್ಯೇಕ ಗ್ಯಾಲರಿ ವ್ಯವಸ್ಥೆ ಮಾಡುವುದು, ಗಣ್ಯ ವ್ಯಕ್ತಿಗಳ ವಾಹನ ನಿಲುಗಡೆ, ವಿದ್ಯುನ್ಮಾನ ಮಾಧ್ಯಮಗಳ 'ಒಬಿ' ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಸುಗಮ ಸಾರಿಗೆ ಸಂಪರ್ಕ ಸಂಬಂಧ ಅಗತ್ಯ ಬಸ್ ಸೌಲಭ್ಯ ಕಲ್ಪಿಸುವುದು, ಸೆಸ್ಕ್ ವತಿಯಿಂದ ವಿದ್ಯುತ್ ಸಂಪರ್ಕ ಒದಗಿಸುವುದು, ಶುಚಿತ್ವಕ್ಕೆ ಒತ್ತು ನೀಡುವುದು, ಅಲ್ಲಲ್ಲಿ ಡಸ್ಟ್‌ಬಿನ್ ಇಡುವುದು, ಕುಡಿಯುವ ನೀರು ವ್ಯವಸ್ಥೆ ಮಾಡುವುದು ಮತ್ತಿತರ ಕಾರ್ಯಗಳನ್ನು ಗ್ರಾ.ಪಂ. ಅಧಿಕಾರಿಗಳು ನಿರ್ವಹಿಸುವಂತೆ ಜಿಲ್ಲಾಧಿಕಾರಿ ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ತಾತ್ಕಾಲಿಕ ಕ್ಲಿನಿಕ್ ತೆರೆಯುವುದು, ಧಾರ್ಮಿಕ ಗೀತಗಾಯನ ಕಾರ್ಯಕ್ರಮ ಏರ್ಪಡಿಸುವುದು, ಹೀಗೆ ಹಲವು ಕಾರ್ಯಗಳನ್ನು ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅವರು ಸೂಚನೆ ನೀಡಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಹಾಗೂ

ಸಿದ್ಧತೆ ಬಗ್ಗೆ ಮಾಹಿತಿ ಪಡೆದ ಭುವರ್ ಸಿಂಗ್ ಮೀನಾ

ತಲಕಾವೇರಿ ಮತ್ತು ಭಾಗಮಂಡಲ ಭಗಂಡೇಶ್ವರ ದೇವಾಲಯಗಳ ಆಡಳಿತಾಧಿಕಾರಿ ಡಾ.ನಂಜುಂಡೇಗೌಡ, ಕಾರ್ಯನಿರ್ವಹಣಾಧಿಕಾರಿ ಕೃಷ್ಣಪ್ಪ ಅವರು ತಲಕಾವೇರಿ ಪವಿತ್ರ ತೀರ್ಥೋದ್ಭವ ಸಂಬಂಧ ಇದುವರೆಗೆ ಕೈಗೊಳ್ಳಲಾಗಿರುವ ಸಿದ್ಧತೆ ಬಗ್ಗೆ ಮಾಹಿತಿ ನೀಡಿದರು. ಉಪ ಪೊಲೀಸ್ ವರಿಷ್ಠಾಧಿಕಾರಿ ಗಜೇಂದ್ರ ಪ್ರಸಾದ್ ಅವರು ತೀರ್ಥೋದ್ಭವ ಸಂಬಂಧ ಪೊಲೀಸ್ ಇಲಾಖೆಯಿಂದ ಮೂವರು ಡಿವೈಎಸ್‌ಪಿ, 7 ಇನ್ಸ್‌ಪೆಕ್ಟರ್, 17 ಸಬ್‌ಇನ್ಸ್‌ಪೆಕ್ಟರ್ ಬಂದೋಬಸ್ತ್‌ಗೆ ನೇತೃತ್ವ ವಹಿಸಿದ್ದರು.

ಶಾರದಮ್ಮ ಪ್ರಕಾಶ್ ನಿಧನ



ಕುಶಾಲನಗರ, ಅ.14–ಪಟ್ಟಣದ ನಿವಾಸಿ ಶ್ರೀಮತಿ ಶಾರದಮ್ಮ(60) ಅನಾರೋಗ್ಯದಿಂದ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಶುಕ್ರವಾರ ಮಧ್ಯಾಹ್ನ ನಿಧನರಾದರು. ಮೃತರು ಪತಿ ಹಿರಿಯ ಪತ್ರಿಕಾ ವಿತರಕ ವಿ.ಪಿ.ಪ್ರಕಾಶ್, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಕುಶಾಲನಗರದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಚಾ.ನಗರ ಜಿಲ್ಲೆಯಾದ್ಯಂತ ಭಾರೀ ಮಳೆ

ತಗ್ಗು ಪ್ರದೇಶಗಳಿಗೆ ಹರಿದ ನೀರು, ಮತ್ತೆ ಕೋಡಿ ಬಿದ್ದ ಕೆರೆಗಳು, ಮನೆಗಳು ಜಲಾವೃತ







ಚಾಮರಾಜನಗರ,ಅ.14–ಜಿಲ್ಲೆಯಾದ್ಯಂತ ಗುರುವಾರ ಮಧ್ಯರಾತ್ರಿಯಿಂದ ಶುಕ್ರವಾರ ಮುಂಜಾನೆವರೆಗೆ ಧಾರಾಕಾರ ಮಳೆ ಸುರಿದಿದ್ದು, ಹಲವೆಡೆ ಅವಾಂತರ ಸೃಷ್ಟಿಯಾಗಿದೆ.

ಗುರುವಾರ ಮಧ್ಯರಾತ್ರಿ ಸುಮಾರು 2 ಗಂಟೆಯಿಂದ ಶುಕ್ರವಾರ ಬೆಳಗ್ಗೆ 6.30ರ ವರೆಗೂ ಸತತವಾಗಿ ಮಳೆ ಸುರಿಯಿತು.

ನಗರದಲ್ಲಿ ಅವಾಂತರ: ಜಿಲ್ಲಾ ಕೇಂದ್ರ ಚಾಮರಾಜನಗರದಲ್ಲಿ ಮಳೆಯಿಂದ ಅವಾಂತರ ಸೃಷ್ಟಿಯಾಯಿತು. ಜೋಡಿರಸ್ತೆಯಲ್ಲಿರುವ ಜಿಲ್ಲಾಡಳಿತ ಭವನ ಮುಂಭಾಗ ಯಥಾಪ್ರಕಾರ ಕೆರೆಯಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ರಾಜಕಾಲುವೆ ತುಂಬಿದ್ದರಿಂದ ಭಾರೀ ಪ್ರಮಾಣದ ನೀರು ಬಿ.ರಾಚಯ್ಯ ಜೋಡಿರಸ್ತೆಯಲ್ಲಿ ಹರಿಯಿತು. ಚರಂಡಿಗೆ ನೀರು ಹರಿದು ಹೋಗದ ಕಾರಣಕ್ಕೆ ಜಿಲ್ಲಾಡಳಿತ ಭವನ ನಿರ್ಮಾಣ ಮಾಡಿದ್ದ ಪೈಪ್‌ಲೈನ್ ಮೇಲೂ ನೀರು ಹರಿದು ಜಿಲ್ಲಾಡಳಿತ ಭವನ ಆವರಣಕ್ಕೆ ನುಗ್ಗಿತು. ಮಳೆನೀರಿನಿಂದ ಕಾಲುವೆ ಉಕ್ಕಿ ಹರಿಯುತ್ತಿದ್ದ ಪರಿಣಾಮ ಶುಕ್ರವಾರ ಬೆಳಗ್ಗೆ ಜೆಸಿಬಿ ಮೂಲಕ ನೀರು ಸರಾಗವಾಗಿ ಹರಿದು ಹೋಗಲು ವ್ಯವಸ್ಥೆ ಮಾಡಲಾಯಿತು. ಇದೇ ಕೆಲಸದಲ್ಲಿ ಹತ್ತಾರು ಪೌರಕಾರ್ಮಿಕರು ನಿರತರಾಗಿದ್ದರು. ಮಧ್ಯಾಹ್ನ 12 ಗಂಟೆಯಾದರೂ ಜೋಡಿರಸ್ತೆಯಲ್ಲಿ ನೀರು ನುಗ್ಗಿದ ಪರಿಣಾಮ ನಾಗರಿಕರು ಹಾಗೂ ವಾಹನ ಸವಾರರು ಪರದಾಡಿದರು.

ಮನೆಗಳು ಜಲಾವೃತ: ಮಳೆಯಿಂದ ನಗರದ 15ನೇ ವಾರ್ಡ್‌ನ ವ್ಯಾಪ್ತಿಗೆ ಬರುವ ಸೋಮಣ್ಣ ಲೇಔಟ್‌ನಲ್ಲಿ ಸುಮಾರು 100ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿದ್ದವು. ಇದರಿಂದ ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗಿದೆ. ಜಲಾವೃತಗೊಂಡಿದ್ದ ಮನೆಗಳಲ್ಲಿದ್ದ ವೃಯೋವೃದ್ಧರನ್ನು ಅಗ್ನಿಶಾಮಕ ಸಿಬ್ಬಂದಿ ಸ್ಥಳಾಂತರಿಸಿ ಮುನ್ನೆಚ್ಚರಿಕೆ ವಹಿಸಿದರು. ವಾರ್ಡ್‌ನ ಸದಸ್ಯ ಆರ್.ಪಿ.ನಂಜುಂಡಸ್ವಾಮಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಪ್ರತಿಭಟನೆ: ಜಲಾವೃತಗೊಂಡಿದ್ದ ಸೋಮಣ್ಣ ಲೇಔಟ್ ನಿವಾಸಿಗಳು ನಗರದ ಜಿಲ್ಲಾಡಳಿತ ಭವನದ ಮುಂಭಾಗ ಶುಕ್ರವಾರ ಬೆಳಗ್ಗೆ ಪ್ರತಿಭಟಿಸಿದರು. ಜನಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತದ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು, ಬಡಾವಣೆಯ ಸಮಸ್ಯೆಗಳನ್ನು ಕೊಡಲೇ ಬಗೆಹರಿಸುವಂತೆ ವಾರ್ಡ್‌ನ ಸದಸ್ಯ ಆರ್.ಪಿ.ನಂಜುಂಡಸ್ವಾಮಿ, ಮುಖಂಡ ಚಾ.ಗು.ನಾಗರಾಜು ಸೇರಿದಂತೆ ವಾರ್ಡ್‌ನ ನಿವಾಸಿಗಳು ಆಗ್ರಹಿಸಿದರು.

ಮತ್ತೆ ಕೋಡಿ ಬಿದ್ದ ಕೆರೆಗಳು: ಸತತ ಮಳೆಯಿಂದ ಸಂಪೂರ್ಣ ತುಂಬಿದ್ದ ಕೆರೆಗಳು ಇದೀಗ ಮತ್ತೆ ಕೋಡಿ ಬಿದ್ದಿವೆ. ಚಾಮರಾಜಗರ ತಾಲೂಕಿನ ಕೋಡಿಮೋಳೆ ಕೆರೆ, ಹರದನಹಳ್ಳಿಯ ಮಗದಕೆರೆ, ಅರಕಲವಾಡಿ ಕೆರೆ ಸೇರಿದಂತೆ ಅನೇಕ ಕೆರೆಗಳು ಭಾರೀ ಮಳೆಗೆ ಮತ್ತೆ ಕೋಡಿ ಬಿದ್ದಿವೆ.

ರಸ್ತೆ ಸಂಪರ್ಕ ಕಡಿತ: ಭಾರೀ ಮಳೆಯಿಂದ ರಸ್ತೆಯಲ್ಲಿ ನೀರು ಹರಿಯುತ್ತಿದ್ದ ಕಾರಣ ಚಾಮರಾಜನಗರ ತಾಲೂಕಿನ ಕಿಲಗೆರೆ–ಮಾದಲವಾಡಿ ಗ್ರಾಮಗಳ ಸಂಪರ್ಕ ಕಡಿತವಾಯಿತು. ಈ ಮಾರ್ಗದಲ್ಲಿರುವ ಸೇತುವೆ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯುತ್ತಿರುವುದರಿಂದ ಸಂಚಾರ ನಿಷೇಧಿಸಲಾಗಿದೆ.

ಬೆಳೆ ನಷ್ಟ: ಜಿಲ್ಲೆಯಾದ್ಯಂತ ಕಳೆದ ಮೂರು ತಿಂಗಳಿಂದ ಮಳೆ ಬೀಳುತ್ತಿರುವ ಕಾರಣ ರೈತರ ಬೆಳೆ ನಷ್ಟವಾಗಿದೆ. ಜಮೀನುಗಳಲ್ಲಿ ನೀರು ನಿಂತಿರುವುದರಿಂದ ಕೃಷಿ ಚಟುವಟಿಕೆ ಸಾಧ್ಯವಾಗದೇ ರೈತರು ಬೆಳೆದ ಬೆಳೆ ಕೈ ಸೇರದಂತಾಗಿದೆ.

ಮಳೆಹಾನಿ ಪ್ರದೇಶಗಳಿಗೆ ಶಾಸಕರ ಭೇಟಿ, ಪರಿಶೀಲನೆ





ಚಾ.ನಗರದ ಮಳೆ ಹಾನಿ ಗ್ರಾಮಗಳಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ, ಹನೂರಿನಲ್ಲಿ ಶಾಸಕ ಆರ್. ನರೇಂದ್ರ ಪರಿಶೀಲನೆ ನಡೆಸಿದರು.

ಚಾಮರಾಜನಗರ, ಅ. 14–ಗುರುವಾರ ರಾತ್ರಿ ನಿರಂತರ ಸುರಿದ ಜೋರು ಮಳೆ ಹಾನಿಗೀಡಾದ ಚಾಮರಾಜನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳು ಹಾಗೂ ಮನೆಗಳಿಗೆ ಶುಕ್ರವಾರ ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಪರಿಶೀಲಿಸಿದರು.

ಮೊದಲಿಗೆ ಹರದನಹಳ್ಳಿ ದೇವಸ್ಥಾನದ ಹತ್ತಿರದಲ್ಲಿರುವ ಮನೆಗಳಿಗೆ ನೀರು ನುಗ್ಗಿ ಹಾನಿಯಾಗಿರುವುದನ್ನು ಗಮನಿಸಿದ ಶಾಸಕರು, ತಕ್ಷಣ ಕಾಲುವೆ, ಹೆದ್ದಾರಿ ಕಾಮಗಾರಿ ಪೂರ್ಣಗೊಳಿಸಿ ಮಳೆ ಹಾಗೂ ಕೊಳಚೆ ನೀರು ಹೊರ ಹೋಗುವಂತೆ ವ್ಯವಸ್ಥೆ ಮಾಡಲು ಇಓ ಪೂರ್ಣಿಮಾಗೆ ಸೂಚಿಸಿದರು. ಅಲ್ಲಿಂದ ತೆರಳಿ ಅಂಕನಶೆಟ್ಟಿಪುರದಲ್ಲಿ ಮಳೆಯಿಂದ ಕುಸಿದಿರುವ ಮನೆ, ನೀರು ತುಂಬಿರುವ ಕೊಟ್ಟಿಗೆ ಹಾಗೂ ರಸ್ತೆಗಳನ್ನು ಪರಿಶೀಲಿಸಿದರು. ಸ್ಥಳದಲ್ಲಿಯೇ ತಹಸೀಲ್ದಾರ್ ಬಸವರಾಜು ಅವರಿಗೆ ಶೀಘ್ರ ಪರಿಹಾರ ವಿತರಣೆಗೆ ಆದೇಶಿಸಿದರು. ಅಲ್ಲದೆ ಅಂಕನಶೆಟ್ಟಿಪುರ ಗ್ರಾಮಕ್ಕೆ ನೀರು ನುಗ್ಗುವುದನ್ನು ತಡೆಯಯಲು ಉದ್ಯೋಗ ಖಾತರಿ ಯೋಜನೆಯಡಿ ಕಾಲುವೆಗೆ ಹೆಚ್ಚುವರಿ ಮಣ್ಣು ಹಾಕಿಸುವಂತೆ ಹಾಗೂ ಗುಂಡಿಗಳನ್ನು ಮುಚ್ಚುವಂತೆ ಕಾರ್ಯದರ್ಶಿ ನಾಗರಾಜುಗೆ ನಿರ್ದೇಶಿಸಿದರು.

ನಂತರ ವೆಂಕಟಯ್ಯನಛತ್ರ, ಅಮಚವಾಡಿ ಗ್ರಾಮಗಳ ಮಳೆಹಾನಿ ಪ್ರದೇಶಗಳಿಗೆ ಭೇಟಿ ನೀಡಿ, ವೀಕ್ಷಿಸಿದರು. ಈ ಸಂದರ್ಭದಲ್ಲಿ ಗ್ರಾಮಲೆಕ್ಕಾಧಿಕಾರಿ ಸ್ವಪ್ನ, ಮುಖಂಡರಾದ ನಾಗವಳ್ಳಿ ನಾಗಯ್ಯ, ಎಪಿಎಂಸಿ ನಿರ್ದೇಶಕ ಸೋಮೇಶ್, ಜಿಪಂ ಮಾಜಿ ಸದಸ್ಯ ರಮೇಶ್, ಸೋಮಣ್ಣ, ಹೊಸೂರು ಜಗದೀಶ್, ಗ್ರಾಪಂ ಸದಸ್ಯ ಸೋಮಣ್ಣ ಮೊದಲಾದವರಿದ್ದರು.

ಹನೂರು ವರದಿ: ಗುರುವಾರ ತಡರಾತ್ರಿ ಸುರಿದ ಭಾರೀ ಮಳೆಗೆ ಕೆರೆ ಕೋಡಿ ಬಿದ್ದು ಮನೆಗಳಿಗೆ ನೀರು ನುಗ್ಗಿದ್ದ ಹನೂರಿನ ಹಲವು ಸ್ಥಳಗಳಿಗೆ ಶಾಸಕ ಆರ್.ನರೇಂದ್ರ ಭೇಟಿ ನೀಡಿ, ಪರಿಶೀಲಿಸಿದರು.

ಕಳೆದ 3 ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆ ಹಾಗೂ ಉಡುತೊರೆ ಜಲಾಶಯದಿಂದ ಅತಿ ಹೆಚ್ಚು ನೀರು ಬಿಟ್ಟ ಪರಿಣಾಮ ಕುರುಬರದೊಡ್ಡಿ ಗ್ರಾಮದ ವಿವಿಧ ಬಡಾವಣೆಗಳ ಮನೆಗಳಿಗೆ ನೀರು ನುಗ್ಗಿ ಸಾಕಷ್ಟು ಹಾನಿಯಾಗಿತ್ತು. ಈ ಹಿನ್ನೆಲೆ ಶಾಸಕ ಆರ್.ನರೇಂದ್ರ ಶುಕ್ರವಾರ ಗ್ರಾಮಕ್ಕೆ ಭೇಟಿ ನೀಡಿ, ಅಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲದೆ ಜೆಸಿಬಿ ಮೂಲಕ ಅಲ್ಲಲ್ಲಿ ಸಂಗ್ರಹವಾಗಿದ್ದ ಮಳೆಯ ನೀರು ತೆರವಿಗೆ ಹರಿವಿನ ಮಾರ್ಗ ದುರಸ್ತಿಗೆ ಕ್ರಮ ಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ತಾಪಂ ಮಾಜಿ ಅಧ್ಯಕ್ಷ ಮುರುಡೇಶ್ವರಸ್ವಾಮಿ, ಮುಖಂಡರಾದ ಪೊನ್ನಾಚಿ ರಂಗಸ್ವಾಮಿ, ಅಜ್ಜೀಪುರ ನಾಗರಾಜು, ಪಾಳ್ಯ ಕೃಷ್ಣ ಸೇರಿದಂತೆ ಇನ್ನಿತರರಿದ್ದರು.

ಯಳಂದೂರಲ್ಲಿ ಕಬ್ಬು ಬೆಳೆಗಾರರ ಪ್ರತಿಭಟನೆ



ಯಳಂದೂರು, ಅ 14–ಕಬ್ಬು ಕಟಾವಿಗೆ ಹಾಗೂ ವೈಜ್ಞಾನಿಕ ಬೆಲೆ ನಿಗದಿಗೆ ಆಗ್ರಹಿಸಿ ಕಬ್ಬು ಬೆಳೆಗಾರರು ಪಟ್ಟಣದಲ್ಲಿಂದು ಪ್ರತಿಭಟಿಸಿದರು.

ಪಟ್ಟಣದ ಮಿನಿವಿಧಾನಸೌಧದ ಮುಂಭಾಗ ಶುಕ್ರವಾರ ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ನೇತೃತ್ವದಲ್ಲಿ ಜಮಾಯಿಸಿದ ಕಬ್ಬು ಬೆಳೆಗಾರರು, ಬೇಡಿಕೆ ಈಡೇರಿಸುವಂತೆ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕುಂತೂರು ಗ್ರಾಮದ ಬಣ್ಣಾರಿ ಅಮ್ಮನ್ ಷುಗರ್ಸ್ ಕಾರ್ಖಾನೆಯವರು ಅವಧಿ ಮೀರಿದ್ದರೂ ಕಬ್ಬು ಕಟಾವು ಮಾಡಿಲ್ಲ ಎಂದು ತಾಲೂಕಿನ ಮದ್ದೂರು ಗ್ರಾಮದ ಸಕ್ಕರೆ ಕಾರ್ಖಾನೆ ಕಚೇರಿ ಮುಂಭಾಗ ಗುರುವಾರ ಪ್ರತಿಭಟಿಸಿದ್ದ ರೈತ ಸಂಘದ ಸದಸ್ಯರು ಇಂದು ಮದ್ದೂರು ಗ್ರಾಮದಿಂದ ಪಾದಯಾತ್ರೆ ಮೂಲಕ ಯಳಂದೂರಿಗೆ ಆಗಮಿಸಿ ತಾಲೂಕು ಕಚೇರಿ ಎದುರು ಜಮಾಯಿಸಿದರು. ಈ ಸಂದರ್ಭದಲ್ಲಿ ಉಸ್ತುವಾರಿ ಸಚಿವರು, ಸರ್ಕಾರ, ಕಾರ್ಖಾನೆ ವಿರುದ್ಧ ಧಿಕ್ಕಾರ ಕೂಗಿದರಲ್ಲದೆ, ಕಾರ್ಖಾನೆ ವ್ಯವಸ್ಥಾಪಕ ಶರವಣ ಸ್ಥಳಕ್ಕೆ ಆಗಮಿಸುವಂತೆ ಪಟ್ಟು ಹಿಡಿದರು.

ಪಿಎಸ್‌ಐ ವಿರುದ್ಧ ಆಕ್ರೋಶ: ಇದೇ ವೇಳೆ ಪಿಎಸ್‌ಐ ಕರಿಬಸಪ್ಪ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾನಿರತರು, ಗುರುವಾರ ಪ್ರತಿಭಟನೆ ವೇಳೆ ಕರಿಬಸಪ್ಪ ರೈತರೊಂದಿಗೆ ಅನುಚಿತವಾಗಿ ವರ್ತಿಸಿದ್ದಾರೆ. ಅಲ್ಲದೆ ಕಾರ್ಖಾನೆ ವ್ಯವಸ್ಥಾಪಕರು, ಜಿಲ್ಲಾಧಿಕಾರಿ ಕರೆಯಿಸುವಂತೆ ಮನವಿ ಮಾಡಿದರೂ ನಿರ್ಲಕ್ಷಿಸಿ ಸ್ಥಳದಿಂದ ವಾಪಸ್ಸಾದರು ಎಂದು ಆಕ್ರೋಶ ಹೊರಹಾಕಿದರು.

ರೈತರಿಂದ ಬೆದರಿಕೆ: ಪ್ರತಿಭಟನೆ ವೇಳೆಯಲ್ಲಿ ರೈತರಾದ ಸಂತೋಷ, ಉಮೇಶ, ರೇವಣ್ಣ, ಮಿನಿವಿಧಾನಸೌಧ ಕಟ್ಟಡದ ಮೇಲೇರಿ ಕೆಳಗೆ ಹಾರುವ ಬೆದರಿಕೆ ಹಾಕಿದ ಘಟನೆಯೂ ನಡೆಯಿತು. ದೇವರಹಳ್ಳಿ ರಾಜಪ್ಪ ಪ್ರತಿಭಟನೆ ವೇಳೆ ಕುಸಿದು ಬಿದ್ದರು. ನಂತರ ಇವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂತು. ಕಟ್ಟಡದ ಮೇಲೇರಿದ್ದ ರೈತರನ್ನು ಮನವೊಲಿಸಿ, ಕೆಳಗಿಳಿಸುವಲ್ಲಿ ರೈತರು ಹಾಗೂ ಅಧಿಕಾರಿಗಳು ಯಶಸ್ವಿಯಾದರು. ತಹಸೀಲ್ದಾರ್ ಆನಂದಪ್ಪ ನಾಯಕ್ ರೈತ ಮುಖಂಡರಾದ ಗೌಡಹಳ್ಳಿ ಸೋಮಣ್ಣ, ಅಂಬಳೆ, ಶಿವಕುಮಾರ್, ಜಗದೀಶ್, ನಾಗರಾಜು, ಮಲ್ಲಿಕಾರ್ಜುನ ಸ್ವಾಮಿ, ಬೂದುಂಬಳ್ಳಿ ಪುಟ್ಟರಾಜು, ಪುರಾಣಿ ಪೋಡಿನ ನಾಗರಾಜು, ಗೌಡಹಳ್ಳಿ ಸೋಮಶೇಖರ್ ಸೇರಿದಂತೆ ಅನೇಕರಿದ್ದರು.

ಮಾಜಿ ಶಾಸಕ ಬೆಂಬಲ...

ಪ್ರತಿಭಟನೆ ಬೆಂಬಲ ವ್ಯಕ್ತಪಡಿಸಿ ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ ಕೂಡ ರೈತರೊಂದಿಗೆ ಭಾಗವಹಿಸಿದ್ದರು. ಈ ವೇಳೆ ದೂರವಾಣಿ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಜೊತೆ ಮಾತನಾಡಿದರು. ಅವಧಿ ಮೀರಿದ್ದರೂ ಬೆಳೆಗಾರರ ಕಬ್ಬು ಕಟಾವು ಮಾಡಿಲ್ಲ. ಬೆಲೆಯಲ್ಲೂ ರೈತರಿಗೆ ಮೋಸ ಮಾಡಲಾಗುತ್ತಿದೆ. ಈ ಬಗ್ಗೆ ಜಿಲ್ಲಾಧಿಕಾರಿ ಹಾಗೂ ಕಾರ್ಖಾನೆ ಆಡಳಿತ ಮಂಡಳಿ ರೈತರೊಂದಿಗೆ ಸಭೆ ನಡೆಸಬೇಕು ಎಂದು ಸಚಿವರಲ್ಲಿ ಮನವಿ ಮಾಡಿದರು. ಇದಕ್ಕೆ ಸ್ಪಂದಿಸಿದ ಉಸ್ತುವಾರಿ ಸಚಿವರು, ಬಣ್ಣಾರಿ ಅಮ್ಮನ್ ಷುಗರ್ಸ್‌ನ ವ್ಯವಸ್ಥಾಪಕ ಶರವಣ ಭೇಟಿ ನೀಡಿ ರೈತರ ಸಮಸ್ಯೆ ಆಲಿಸುವಂತೆ ಸೂಚಿಸುವುದಲ್ಲದೆ, ರೈತರೊಂದಿಗೆ ಅನುಚಿತವಾಗಿ ವರ್ತಿಸಿದ ಪೊಲೀಸ್ ಸಿಬ್ಬಂದಿ ವಿರುದ್ಧ ಕ್ರಮ ವಹಿಸಿ, ಆದಷ್ಟು ಬೇಗ ರೈತರೊಂದಿಗೆ ಸಭೆ ನಡೆಸುವುದಾಗಿ ಸಚಿವರು ಭರವಸೆ ನೀಡಿದರು.

ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ



ಗುಂಡ್ಲುಪೇಟೆ, ಅ.14–ಸರ್ಕಾರಿ ಭೂಮಿಯಲ್ಲಿ ಒಕ್ಕಲುತನ ಮಾಡುತ್ತಿರುವ ರೈತರ ಅನುಕೂಲಕ್ಕಾಗಿ ಹಕ್ಕುಪತ್ರ ನೀಡಲಾಗುತ್ತಿದ್ದು, ಫಲಾನುಭವಿಗಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ಹೇಳಿದರು.

ಪಟ್ಟಣದ ಗುರುಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 150 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು. ಮೂರು ದಶಕಗಳಿಂದ ಉಳುಮೆ ಮಾಡುತ್ತಿದ್ದರೂ ರೈತರಿಗೆ ಭೂಒಡೆತನ ದೊರಕದೆ ಸಂಕಷ್ಟಕ್ಕೀಡಾಗಿದ್ದರು. ಈ ಹಿನ್ನೆಲೆಯಲ್ಲಿ ಬಗರ್ ಹುಕುಂ ಸಮಿತಿಯು ಅರ್ಹ ಅರ್ಜಿಗಳನ್ನು ಪರಿಗಣಿಸಿ ಸಕ್ರಮವಾಗಿರುವ 150 ಫಲಾನುಭವಿಗಳಿಗೆ ಮೊದಲನೇ ಹಂತದಲ್ಲಿ ಹಕ್ಕುಪತ್ರ ವಿತರಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ರವಿಶಂಕರ್, ಬಗರ್ ಹುಕುಂ ಸಮಿತಿಯ ಉಪಾಧ್ಯಕ್ಷ ನಿಟ್ರೆ ನಾಗರಾಜಪ್ಪ, ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಹಾಪ್‌ಕಾಮ್ಸ್ ಜಿಲ್ಲಾಧ್ಯಕ್ಷ ಕೆ.ಆರ್.ಲೋಕೇಶ್, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಹೊರೆಯಾಲ ಮಹೇಶ್, ಎಪಿಎಂಸಿ ಅಧ್ಯಕ್ಷ ರವಿ ಸೇರಿದಂತೆ ಹಲವರಿದ್ದರು.

ಉಚಿತ ಬಂಜೆತನ ತಪಾಸಣಾ ಶಿಬಿರ

ಚಾಮರಾಜನಗರ, ಅ.14–ನಗರದ ಕಾವೇರಿ ಡಯಾಗ್ನೋಸ್ಟಿಕ್ ಸೆಂಟರ್‌ನಲ್ಲಿ ಅ.16ರಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಉಚಿತ ಬಂಜೆತನ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಡಾ.ಆಶಾ ಎಸ್.ವಿಜಯ್ ಮತ್ತು ತಂಡದವರು ಶಿಬಿರದಲ್ಲಿ ಪಾಲ್ಗೊಳ್ಳುವರು. ಸಾರ್ವಜನಿಕರು ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಕೋರಲಾಗಿದೆ.

ಎಸ್ತೆರ್ ನಿಧನ



ಚಾಮರಾಜನಗರ, ಅ.14–ಕೊಳ್ಳೇಗಾಲ ಪಟ್ಟಣದ ಕ್ರಿಶ್ಚಿಯನ್ ಕಾಲೋನಿ ನಿವಾಸಿ, ನಿವೃತ್ತ ಶಿಕ್ಷಕಿ ಎಸ್ತೆರ್ ಸಂಜೀವ(87) ಶುಕ್ರವಾರ ಸಂಜೆ ನಿಧನರಾದರು. ಮೃತರು ಚಾಮರಾಜನಗರದ ರಾಮಸಮುದ್ರ ಕ್ರಿಸ್ತರಾಜ ಬಾಲರ ಪಟ್ಟಣ ಪ್ರೌಢಶಾಲೆ ಮುಖ್ಯಶಿಕ್ಷಕ ಬಿ.ಸುಜಯ್‌ಕುಮಾರ್ ಸೇರದಿಂತೆ ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ 11 ಗಂಟೆಗೆ ಕೊಳ್ಳೇಗಾಲ ಪಟ್ಟಣದಲ್ಲಿರುವ ಕ್ರಿಶ್ಚಿಯನ್ ಸಮುದಾಯ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ವಿಮಲಾ ರಾಧಾಕೃಷ್ಣ



ಚಾಮರಾಜನಗರ: ಮೂಲತಃ ತಾಲೂಕಿನ ಕುದೇರು ಗ್ರಾಮದ ನಿವಾಸಿ ಕೆ.ಪಿ.ರಾಧಾಕೃಷ್ಣ ಅವರ ಪತ್ನಿ ವಿಮಲಾ ರಾಧಾಕೃಷ್ಣ(68) ಶುಕ್ರವಾರ ಬೆಳಗ್ಗೆ ನಿಧನರಾದರು. ಮೃತರು ಪತಿ, ಪುತ್ರಿ ಅನುಪಮ, ಅಳಿಯ, ಮೊಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ 3 ಗಂಟೆಗೆ ಮೈಸೂರಿನ ಚಾಮುಂಡಿಬೆಟ್ಟದ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿತು.

ಮೂರನೇ ಪುಟದಿಂದ

ಪೋಕ್ಸೋ ಪ್ರಕರಣ ದಾಖಲು

ಅಡುಗೆ ಭಟ್ಟ ಕರಿಬಸಪ್ಪ ಸೇರಿದಂತೆ 7 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾಳೆ.

ತನ್ನ ಮಕ್ಕಳು ಹಾಗೂ ಇತರ ಮಕ್ಕಳ ಮೇಲೆ ಶ್ರೀಗಳಿಂದ ಲೈಂಗಿಕ ದೌರ್ಜನ್ಯ ನಡೆದ ವಿಚಾರ ಗೊತ್ತಿದ್ದರೂ ಶ್ರೀಗಳು ಧಾರ್ಮಿಕ, ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಪ್ರಬಲರಾಗಿದ್ದ ಕಾರಣ, ಆರ್ಥಿಕವಾಗಿ ದುರ್ಬಲಳಾಗಿರುವ ನನ್ನ ಮತ್ತು ಮಕ್ಕಳ ಭವಿಷ್ಯದ ದೃಷ್ಟಿಯಿಂದ ಮತ್ತು ಶ್ರೀಗಳಿಂದ ನಮಗೆ ತೊಂದರೆಯಾಗಬಹುದು ಎಂಬ ಭಯದಿಂದ ಪೊಲೀಸರಿಗೆ ದೂರು ನೀಡಿರಲಿಲ್ಲ. ನನ್ನ ಮಕ್ಕಳಂತೆ ಲೈಂಗಿಕ ದೌರ್ಜನ್ಯಕ್ಕೊಳಗಾಗಿದ್ದ ಇಬ್ಬರು ಮಕ್ಕಳು ಮೈಸೂರಿನ ಒಡನಾಡಿ ಸೇವಾ ಸಂಸ್ಥೆ ಸಹಕಾರ ಪಡೆದು ಪೊಲೀಸರಿಗೆ ದೂರು ಸಲ್ಲಿಸಿದ್ದರಿಂದ ನಾನೂ ಚಿತ್ರದುರ್ಗದಲ್ಲಿ ದೂರು ನೀಡುವ ಬದಲು ಮೈಸೂರಿಗೆ ಬಂದು ಒಡನಾಡಿ ಸೇವಾ ಸಂಸ್ಥೆಯವರನ್ನು ಭೇಟಿ ಮಾಡಿ ನಂತರ ದೂರು ಸಲ್ಲಿಸುತ್ತಿರುವುದಾಗಿ ಆಕೆ ತಿಳಿಸಿದ್ದಾಳೆ.

ಕೌಟುಂಬಿಕ ಕಲಹದಿಂದ ಕಳೆದ 10 ವರ್ಷಗಳ ಹಿಂದೆ ಪತಿಯನ್ನು ತೊರೆದು ಪೋಷಕರ ಆಶ್ರಯದಲ್ಲಿ ಇರುವ ತಾನು ಕಳೆದ 7 ವರ್ಷದಿಂದ ಮುರುಘಾ ಮಠದ ದಾಸೋಹ ಭವನದಲ್ಲಿ ಅಡುಗೆ ಸಹಾಯಕಳಾಗಿ ಕೆಲಸ ಮಾಡುತ್ತಿರುವುದಾಗಿ ದೂರಿನಲ್ಲಿ ತಿಳಿಸಿರುವ ಮಹಿಳೆಯು, ಪತಿಯ ಆಶ್ರಯವೂ ಇಲ್ಲದೆ, ಪೋಷಕರೂ ಕೂಡ ಆರ್ಥಿಕವಾಗಿ ಹಿಂದುಳಿದವರಾಗಿದ್ದರಿಂದ 2016ರಲ್ಲಿ 1ನೇ ತರಗತಿ ಮತ್ತು 3ನೇ ತರಗತಿ ತನ್ನಿಬ್ಬರು ಹೆಣ್ಣು ಮಕ್ಕಳನ್ನು ಮುರುಘಾ ಮಠದ ಆಶ್ರಯದಲ್ಲಿರುವ ಅಕ್ಕಮಹಾದೇವಿ ವಸತಿ ಶಾಲೆಗೆ ಸೇರಿಸಿದ್ದಾಗಿ ತಿಳಿಸಿದ್ದಾಳೆ.

2020ರಲ್ಲಿ ಕೋವಿಡ್ ರಜೆ ಇದ್ದ ವೇಳೆ ವಾರ್ಡನ್ ರಶ್ಮಿ ಅವರು, ತನ್ನ ಇಬ್ಬರು ಮಕ್ಕಳನ್ನು ಮುರುಘಾ ಶ್ರೀಗಳ ಖಾಸಗಿ ಕೊಠಡಿಗೆ ಯಾವುದಾದರೂ ಕಾರಣ ನೀಡಿ ಕಳುಹಿಸುತ್ತಿದ್ದರು. ಮಕ್ಕಳು ಒಪ್ಪದಿದ್ದರೆ ಬಸವಾದಿತ್ಯ, ಪರಮಶಿವಯ್ಯ, ಗಂಗಾಧರಯ್ಯ ಅವರುಗಳು ಮಕ್ಕಳನ್ನು ಹೆದರಿಸಿ ಮುರುಘಾ ಶ್ರೀಗಳ ಕೊಠಡಿಗೆ ಕಳುಹಿಸುತ್ತಿದ್ದರು. ಮಕ್ಕಳನ್ನು ಶ್ರೀಗಳ ಬಳಿಗೆ ಕರೆದೊಯ್ಯುತ್ತಿದ್ದ ಮಹಾಲಿಂಗ ಮತ್ತು ಕರಿಬಸಪ್ಪ ಕೊಠಡಿಯೊಳಗೆ ಮಕ್ಕಳನ್ನು ಬಿಟ್ಟ ನಂತರ ಯಾರೂ ಬಾರದ ಹಾಗೆ ಬಾಗಿಲಲ್ಲೇ ಕಾವಲು ಕಾಯುತ್ತಿದ್ದರು ಎಂದು ದೂರಿನಲ್ಲಿ ತಿಳಿಸಿರುವ ಮಹಿಳೆಯು, ಶ್ರೀಗಳಿಂದ ಲೈಂಗಿಕ ದೌರ್ಜನ್ಯ ನಡೆದ ಬಗ್ಗೆ ನನ್ನ ಮಕ್ಕಳು ಮತ್ತು 10ನೇ ತರಗತಿ ವ್ಯಾಸಂಗ ಮಾಡುತ್ತಿರುವ 15 ವರ್ಷದ ಬಾಲಕಿ ಹಾಗೂ 9ನೇ ತರಗತಿಯ 14 ವರ್ಷದ ಬಾಲಕಿ ಕೂಡ ತನಗೆ ತಿಳಿಸಿದ್ದಾರೆಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ತನ್ನ ಮಕ್ಕಳು ಋತುಮತಿಯಾಗುವವರೆಗೂ ಶ್ರೀಗಳು ಲೈಂಗಿಕ ದೌರ್ಜನ್ಯ ನಡೆಸುತ್ತಿದ್ದರು ಎಂದು ದೂರಿನಲ್ಲಿ ಹೇಳಲಾಗಿದೆ. ಮಹಿಳೆಯ ದೂರು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಕಾನೂನು ಮತ್ತು ಪರಿವೀಕ್ಷಣಾಧಿಕಾರಿ ಚಂದ್ರಕುಮಾರ್ ಅವರು, ಹಾಜರುಪಡಿಸಿದ ನೊಂದ ಬಾಲಕಿ ಮತ್ತು ಆಕೆಯ ತಾಯಿಯ ಆಪ್ತ ಸಮಾಲೋಚನಾ ವರದಿಯನ್ನಾಧರಿಸಿ ಮುರುಘಾ ಶರಣರು ಸೇರಿದಂತೆ 7 ಮಂದಿ ವಿರುದ್ಧ ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಿಸಿಕೊಂಡ ನಜರ್‌ಬಾದ್ ಠಾಣೆ ಪೊಲೀಸರು ಇಂದು ಬೆಳಗ್ಗೆ ಈ ಪ್ರಕರಣವನ್ನು ಚಿತ್ರದುರ್ಗ ಗ್ರಾಮಾಂತರ ಠಾಣೆಗೆ ವರ್ಗಾಯಿಸಿದ್ದಾರೆ.

“ ಚಿತ್ರದುರ್ಗ ಮುರುಘಾ ಮಠದ ಲೈಂಗಿಕ ಹಗರಣಗಳು ಬಗೆದಷ್ಟೂ ಹೊರ ಬರುತ್ತಿವೆ. ಸುಮಾರು 20 ರಿಂದ 25 ವರ್ಷಗಳಿಂದ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ನಡೆಯುತ್ತಿರಬಹುದು ಎಂದು ತೋರುತ್ತಿದೆ. ಈ ಪ್ರಕರಣದ ತನಿಖೆ ಸಮರ್ಪಕವಾಗಿ ನಡೆಯಬೇಕಾಗಿದೆ. ಕರ್ನಾಟಕ ಪೊಲೀಸರು ದಕ್ಷತೆಯಿಂದ ತನಿಖೆ ನಡೆಸಿ ಆರೋಪಿಗೆ ಶಿಕ್ಷೆ ಸಿಗುವಂತೆ ಮಾಡಬೇಕಾಗಿದೆ. ಈ ಪ್ರಕರಣದಲ್ಲಿ ಯಾವುದೇ ಕಾರಣಕ್ಕೂ ರಾಜಕೀಯ ಹಸ್ತಕ್ಷೇಪ ಇರಬಾರದು. ಮುರುಘಾ ಮಠ ಅತ್ಯಂತ ಗೌರವಯುತವಾದ ಐತಿಹಾಸಿಕ ಹಿನ್ನೆಲೆಯುಳ್ಳ ಮಠವಾಗಿದ್ದು, ಅಲ್ಲಿ ಶರಣರು ಸಮಾಧಿಯಾಗಿದ್ದಾರೆ. ಜನರಿಂದ ಅಪಾರವಾದ ನಂಬಿಕೆ ಗಳಿಸಿಕೊಂಡಿರುವ ಮಠ ಇದಾಗಿದೆ. ಇಂತಹ ಮಠದಲ್ಲಿ ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಮಠಕ್ಕೆ ಕಪ್ಪು ಚುಕ್ಕೆ ತಂದಿರುವ ವ್ಯಕ್ತಿಯನ್ನು ಮಠದಿಂದ ಬೇರ್ಪಡಿಸಬೇಕಾಗಿದೆ. ಧರ್ಮದ ಮೇಲೆ ನಂಬಿಕೆ ಇರುವ ಧರ್ಮಿಷ್ಠರು ಆ ಕೆಲಸವನ್ನು ಮಾಡಿ ಮಠದ ಕೊಳೆ ತೊಳೆಯಬೇಕಾದ ಅನಿವಾರ್ಯತೆ ಇದೆ. ನಡೆದಿರುವ ರಾಕ್ಷಸೀ ಕೃತ್ಯವನ್ನು ಧರ್ಮಕ್ಕೆ ಥಳಕು ಹಾಕಿ ಆರೋಪಿಯನ್ನು ರಕ್ಷಿಸುವ ಕಾರ್ಯಕ್ಕೆ ಮುಂದಾಗದೇ, ಆ ವ್ಯಕ್ತಿಗೆ ಶಿಕ್ಷೆ ದೊರೆಯುವಂತೆ ಮಾಡಿ ಹಾಗೂ ಮಠದಿಂದ ಆತನನ್ನು ಬೇರ್ಪಡಿಸಿ ಮಠಕ್ಕೆ ಆಗಿರುವ ಕಪ್ಪುಚುಕ್ಕೆಯನ್ನು ಹೋಗಲಾಡಿಸಬೇಕು. ಈ ಪ್ರಕರಣದಲ್ಲಿ ಆರೋಪಿಗೆ ಶಿಕ್ಷೆಯಾಗದಿದ್ದರೆ ಇಡೀ ರಾಜ್ಯದ ಕಾನೂನು ವ್ಯವಸ್ಥೆ ಬಗ್ಗೆ ನಂಬಿಕೆ ಇಲ್ಲದಂತಾಗುತ್ತದೆ. ಪೊಲೀಸರು ಸಮರ್ಪಕವಾಗಿ ತನಿಖೆ ನಡೆಸಿ ಶಿಕ್ಷೆಯಾಗುವಂತೆ ನೋಡಿಕೊಂಡಾಗ ಮಾತ್ರ ರಾಜ್ಯ ಸರ್ಕಾರದ ಕೀರ್ತಿ ಹೆಚ್ಚುತ್ತದೆ.

–ಸ್ಟಾನ್ಲಿ, ಒಡನಾಡಿ ಸೇವಾ ಸಂಸ್ಥೆ ಮುಖ್ಯಸ್ಥ

ಮುರುಘಾ ಮಠದ ಹಾಸ್ಟೆಲ್‌ನಲ್ಲಿ ಪತ್ತೆಯಾದ ಹೆಣ್ಣು ಮಗುವಿಗೆ ‘ಮಡಿಲು’ ಆಶ್ರಯ

ಚಿತ್ರದುರ್ಗ ಮುರುಘಾ ಮಠದ ಅಕ್ಕಮಹಾದೇವಿ ವಸತಿ ನಿಲಯದಲ್ಲಿ 4.5 ವರ್ಷದ ಹೆಣ್ಣು ಮಗುವನ್ನು ಚಿತ್ರದುರ್ಗ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ರಕ್ಷಿಸಿರುವ ಬಗ್ಗೆ ಬೆಳಕಿಗೆ ಬಂದಿದೆ. ಮುರುಘಾ ಶ್ರೀಗಳ ವಿರುದ್ಧ ಆ.26ರಂದು ಪೋಕ್ಸೋ ಕಾಯಿದೆಯಡಿ ಪ್ರಕರಣ ದಾಖಲಾದ ನಂತರ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಅಕ್ಕಮಹಾದೇವಿ ವಸತಿ ನಿಲಯದಲ್ಲಿದ್ದ ಬಾಲಕಿಯರಿಗೆ ಸರ್ಕಾರಿ ವಸತಿ ಶಾಲೆಗಳಲ್ಲಿ ಆಶ್ರಯ ಕಲ್ಪಿಸಿದರು. ಈ ವೇಳೆ ನಾಲ್ಕೂವರೆ ವರ್ಷದ ಹೆಣ್ಣು ಮಗುವೊಂದು ವಸತಿ ನಿಲಯದಲ್ಲಿ ಪತ್ತೆಯಾಗಿದೆ. ಈ ಮಗುವಿನ ತಂದೆ–ತಾಯಿ ಯಾರು ಎಂಬುದರ ಬಗ್ಗೆ ಯಾವುದೇ ರೀತಿಯ ಮಾಹಿತಿ ಇರಲಿಲ್ಲ. ವಸತಿ ನಿಲಯದ ನಿರ್ವಾಹಕರೂ ಕೂಡ ಮಗುವಿನ ಬಗ್ಗೆ ವಿವರ ನೀಡುವಲ್ಲಿ ವಿಫಲರಾಗಿದ್ದಾರೆ. ಹೀಗಾಗಿ ಅಧಿಕಾರಿಗಳು ಮಗುವನ್ನು ರಕ್ಷಿಸಿ, ಅದಕ್ಕೆ ಚಿಗುರು ಎಂದು ನಾಮಕರಣ ಮಾಡಿ ವಿಶೇಷ ಮಡಿಲು ಮತ್ತು ದತ್ತು ಕೇಂದ್ರದಲ್ಲಿ ಆಶ್ರಯ ಕಲ್ಪಿಸಿದ್ದಾರೆ. ಈವರೆವಿಗೂ ಅಕ್ಕಮಹಾದೇವಿ ವಸತಿ ನಿಲಯದಲ್ಲಿ ನಾಲ್ಕೂವರೆ ವರ್ಷದ ಹೆಣ್ಣು ಮಗು ಪತ್ತೆಯಾಗಿರುವ ಬಗ್ಗೆ ಗೌಪ್ಯವಾಗಿಯೇ ಇತ್ತು ಎಂದು ಹೇಳಲಾಗಿದ್ದು, ಇತ್ತೀಚೆಗೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಮಗುವಿನ ಪೋಷಕರ ಪತ್ತೆಗಾಗಿ ಪತ್ರಿಕಾ ಜಾಹೀರಾತು ನೀಡಿದ್ದಾರೆ. ಆದರೆ ಈವರೆವಿಗೂ ಮಗು ತಮ್ಮದೇ ಎಂದು ಯಾರೂ ಮುಂದೆ ಬಂದಿಲ್ಲ. ಈ ಮಗು ಯಾರದು ಎಂಬುದು ಯಕ್ಷ ಪ್ರಶ್ನೆಯಾಗಿ ಉಳಿದಿದ್ದು, ಹಲವಾರು ಊಹಾಪೋಹಗಳು ತಲೆದೋರಿವೆ.

ರೈಲು ಸಂಚಾರ

ಚಾಲನೆಗೊಳ್ಳಲಿದೆ. ಫೆಬ್ರವರಿ 15, 2019ರಂದು ದೇಶದ ಮೊಟ್ಟ ಮೊದಲ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಪ್ರಧಾನಿ ಮೋದಿ ಚಾಲನೆ ನೀಡಿದ್ದರು. ನವದೆಹಲಿ–ಕಾನ್ಪುರ–ಅಲಹಬಾದ್–ವಾರಣಾಸಿ ಮಾರ್ಗದಲ್ಲಿ ಈ ರೈಲು ಸಂಚರಿಸುತ್ತಿದೆ. 2ನೇ ರೈಲು ದೆಹಲಿಯಿಂದ ವಾರಣಾಸಿಗೆ ಸಂಚರಿಸುತ್ತಿದೆ.

ಎಲ್ಲಾ ಕೋಚ್‌ಗಳಲ್ಲೂ ಆಟೋಮ್ಯಾಟಿಕ್ ಡೋರ್‌ಗಳು ಇರುತ್ತವೆ. ಜಿಪಿಎಸ್ (GPS) ಆಧಾರಿತ ಆಡಿಯೋ ವಿಶ್ಯುಯಲ್ಸ್, ಪ್ರಯಾಣದ ಮಾಹಿತಿ, ಉಚಿತ ವೈಫೈ ವ್ಯವಸ್ಥೆ ಇರುತ್ತದೆ. ಸೀಟ್‌ಗಳು ಆರಾಮದಾಯಕವಾಗಿ ಇರುತ್ತವೆ. ಶೌಚಾಲಯಗಳು ಬಯೋ ವ್ಯಾಕ್ಯೂಮ್ ತಂತ್ರಜ್ಞಾನ ಆಧಾರಿತವಾಗಿರುತ್ತವೆ. ಪ್ರತಿ ಸೀಟ್‌ಗೂ ಪ್ರತ್ಯೇಕ ಲೈಟ್ ವ್ಯವಸ್ಥೆ ಇರುತ್ತದೆ. ಪ್ರಯಾಣಿಕರಿಗೆ ಬಿಸಿ ಹಾಗೂ ಶುಚಿ–ರುಚಿಯಾದ ಆಹಾರ ಪೂರೈಕೆ ಮಾಡಲಾಗುತ್ತದೆ. ಬಿಸಿ ಹಾಗೂ ತಂಪು ಪಾನೀಯಗಳು ಲಭ್ಯವಾಗುತ್ತವೆ. ರೈಲು ಸಾಗುವಾಗ ಪ್ರಯಾಣಿಕರಿಗೆ ಹೆಚ್ಚಿನ ಶಬ್ದ ಕೇಳಿ ಬರುವುದಿಲ್ಲ. ಪ್ರತಿ ರೈಲಿನಲ್ಲಿ 1,128 ಪ್ರಯಾಣಿಕರು ಪ್ರಯಾಣ ಮಾಡಬಹುದಾಗಿದೆ. ಎಲ್ಲದಕ್ಕಿಂತ ಹೆಚ್ಚಾಗಿ ವಂದೇ ಭಾರತ್ ರೈಲಿನಲ್ಲಿ ಅಪಘಾತ ತಡೆ ವ್ಯವಸ್ಥೆಗೆ ಅತ್ಯಂತ ಸುಧಾರಿತ ತಂತ್ರಜ್ಞಾನ ಬಳಸಲಾಗಿದೆ. ಪ್ರತಿ ಕೋಚ್‌ನಲ್ಲೂ ತುರ್ತು ನಿರ್ಗಮನ ಕಿಟಕಿ, ಸಿಸಿಟಿವಿ ಕ್ಯಾಮರಾ ಇರುತ್ತದೆ. ಅಗ್ನಿ ಅನಾಹುತ ತಡೆಯುವ ವ್ಯವಸ್ಥೆ ಕೂಡಾ ಇದೆ. ಮೊದಲ ಮೂರು ರೈಲುಗಳಿಗಿಂತ ನಾಲ್ಕು ಮತ್ತು ಐದನೇ ರೈಲು ಬಹಳ ಸುಧಾರಣೆಯಿಂದ ಕೂಡಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ. ವಂದೇ ಭಾರತ್ ರೈಲಿಗೆ ಮೈಸೂರಿನಿಂದಲೇ ಪ್ರಧಾನಿಯವರು ಹಸಿರು ನಿಶಾನೆ ತೋರಬೇಕೆಂಬ ಒತ್ತಡವಿದೆ. ಆದರೆ ಈಗಿನ ಪ್ರಕಾರ ಬೆಂಗಳೂರಿನಲ್ಲೇ ಕಾರ್ಯಕ್ರಮ ಏರ್ಪಡಿಸಲು ಉದ್ದೇಶಿಸಲಾಗಿದೆ.

ಚೆನ್ನೈ–ಮೈಸೂರು ರೈಲು ನಂತರ ಬೆಂಗಳೂರು–ಧಾರವಾಡದ ನಡುವೆ ಮತ್ತೊಂದು ವಂದೇ ಭಾರತ್ ರೈಲು ಸಂಚರಿಸಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಬಲ ಪ್ರದರ್ಶನಕ್ಕೆ ನಿರ್ಧಾರ

ಬಳ್ಳಾರಿಗೆ ಪಾದಯಾತ್ರೆ ಮಾಡಿ, ಇದೇ ಮೈದಾನದಲ್ಲಿ ಬೃಹತ್ ಸಮಾವೇಶ ನಡೆಸುವ ಮೂಲಕ ಕರ್ನಾಟಕದಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರಲು ವೇದಿಕೆ ಸಿದ್ಧ ಮಾಡಿದ್ದರು. ಇದೀಗ ಮತ್ತೆ ಕಳೆದುಕೊಂಡಿರುವ ಅಧಿಕಾರ ಗಳಿಸಲು ಬಳ್ಳಾರಿಯನ್ನೇ ಪ್ರದೇಶ ಕಾಂಗ್ರೆಸ್ ಪ್ರಯೋಗ ಮಾಡುತ್ತಿದೆ. ಸಮಾವೇಶವನ್ನು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಬಿಂಬಿಸಬೇಕೆಂಬ ಉದ್ದೇಶದಿಂದ ರಾಷ್ಟ್ರೀಯ ಕಾಂಗ್ರೆಸ್ ನಾಯಕರನ್ನು ಒಂದೇ ವೇದಿಕೆಗೆ ಕರೆತರಲಾಗುತ್ತಿದೆ. ಲೋಕಸಭಾ ಚುನಾವಣೆಯಲ್ಲಿ ಸೋನಿಯಾ ಗಾಂಧಿ ಅವರಿಗೆ ರಾಜಕೀಯವಾಗಿ ಮರುಜನ್ಮ ನೀಡಿದ ಬಳ್ಳಾರಿಯನ್ನೇ ಕಾಂಗ್ರೆಸ್ ಇದೀಗ ಮುಂಬರುವ ವಿಧಾನಸಭಾ ಚುನಾವಣೆಗೂ ಬಳಸಿಕೊಳ್ಳಲು ಹೊರಟಿದೆ.

ಸಮಾವೇಶದ ಬಳಿಕ ಯಾತ್ರೆ ತೆಲಂಗಾಣ ರಾಜ್ಯ ಪ್ರವೇಶ ಮಾಡಲಿದೆ. ಮತ್ತೆ ಅಕ್ಟೋಬರ್ 22 ರಂದು ತೆಲಂಗಾಣದಿಂದ ರಾಯಚೂರು ಪ್ರವೇಶ ಮಾಡಲಿದೆ. ಅಂದು ಪ್ರಿಯಾಂಕಾ ಗಾಂಧಿ, ರಾಹುಲ್ ಮತ್ತು ರಾಜ್ಯ ನಾಯಕರ ಜೊತೆ ಒಂದಷ್ಟು ಹೆಜ್ಜೆ ಹಾಕಿ ಪಕ್ಷಕ್ಕೆ ಜನರ ಸೆಳೆಯುವ ಪ್ರಯತ್ನ ಮಾಡಲಿದ್ದಾರೆ. ಭಾರತ್ ಜೋಡೋ ಯಾತ್ರೆ ಮುಕ್ತಾಯವಾಗುತ್ತಿದ್ದಂತೆ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಪ್ರತ್ಯೇಕವಾಗಿ ರಾಜ್ಯದಲ್ಲಿ ಚುನಾವಣಾ ಯಾತ್ರೆ ಆರಂಭಿಸಲಿದ್ದಾರೆ. ಉಭಯ ನಾಯಕರು ತಲಾ 14 ಲೋಕಸಭಾ ಕ್ಷೇತ್ರಗಳಲ್ಲಿ ಸಂಚರಿಸಿ, ಚುನಾವಣೆಗೂ ಮುನ್ನವೇ ಪಕ್ಷವನ್ನು ಗಟ್ಟಿ ಮಾಡಿ, ಮತದಾರರನ್ನು ಸೆಳೆಯುವ ಪ್ರಯತ್ನ ಮಾಡಲಿದ್ದಾರೆ.

ಸರ್ಕಾರಿ ಕ್ಷೇತ್ರದಲ್ಲಿ ಗುಣಮಟ್ಟದ ಶಿಕ್ಷಣ, ಆರೋಗ್ಯ ಸೇವೆ ಸಿಕ್ಕಿಲ್ಲ

● ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ತೀವ್ರ ವಿಷಾದ ● ಖಾಸಗಿ ಸಂಸ್ಥೆಗಳು ಇಲ್ಲದೇ ಇದ್ದಲ್ಲಿ ನಮ್ಮ ಗತಿ ಏನು? ● 2 ಲಕ್ಷ ಸಂಬಳ ಪಡೆಯುವ ಪ್ರಾಧ್ಯಾಪಕನ ಕೆಲಸ ಬೆಳಗ್ಗೆ, ಸಂಜೆ ಬಂದು ಸಹಿ ಹಾಕುವುದಷ್ಟೇ!

ಮೈಸೂರು, ಅ.14(ಎಸ್‌ಪಿಎನ್)– ಭಾರತದಲ್ಲಿ ಎಲ್ಲಾ ಕ್ಷೇತ್ರದಲ್ಲೂ ಬುದ್ಧಿವಂತ ಯುವಕರಿದ್ದಾರೆ. ಆದರೂ ಸರ್ಕಾರಿ ಸೇವೆಗಳಲ್ಲಿ ಗುಣಮಟ್ಟ ಕಡಿಮೆಯಾಗುತ್ತಿರುವುದು ಏಕೆ ಎಂಬುದರ ಕುರಿತು ಸಮಾಜದಲ್ಲಿ ಚರ್ಚೆಯಾಗಬೇಕು ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಹೇಳಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ರೋಟರಿ ಮೈಸೂರು ಉತ್ತರ ಹಾಗೂ ಶರತ್ ಮೆಡಿಕಲ್ಸ್ ಸಹಯೋಗದೊಂದಿಗೆ ‘ವಿಶ್ವ ಫಾರ್ಮಸಿಸ್ಟ್ ದಿನಾಚರಣೆ’ ಅಂಗವಾಗಿ ಫಾರ್ಮಾಸಿಸ್ಟ್ ಎಂ.ನಿರಂಜನಮೂರ್ತಿ ಸ್ಮರಣಾರ್ಥ ಆಯೋಜಿಸಿದ್ದ ರೋಟರಿ ಫಾರ್ಮಾಸಿಸ್ಟ್ ಹಾಗೂ ಕೆಮಿಸ್ಟ್ ಅವಾರ್ಡ್–2022 ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾರತ ಬುದ್ಧಿವಂತ ಯುವಕರನ್ನು ಹೊಂದಿರುವ ದೇಶ. ಆದರೆ, ಸರ್ಕಾರಿ ಸ್ವಾಮ್ಯದ ಆರೋಗ್ಯ, ಶಿಕ್ಷಣ ಸೇರಿದಂತೆ ಇತರೆ ಕ್ಷೇತ್ರಗಳಲ್ಲಿ ಗುಣಮಟ್ಟದ ಸೇವೆಗಳು ಸಾರ್ವಜನಿಕರಿಗೆ ಲಭ್ಯವಾಗುತ್ತಿಲ್ಲ. ಇದರ ಕುರಿತು ಸಾರ್ವಜನಿಕರು ಒಮ್ಮೆ ಚಿಂತಿಸಬೇಕು ಎಂದ ಅವರು, ಮೈಸೂರು ವಿವಿಯಲ್ಲಿ 2 ಲಕ್ಷ ಸಂಬಳ ಪಡೆಯುವ ಪ್ರಾಧ್ಯಾಪಕರು ಬೆಳಗ್ಗೆ ಬಂದು ರಿಜಿಸ್ಟರ್‌ನಲ್ಲಿ ಸಹಿ ಹಾಕಿ ಹೋದರೆ, ಮತ್ತೆ ಸಂಜೆ ಬಂದು ಮತ್ತೊಂದು ಸಹಿ ಹಾಕಿ ಹೋಗುತ್ತಾರೆ. ಇಷ್ಟಕ್ಕೆ ಆ ದಿನದ ಕರ್ತವ್ಯ ಮುಗಿಯಿತು ಎಂದರ್ಥ. ಇಂತಹ ಪ್ರಾಧ್ಯಾಪಕರು ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುವುದು ಯಾವ ಸಮಯದಲ್ಲಿ ಎಂಬುದನ್ನು ಸಾರ್ವಜನಿಕರಿಗೆ ಹೇಳಬೇಕು. ಹೀಗಾದರೆ, ಶಿಕ್ಷಣದಲ್ಲಿ ಗುಣಮಟ್ಟ ಇರುತ್ತದೆಯೇ? ಎಂದು ಪ್ರಶ್ನಿಸಿದರು.

ಪ್ರಾಥಮಿಕದಿಂದ ಸ್ನಾತಕೋತ್ತರ ಪದವಿಯವರೆಗೂ ಸರ್ಕಾರಿ ಶಿಕ್ಷಣ ವ್ಯವಸ್ಥೆಯಲ್ಲಿ ಇದೇ ಪರಿಸ್ಥಿತಿಯಿದೆ.



ಎನ್.ಆರ್.ಮೊಹಲ್ಲಾದ ಕೃಷ್ಣ ಮೆಡಿಕಲ್‌ನ ಎ.ಸಿ.ಕೃಷ್ಣಪ್ಪ, ಹೆಬ್ಬಾಳಿನ ಶಶಾಂಕ್ ಮೆಡಿಕಲ್ಸ್‌ನ ಆರ್.ರೂಪ, ಜೆ.ಸಿ.ನಗರದ ಶಿವಾನಂದ ಮೆಡಿಕಲ್ಸ್‌ನ ಎಚ್.ವಿ.ಚಂದ್ರಶೇಖರ್, ಉದಯಗಿರಿಯ ನೋಬೆಲ್ ಡ್ರಗ್ ಹೌಸ್‌ನ ಅನೇಶ್ ಅಹಮ್ಮದ್ ಅವರಿಗೆ ರೋಟರಿ ಫಾರ್ಮಾಸಿಸ್ಟ್ ಹಾಗೂ ಕೆಮಿಸ್ಟ್ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಲಾಯಿತು.

ಹಾಗೆಯೇ ಸರ್ಕಾರಿ ಸ್ವಾಮ್ಯದ ಆಸ್ಪತ್ರೆಗಳಲ್ಲಿ ಗುಣಮಟ್ಟದ ಚಿಕಿತ್ಸೆ ಸಾರ್ವಜನಿಕರಿಗೆ ದೊರಕುತ್ತಿದೆಯೇ ಎಂಬುದರ ಕುರಿತು ಚರ್ಚೆಯಾಗಬೇಕು. ಎಲ್ಲದಕ್ಕೂ ನಾವು ಖಾಸಗಿ ಕ್ಷೇತ್ರದಲ್ಲೇ ಸೇವೆ ಪಡೆಯುತ್ತಿರುವಾಗ, ಸರ್ಕಾರ ಸ್ವಾಮ್ಯದ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರ ಬೇಕೇ? ಎಂದು ಪ್ರಶ್ನಿಸಿದರು.

ದೇಶದಲ್ಲಿ ಇದೇ ಪರಿಸ್ಥಿತಿ ಮುಂದುವರೆದರೆ, ಭಾರತೀಯರಿಗೆ ಇನ್ಯಾವ ಕಾಲಕ್ಕೆ ಗುಣಮಟ್ಟದ ಸೇವೆ ಒದಗಿಸಲು ಸಾಧ್ಯ. 1990ರ ಸಂದರ್ಭದಲ್ಲಿ ಚೀನಾದಲ್ಲಿ ಎರಡು ಹೊತ್ತಿನ ಊಟಕ್ಕೂ ಪರದಾಡುವ ಪರಿಸ್ಥಿತಿ ಇತ್ತು. ತದ ನಂತರ ಆ ದೇಶ ಎಲ್ಲಾ ರಂಗದಲ್ಲೂ ಬೆಳವಣಿಗೆ ಸಾಧಿಸಿ, ಜಗತ್ತಿನ ಮುಂದುವರೆದ ರಾಷ್ಟ್ರಗಳ ಸಾಲಿನಲ್ಲಿ ಸೂಪರ್ ಪವರ್ ದೇಶವಾಗಿ ಹೊರಹೊಮ್ಮಿದೆ. ಇದಕ್ಕೆಲ್ಲಾ ಅಲ್ಲಿನ ಜನರ ಪಟ್ಟ ಶ್ರಮ ಕಾರಣ ಎಂದು ವಿಶ್ಲೇಷಿಸಿದರು. ಮೈಸೂರಿನಲ್ಲಿ ಜೆಎಸ್‌ಎಸ್, ಮಹಾಜನ, ಎಸ್‌ಡಿಎಂ, ಶಾರದಾವಿಲಾಸ ಸೇರಿದಂತೆ ಇತರೆ ಖಾಸಗಿ ಶಾಲಾ–ಕಾಲೇಜುಗಳು ಇಲ್ಲದಿದ್ದರೆ, ಇಲ್ಲಿನ ಯುವಕರಿಗೆ ಗುಣಮಟ್ಟ ಶಿಕ್ಷಣ ಪಡೆಯಲು ಸಾಧ್ಯವಿತ್ತೆ. ಇವತ್ತಿಗೂ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಸಿಗುತ್ತಿರುವ ಚಿಕಿತ್ಸಾ ಸೌಲಭ್ಯ ಸರ್ಕಾರಿ ಸಾಮ್ಯದ ಆಸ್ಪತ್ರೆಗಳಲ್ಲಿ ಸಿಗದಿರುವ ಕುರಿತು ನಾವು–ನೀವು ಯೋಚಿಸಬೇಕು ಎಂದರು. ಒಂದು ವೇಳೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಅದಾನಿ, ಅಂಬಾನಿ ಅಥವಾ ಇನ್ಫೋಸಿಸ್ ಇಲ್ಲವೆ ವಿಪ್ರೋ ಸಂಸ್ಥೆಗಳಿಗೆ ಕೊಟ್ಟರೆ, ಆ ಸಂಸ್ಥೆಗಳಾದರೂ ಗುಣಮಟ್ಟದ ಆರೋಗ್ಯ ಮತ್ತು ಶಿಕ್ಷಣ ನೀಡಲು ಸಾಧ್ಯವಿದೆ. ಆ ಪ್ರಯೋಗವೂ ಒಮ್ಮೆ ನಡೆದರೆ ಉತ್ತಮ ಎಂದರು.

ವಿಜ್ಞಾನಿಗಳ ಸೇವೆ ಅನನ್ಯ: ಕೊರೊನಾ ವೇಳೆ ಜಗತ್ತಿನ ಎಲ್ಲಾ ವಿಜ್ಞಾನಿಗಳು ಒಗ್ಗಟ್ಟು ಪ್ರದರ್ಶಿಸಿ, ಅದಕ್ಕೆ ಔಷಧಿ ಕಂಡು ಹಿಡಿದರು. ಇದರಿಂದ ಪ್ರಪಂಚದ ಕೋಟ್ಯಾಂತರ ಜನರ ಪ್ರಾಣ ಉಳಿಸಿಕೊಳ್ಳಲು ಸಾಧ್ಯವಾಯಿತು. ಆ ವೇಳೆ ಫಾರ್ಮಾಸಿಸ್ಟ್ ಹಾಗೂ ಕೆಮಿಸ್ಟ್‌ಗಳ ಪಾತ್ರವೂ ಮಹತ್ವದ್ದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕೊರೊನಾ ಸಂದರ್ಭದಲ್ಲಿ ವೈದ್ಯರೂ ರೋಗಿಗಳಿಗೆ ಚಿಕಿತ್ಸೆ ನೀಡಲು ಹಿಂದೇಟು ಹಾಕಿದ ಸಂದರ್ಭದಲ್ಲಿ ಫಾರ್ಮಾಸಿಸ್ಟ್‌ಗಳು ತಮ್ಮ ಅನುಭವದ ಆಧಾರದ ಮೇಲೆ ತಾವೇ ವೈದ್ಯರ ರೀತಿ ಕಾರ್ಯ ನಿರ್ವಹಿಸಿ, ಲಕ್ಷಾಂತರ ಜನರ ಪ್ರಾಣ ಉಳಿವಿಗೆ ಕಾರಣಕರ್ತರಾಗಿದ್ದಾರೆ. ಅಂತಹವರ ಹೆಸರಿನಲ್ಲಿ ಐದು ಮಂದಿ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿರುವುದು ಉತ್ತಮ ಸಂಗತಿ ಎಂದರು.

ಪ್ರಶಸ್ತಿ ಸನ್ಮಾನ: ಈ ವೇಳೆ ಎನ್.ಆರ್. ಮೊಹಲ್ಲಾದ ಕೃಷ್ಣ ಮೆಡಿಕಲ್‌ನ ಎ.ಸಿ.ಕೃಷ್ಣಪ್ಪ, ಹೆಬ್ಬಾಳಿನ ಶಶಾಂಕ್ ಮೆಡಿಕಲ್ಸ್‌ನ ಆರ್.ರೂಪ, ಜೆ.ಸಿ.ನಗರದ ಶಿವಾನಂದ ಮೆಡಿಕಲ್ಸ್‌ನ ಎಚ್.ವಿ.ಚಂದ್ರಶೇಖರ್, ಉದಯಗಿರಿಯ ನೋಬೆಲ್ ಡ್ರಗ್ ಹೌಸ್‌ನ ಅನೇಶ್ ಅಹಮ್ಮದ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮೈಸೂರು ವಲಯದ ಎಡಿಸಿ ಎಸ್.ನಾಗರಾಜು, ಉಪ ಔಷಧ ನಿಯಂತ್ರಕ ಬಿ.ಪಿ.ಅರುಣ್, ಔಷಧ ಪರಿವೀಕ್ಷಕ ಹರೀಶ್, ರೋಟರಿ ಮೈಸೂರು ಉತ್ತರ ಅಧ್ಯಕ್ಷ ರೊ. ಎಸ್.ಎಚ್.ಜಗದೀಶ್, ಸದಸ್ಯ ರೊ.ಎ.ಪಿ.ವಿರೂಪಾಕ್ಷ, ರೊ.ಬಿ.ಆರ್.ಶಿವಕುಮಾರ್, ರೊ.ರಾಜಶೇಖರ ಕದಂಬ, ರೊ.ಕೆ.ಲೋಕನಾಥ್, ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಜಾನಪದ ವಿವಿ ಸಿಂಡಿಕೇಟ್ ಸದಸ್ಯ ಕೆ.ವಸಂತ್, ದಿವಂಗತ ಎಂ.ನಿರಂಜನಮೂರ್ತಿ ಅವರ ಪತ್ನಿ ಸುಜಾತ, ಡಾ.ಶರತ್, ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ರಾಜು, ಉಪಸ್ಥಿತರಿದ್ದರು.

ಮಳವಳ್ಳಿಯಲ್ಲಿ ಬಾಲಕಿ ಹತ್ಯೆ ಪ್ರಕರಣ: ಟ್ಯೂಷನ್ ಟೀಚರ್ ವಿರುದ್ಧ

ಕಠಿಣ ಶಿಕ್ಷೆಗೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಅ.14(ಎಂಟಿವೈ)– ಮಳವಳ್ಳಿಯಲ್ಲಿ ಅಪ್ರಾಪ್ತ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ, ಹತ್ಯೆಗೈದ ಆರೋಪಿಯನ್ನು ಗಲ್ಲಿಗೇರಿಸುವಂತೆ ಒತ್ತಾಯಿಸಿ ಗಂಧದಗುಡಿ ಫೌಂಡೇಷನ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದಲ್ಲಿ ಶುಕ್ರವಾರ ಕಾಲೇಜು ವಿದ್ಯಾರ್ಥಿಗಳೊಂದಿಗೆ ಪ್ರತಿಭಟನೆ ನಡೆಸಿದ ಫೌಂಡೇಷನ್ ಕಾರ್ಯಕರ್ತರು, ಇತ್ತೀಚಿನ ವರ್ಷಗಳಲ್ಲಿ ಹಲವೆಡೆ ಬಾಲಕಿಯರ ಮೇಲೆ ಅತ್ಯಾಚಾರ, ಹತ್ಯೆ ಪ್ರಕರಣ ನಿರಂತರವಾಗಿ ನಡೆಯುತ್ತಿದೆ. ಅತ್ಯಾಚಾರ ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳದ ಕಾರಣ ಪ್ರಕರಣಗಳು ಮರುಕಳಿಸುತ್ತಿವೆ. ಅತ್ಯಾಚಾರವೆಸಗುವ ಕೀಳು ಹಾಗೂ ಕ್ರೂರ ಮನಸ್ಥಿತಿ ಹೊಂದಿರುವ ದುರುಳರಿಗೆ ಕಠಿಣ ಶಿಕ್ಷೆ ಆಗಬೇಕು. ಅಂತಹವರಿಗೆ ಗಲ್ಲು ಶಿಕ್ಷೆ ವಿಧಿಸಬೇಕು. ಆಗ ಮಾತ್ರ ಅತ್ಯಾಚಾರ ಪ್ರಕರಣಗಳಿಗೆ ತಡೆಯಬಹುದಾಗಿದೆ ಎಂದು ಅಭಿಪ್ರಾಯಪಟ್ಟರು.

ಮಳವಳ್ಳಿಯಲ್ಲಿ ನಡೆದ ಬಾಲಕಿ ಹತ್ಯೆ ಪ್ರಕರಣ ಮಾನವ ಕುಲ ತಲೆ ತಗ್ಗಿಸುವ ಸಂಗತಿ. ಟ್ಯೂಷನ್ ಹೇಳಿಕೊಡುವ ಶಿಕ್ಷಕನ ನೀಚತನ ಬಹಿರಂಗವಾಗಿದೆ. ಆತನ ಕೃತ್ಯ ಕ್ಷಮಿಸಲಾರದ ಅಪರಾಧವಾಗಿದ್ದು, ಕೇವಲ ಸಣ್ಣ ಪ್ರಮಾಣದ ಜೈಲು ಶಿಕ್ಷೆ ನೀಡಬಾರದು. ಆತನಿಗೆ ಗಲ್ಲು ಶಿಕ್ಷೆಯನ್ನೇ ವಿಧಿಸಬೇಕು. ಈ ಪ್ರಕರಣದ ಸಂಬಂಧ ವಕೀಲರು ಆರೋಪಿಗಳ ಪರ ವಾದ ಮಾಡದೇ, ಕಠಿಣ ಶಿಕ್ಷೆಯಾಗಲು ಸಹಕರಿಸುವ ಮೂಲಕ ಬಾಲಕಿಯ ಆತ್ಮಕ್ಕೆ ಶಾಂತಿ ದೊರಕುವಂತೆ ಮಾಡ ಬೇಕೆಂದು ಮನವಿ ಮಾಡಿದರು. ಪ್ರತಿಭಟನೆಯಲ್ಲಿ ಗಂಧದಗುಡಿ ಫೌಂಡೇಷನ್ ರಾಜ್ಯಾಧ್ಯಕ್ಷ ಆರ್ಯನ್, ಉಪಾಧ್ಯಕ್ಷ ಮನೋಹರ್‌ಗೌಡ, ಮೇಘನಾ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಕೇಂದ್ರ, ರಾಜ್ಯ ಸರ್ಕಾರಗಳು ಜನವಿರೋಧಿ: ಜನತಾ ಪಕ್ಷ ಆರೋಪ

ಮೈಸೂರು, ಅ.14(ಆರ್‌ಕೆಬಿ)– ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನವಿರೋಧಿ ನೀತಿಯಿಂದಾಗಿ ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಇದಕ್ಕೆ ಉದಾಹರಣೆಯಾಗಿ ಅಡುಗೆ ಅನಿಲ ಸಿಲಿಂಡರ್ ಬೆಲೆ 1200 ರೂ., ಡೀಸೆಲ್, ಪೆಟ್ರೋಲ್ ಬೆಲೆಗಳೂ ಗಗನಕ್ಕೇರಿವೆ. ಹೀಗಾಗಿ ಮತದಾರರು ಮುಂದಿನ ಚುನಾವಣೆಯಲ್ಲಿ ಜನತಾ ಪಕ್ಷವನ್ನು ಬೆಂಬಲಿಸಬೇಕೆಂದು ಜನತಾ ಪಕ್ಷದ ಜಿಲ್ಲಾಧ್ಯಕ್ಷ ಶ್ರೀನಿವಾಸ್ ಮನವಿ ಮಾಡಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೆಲೆಗಳೇರುತ್ತಿದ್ದರೂ ಬಡ ಕೂಲಿ ಕಾರ್ಮಿಕರ ಕೂಲಿ ಹೆಚ್ಚಳವಾಗಿಲ್ಲ. ಓರ್ವ ರೈತರ ಆರ್‌ಟಿಸಿ ದರ 20 ರೂ. ಆಗಿದೆ. ಇದೇ ರೀತಿ ಪರಿಸ್ಥಿತಿ ಮುಂದುವರಿದರೆ ಜನಸಾಮಾನ್ಯರ ಪರಿಸ್ಥಿತಿ ಏನೆಂಬುದನ್ನು ಸರ್ಕಾರ ಅರಿತುಕೊಳ್ಳುತ್ತಿಲ್ಲ ಎಂದು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಮಾಜಿ ಸಚಿವರಾದ ಬಿ.ಟಿ.ಲಲಿತಾ ನಾಯಕ್ ಅವರ ನೇತೃತ್ವದಲ್ಲಿ ತಮ್ಮ ಪಕ್ಷ ಮುಂದಿನ ಚುನಾವಣೆ ವೇಳೆ ರಾಜ್ಯದ ಎಲ್ಲಾ ಕ್ಷೇತ್ರಗಳಲ್ಲಿಯೂ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಿದೆ. ಪಕ್ಷದ ಧ್ಯೇಯ ಧೋರಣೆ ಕಂಡು ಅನೇಕರು ಪಕ್ಷ ಸೇರುತ್ತಿದ್ದು, ಪಕ್ಷವನ್ನು ತಳಮಟ್ಟದಿಂದ ಸಂಘಟಿಸುವ ಕೆಲಸ ನಡೆದಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಪಕ್ಷದ ರಾಜ್ಯ ಉಪಾಧ್ಯಕ್ಷ ಹೊನ್ನೇಗೌಡ, ಮಾದನಹಳ್ಳಿ ಗಿರೀಶ್, ಅಣ್ಣಯ್ಯ, ರಾಮಕೃಷ್ಣಯ್ಯ ಹಾಜರಿದ್ದರು.

ಅ.17ರಂದು ಕಾನೂನು ವಿವಿ ಕುಲಪತಿ ಪ್ರೊ.ಸಿ.ಬಸವರಾಜುಗೆ ಅಭಿನಂದನೆ

ಮೈಸೂರು, ಅ.14(ಆರ್‌ಕೆಬಿ)– ಸಮಾನತೆ– ಸ್ವಾಭಿಮಾನ– ಸ್ವಾವಲಂಬನೆ ಪ್ರತಿಷ್ಠಾನ ಹಾಗೂ ಸಮಾನತೆ ಪ್ರಕಾಶನಗಳ ಸಂಯುಕ್ತಾಶ್ರಯದಲ್ಲಿ ಅ. 17 ರಂದು ಬೆಳಗ್ಗೆ 11ಕ್ಕೆ ಕಲಾಮಂದಿರದಲ್ಲಿ ರಾಜ್ಯ ಕಾನೂನು ವಿವಿ ಕುಲಪತಿ ಪ್ರೊ.ಸಿ. ಬಸವರಾಜು ಹಾಗೂ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದಿಂದ ಪಿಹೆಚ್‌ಡಿ ಪದವಿ ಪಡೆದಿರುವ ಡಾ.ಕಲ್ಯಾಣಸಿರಿ ಭಂತೇಜಿ ಅವರನ್ನು ಅಭಿನಂದಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಾಶಕ ಭರತ್ ರಾಮಸ್ವಾಮಿ ತಿಳಿಸಿದರು. ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರು ಮಹಾಬೋಧಿ ಸೊಸೈಟಿ ಪ್ರಧಾನ ಕಾರ್ಯದರ್ಶಿ ಆನಂದ ಭಂತೇಜಿ ಸಾನಿಧ್ಯ ವಹಿಸುವರು. ನಿವೃತ್ತ ನ್ಯಾಯಾಧೀಶ, ಕರ್ನಾಟಕ ರಾಜ್ಯದ ನಿವೃತ್ತ ಲೋಕಾಯುಕ್ತ ಎನ್.ಸಂತೋಷ್ ಹೆಗ್ಡೆ ಉದ್ಘಾಟಿಸುವರು. ವಿಶ್ರಾಂತ ಪ್ರಾಧ್ಯಾಪಕ ಡಾ.ನೀಲಗಿರಿ ತಳವಾರ್ ಅಭಿನಂದನಾ ನುಡಿ ಆಡುವರು., ಚಾಮರಾಜನಗರ ಸಂಸದ ವಿ.ಶ್ರೀನಿವಾಸಪ್ರಸಾದ್ ಅಧ್ಯಕ್ಷತೆ ವಹಿಸುವರು ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರತಿಷ್ಠಾನದ ಉಪಾಧ್ಯಕ್ಷ ಪಿ.ನಂದಕುಮಾರ್, ಶಿವಕುಮಾರ್ ಉಪಸ್ಥಿತರಿದ್ದರು.

ಸರ್ಕಾರಿ ನೌಕರರಿಗೆ ದೀಪಾವಳಿ ಗಿಫ್ಟ್

ಏಳನೇ ವೇತನ ಆಯೋಗ ರಚನೆ: ಸಿಎಂ ಘೋಷಣೆ

ಬೆಂಗಳೂರು, ಅ.14– ಕಳೆದ ತಿಂಗಳು ನೀಡಿದ್ದ ಭರವಸೆಯಂತೆ ರಾಜ್ಯ ಸರ್ಕಾರಿ ನೌಕರರ ವೇತನ ಹೆಚ್ಚಳ ಸಂಬಂಧ ಈ ತಿಂಗಳಲ್ಲಿಯೇ ಏಳನೇ ವೇತನ ಆಯೋಗ ರಚನೆ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದ್ದು, ಸರ್ಕಾರಿ ನೌಕರರಿಗೆ ಬೊಮ್ಮಾಯಿ ಸರ್ಕಾರ ದೀಪಾವಳಿ ಉಡುಗೊರೆ ನೀಡುತ್ತಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಳೆದ ತಿಂಗಳು ನಡೆದಿದ್ದ ಸರ್ಕಾರಿ ನೌಕರರ ದಿನಾಚರಣೆಯಂದು ಸರ್ಕಾರಿ ನೌಕರರ ವೇತನ ಹೆಚ್ಚಳಕ್ಕೆ ಏಳನೇ ವೇತನ ಆಯೋಗ ರಚನೆ ಭರವಸೆ ನೀಡಿದ್ದರು. ಪುಣ್ಯಕೋಟಿ ದತ್ತು ಯೋಜನೆಗೆ ದೇಣಿಗೆ ನೀಡುವಂತೆ ಸರ್ಕಾರಿ ನೌಕರರಿಗೆ ಮಾಡಿದ್ದ ಮನವಿಯಂತೆ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರ ನೇತೃತ್ವದ ನಿಯೋಗವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಯಾಗಿ, ರಾಜ್ಯ ಸರ್ಕಾರದ 'ಪುಣ್ಯಕೋಟಿ ದತ್ತು ಯೋಜನೆ'ಗೆ ರಾಜ್ಯ ಸರ್ಕಾರಿ ನೌಕರರು ಹಾಗೂ ಸರ್ಕಾರದ ಇತರ ಸಂಸ್ಥೆಗಳ ನೌಕರರು ದೇಣಿಗೆ ನೀಡಲು ಸಮ್ಮತಿಸಿರುವ ಕುರಿತು ಸಮ್ಮತಿ ಪತ್ರವನ್ನು ಮುಖ್ಯಮಂತ್ರಿಗಳಿಗೆ ಹಸ್ತಾಂತರಿಸಿದ್ದರು. ನೌಕರರ ಸಂಘವು ರಾಜ್ಯ ಸರ್ಕಾರಿ ನೌಕರರು ಮತ್ತು ಸರ್ಕಾರದ ಇತರ ಸಂಸ್ಥೆಗಳ ನೌಕರರು ಸ್ವ–ಇಚ್ಛೆಯಿಂದ ದೇಣಿಗೆ ನೀಡಲು ಮುಂದಾಗಿದ್ದು, ಗ್ರೂಪ್ ಎ ಅಧಿಕಾರಿಗಳು 11,000 ರೂ., ಗ್ರೂಪ್ ಬಿ ಅಧಿಕಾರಿಗಳು 4000 ರೂ. ಹಾಗೂ ಸಿ ವೃಂದದ ನೌಕರರು 400 ರೂ. ದೇಣಿಗೆಯನ್ನು ಒಂದು ಬಾರಿಗೆ ಪಾವತಿಸಲು ಸಮ್ಮತಿಸಿದ್ದಾರೆ. ಇದನ್ನು ಅಕ್ಟೋಬರ್ ಹಾಗೂ ನವೆಂಬರ್ ತಿಂಗಳ ವೇತನದಲ್ಲಿ ಕಟಾಯಿಸುವಂತೆ ಕೋರಿದ್ದಾರೆ. ಈ ಮೊತ್ತವು ಸುಮಾರು 80 ರಿಂದ 100 ಕೋಟಿ ರೂ.ಗಳಾಗಲಿದೆ ಎಂದು ಅಂದಾಜಿಸಲಾಗಿದೆ.

ಸಿಎಂ ಮೆಚ್ಚುಗೆ: ನೌಕರರ ಸಂಘದ ಈ ನಿರ್ಧಾರಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ಮುಖ್ಯಮಂತ್ರಿಗಳು, ರಾಜ್ಯ ಸರ್ಕಾರದ ಗೋಶಾಲೆಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮುದಿ ಗೋವುಗಳು ಆಶ್ರಯ ಪಡೆದಿವೆ. ಇವುಗಳ ಸಮರ್ಪಕ ಪಾಲನೆ ಪೋಷಣೆ ನಮ್ಮೆಲ್ಲರ ಕರ್ತವ್ಯವೂ ಹೌದು. ಈ ಪುಣ್ಯದ ಕೆಲಸದಲ್ಲಿ ಸರ್ಕಾರಿ ನೌಕರರು ಸ್ವಯಂ ಪ್ರೇರಣೆಯಿಂದ ಕೈಜೋಡಿಸಲು ಮುಂದಾಗಿರುವುದು ಅಭಿನಂದನಾರ್ಹ ಎಂದು ತಿಳಿಸಿದರು.

ಪೋರ್ಚುಗೀಸರಿಂದ ವಿಮೋಚನೆ ಹಿನ್ನೆಲೆ

ಗೋವಾ@60 ಸಾಂಸ್ಕೃತಿಕ ಉತ್ಸವಕ್ಕೆ ಚಾಲನೆ



ಮೈಸೂರು, ಅ.14(ಎಂಟಿವೈ)– ಪೋರ್ಚುಗೀಸರಿಂದ ಸ್ವಾತಂತ್ರ್ಯ ಪಡೆದು 60 ವರ್ಷ ಸಂದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಗೋವಾ ಪ್ರವಾಸೋದ್ಯಮ ಇಲಾಖೆ ‘ಗೋವಾ @ 60’ ಸಾಂಸ್ಕೃತಿಕ ಕಾರ್ಯಕ್ರಮದ ಮೂಲಕ ಜಾಗೃತಿ ಮೂಡಿಸಲು ಮುಂದಾಗಿದೆ. ಮೈಸೂರಿನ ನಜರ್‌ಬಾದ್‌ನ ನೆಕ್ಸಸ್ ಮಾಲ್‌ನಲ್ಲಿ ಗೋವಾ ಪ್ರವಾಸೋದ್ಯಮ ಇಲಾಖೆ, ಮೂರು ದಿನಗಳ ‘ಗೋವಾ ಸ್ವಾತಂತ್ರ್ಯ’ ಸಂಭ್ರಮ ಕಾರ್ಯಕ್ರಮದಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳ ಸೊಬಗು ಮೇಳೈಸಿತು. ಅರಮನೆ ಮಂಡಳಿಯ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಡೋಲು ಬಾರಿಸುವ ಮೂಲಕ ಉತ್ಸವಕ್ಕೆ ಚಾಲನೆ ನೀಡಿದರು.

ಈ ವೇಳೆ ಗೋವಾದ ಸಾಂಸ್ಕೃತಿಕ ಕಾರ್ಯಕ್ರಮಗಳು, ಅಡುಗೆ ಪರಿಚಯ, ಕ್ವಿಜ್ ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಶನಿವಾರ ಹಾಗೂ ಭಾನುವಾರವೂ ವಿವಿಧ ಕಾರ್ಯಕ್ರಮ ಜರುಲಿದ್ದು, ಗೋವಾಗೆ ಹೆಚ್ಚಿನ ಮೈಸೂರಿಗರನ್ನು ಆಕರ್ಷಿಸಲು ಈ ಕಾರ್ಯಕ್ರಮಗಳು ಪೂರಕವಾಗಿದೆ. ಗೋವಾ ಪ್ರವಾಸೋದ್ಯಮಕ್ಕೆ ಮತ್ತಷ್ಟು ಉತ್ತೇಜನ ನೀಡುವ ಸಲುವಾಗಿ ಅಹಮದಾಬಾದ್, ಉದಯಪುರ, ವಾರಣಾಸಿ, ಮಧುರೈ, ತಿರುವನಂತಪುರಂ ಸೇರಿದಂತೆ ದೇಶದ ವಿವಿಧೆಡೆ ಕಾರ್ಯಕ್ರಮ ಆಯೋಜಿಸಲಾಗಿದೆ. ಗೋವಾದ ಕಲೆ, ಸಂಸ್ಕೃತಿ, ಪರಂಪರೆಯನ್ನು ಬಿಂಬಿಸುವ ಸಂಗೀತ, ನೃತ್ಯ, ಕ್ಲಿಕ್ಸೆ ಬ್ಯಾಂಡ್, ಶಿಗ್ಮೋ ಪರೇಡ್, ಘೋಡೆ ಮೋಡ್ನಿ, ಲ್ಯಾಂಪ್ಡ್ಯಾನ್ಸ್, ಕಿಂಗ್ ಮೊಮೊ ನೃತ್ಯ ಪ್ರದರ್ಶನ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಗೋವಾ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ಅನಿಲ್ ದಲಾಲ್, ಗೋವಾ ಮಾಹಿತಿ ಮತ್ತು ಪ್ರಚಾರ ಇಲಾಖೆಯ ಅಧಿಕಾರಿಗಳಾದ ವಿಷ್ಣು ಗಾಂವ್ಕರ್, ರಸಿಕಾ ನಾಯಕ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಲ್ಲಿ ಮತ್ತೆ ಮಳೆ ಅಬ್ಬರ

ಮೈಸೂರು, ಅ.14(ಜಿಎ)– ಮೈಸೂರಿನಲ್ಲಿ ಶುಕ್ರವಾರ ರಾತ್ರಿ ಗುಡುಗು ಮಿಂಚು ಸಹಿತ ಭಾರೀ ಮಳೆ ಸುರಿಯಿತು.

ಸಂಜೆಯಿಂದಲೇ ಮೋಡ ಕವಿದ ವಾತಾವರಣವಿತ್ತಾದರೂ ರಾತ್ರಿ 10ರ ವೇಳೆಗೆ ಮಿಂಚು–ಗುಡುಗಿನೊಂದಿಗೆ ಬನ್ನಿಮಂಟಪ, ಉದಯಗಿರಿ, ಹೆಬ್ಬಾಳ್, ವಿಜಯನಗರ, ಜೆಪಿನಗರ, ಶಾರದಾದೇವಿನಗರ, ದಟ್ಟಗಳ್ಳಿ, ತಿಲಕ್‌ನಗರ, ಸರಸ್ವತಿಪುರಂ, ಗೋಕುಲಂ, ಯಾದವಗಿರಿ, ಒಂಟಿಕೊಪ್ಪಲ್, ಮೇಟಗಳ್ಳಿ ಸೇರಿದಂತೆ ನಗರದ ಹಲವೆಡೆ ಹಾಗೂ ಹೊರವಲಯದಲ್ಲಿ ಭಾರೀ ಮಳೆಯಾಗಿದೆ. ಧಾರಾಕಾರ ಮಳೆ ಪರಿಣಾಮ ಸಿದ್ಧಾರ್ಥನಗರ ಬಡಾವಣೆಯಲ್ಲಿ ಕೆಲ ಮನೆಗಳಿಗೆ ನೀರು ನುಗ್ಗಿ, ನಿವಾಸಿಗಳು ತೊಂದರೆಗೆ ಒಳಗಾದರು. ದಸರಾ ವಸ್ತು ಪ್ರದರ್ಶನದ ಹಿಂಭಾಗ ಎಂಜಿ ರಸ್ತೆಯಲ್ಲಿರುವ ಮೋರಿ ತುಂಬಿ ನೀರು ರಸ್ತೆಯನ್ನು ಆವರಿಸಿದರೆ, ಸರಸ್ವತಿಪುರಂ ಪೆಟ್ರೋಲ್ ಬಂಕ್ ಬಳಿ ಮರವೊಂದು ಉರುಳಿ ಬಿದ್ದು ರಸ್ತೆ ಸಂಚಾರಕ್ಕೆ ಅಡ್ಡಿಯಾಗಿತ್ತು. ವಿಷಯ ತಿಳಿದು ನಗರಪಾಲಿಕೆಯ ಅಭಯ–3ನೇ ತಂಡದವರು ಮರವನ್ನು ತೆರವುಗೊಳಿಸಿದರು. ರಾತ್ರಿ ಬಹುಹೊತ್ತಿನವರೆಗೂ ನಿರಂತರವಾಗಿ ಜೋರು ಮಳೆ ಸುರಿಯುತ್ತಿತ್ತು.



ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಕುವೆಂಪುನಗರ ಘಟಕದ ವತಿಯಿಂದ ಶುಕ್ರವಾರ ವಾಲ್ಮೀಕಿ ಜಯಂತಿಯ ಅಂಗವಾಗಿ 'ರಾಮಾಯಣ ಲಿಖಿತ ರಸಪ್ರಶ್ನೆ' ಆಯೋಜಿಸಲಾಗಿತ್ತು. ನಂತರ ಪರಿಷತ್ತಿನ ಉಪಾಧ್ಯಕ್ಷ ಬಿ.ಕೆ.ಜಗದೀಶ್ ಅವರಿಂದ ವಾಲ್ಮೀಕಿ ಕುರಿತು ಉಪನ್ಯಾಸ ಏರ್ಪಡಿಸಲಾಗಿತ್ತು. ಚಿತ್ರದಲ್ಲಿ ಘಟಕದ ಸಂಚಾಲಕಿ ಗಾಯತ್ರಿ ಸುಂದರೇಶ್, ರಸಪ್ರಶ್ನೆಯಲ್ಲಿ ಬಹುಮಾನ ಪಡೆದವರನ್ನು ಕಾಣಬಹುದು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

All Brands SOLAR WATER HEATER Available
Starting Rs. 20,900/- (200 Ltr.)
SALES & SERVICE
BAJAJ FINSERV 0%EMI Exchange Offer
SUN POWER SOLUTIONS
Yeraganahalli, Mysore
9739804444

ಬೇಕಾಗಿದ್ದಾರೆ
ವೃದ್ಧಾಶ್ರಮಕ್ಕೆ ಮಹಿಳಾ ಹೋಂ ನರ್ಸ್‌ಗಳು ಬೇಕಾಗಿದ್ದಾರೆ.
ಊಟ, ವಸತಿ ಉಚಿತ ಸೌಲಭ್ಯ
Mob: 95351 52200

CHIMNEY
SALES & SERVICE
BAJAJ FINSERV 0%EMI
SUN POWER SOLUTIONS
Yeraganahalli, Mysore
9739804444

ಚಾಲ್ತಿಯಲ್ಲಿರುವ ಹೋಟೆಲ್ ಬಾಡಿಗೆಗೆ ದೊರೆಯುತ್ತದೆ
ವಿಳಾಸ: ಸುಂದರ್ ಆರ್ಕೇಡ್ ಕಾಂಪ್ಲೆಕ್ಸ್, ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟ್ಯಾಂಡ್ ಎದುರು, ಮೈಸೂರು– 570001
9972346677
8618677789

ಮನೆ ಭೋಗ್ಯಕ್ಕಿದೆ
3BHK 9 ಲಕ್ಷ, ದಾಸನಕೊಪ್ಪಲು, ರೂಪನಗರ, ಕಾರ್ ಪಾರ್ಕಿಂಗ್, ಸೌಲಭ್ಯವಿದೆ.
30x40, W/F 48 ಲಕ್ಷ, ನ್ಯಾಯಾಂಗ ಬಡಾವಣೆ, ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ, ಮೈಸೂರು.
9986856999 / 9845765573

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಉಚಿತ ಕಣ್ಣಿನ ತಪಾಸಣೆ
ದಿನಾಂಕ: 16 ಮತ್ತು 17ನೇ ಅಕ್ಟೋಬರ್ 2022 ಇದೇ ಭಾನುವಾರ ಮತ್ತು ಸೋಮವಾರ.
ಶಿಬಿರದ ಸ್ಥಳ: ಅವ್ವಾನ್ ಐ ಕೇರ್ & ಕಾಂಟ್ಯಾಕ್ಟ್ ಲೆನ್ಸ್, ವಿದ್ಯಾರಣ್ಯಪುರಂ, ಮೈಸೂರು.
8123001688

'ನೆಲೆ' ವೃದ್ಧಾಶ್ರಮ
(ಮಹಿಳೆಯರಿಗಾಗಿ ಮಾತ್ರ)
ಆರೋಗ್ಯ ಆರೈಕೆ ಬೇಕಾದ ಹಿರಿಯ ಮಹಿಳೆಯರಿಗೆ ಮಾನಸಿಕ ಖಾಯಿಲೆಯಿರುವವರಿಗೆ ಹಾಸಿಗೆ ಹಿಡಿದವರಿಗೆ ವಸತಿ, ಸಸ್ಯಹಾರ ಊಟ, ನರ್ಸಿಂಗ್ ಸೌಲಭ್ಯ ದೊರೆಯುತ್ತದೆ.
ದಾಖಲಾತಿಗಾಗಿ ಸಂಪರ್ಕಿಸಿ: ಡಾ.ಕಾಂತರಾಜು.ಸಿ.ಕೆ
9845058023 / 9686190005

ಬೇಕಾಗಿದ್ದಾರೆ
ಶಾಶ್ವತ ಸೇವಾ ಶಾಲೆ
ದಿ.ಮೈಸೂರು ಶಾಶ್ವತ ಸೇವಾ ಟ್ರಸ್ಟ್ (ರಿ)
ಟಿ.ನರಸೀಪುರ ಮುಖ್ಯ ರಸ್ತೆ, ಗಿರಿದರ್ಶಿನಿ, ಬಡಾವಣೆ, ಆಲನಹಳ್ಳಿ, ಮೈಸೂರು–570 028.
ಶಾಲೆಯಲ್ಲಿಯೇ ಉಳಿದುಕೊಂಡು ಶಾಲೆಯನ್ನು ಹಗಲು – ರಾತ್ರಿ ನೋಡಿಕೊಂಡು ಕೆಲಸ ನಿರ್ವಹಿಸಲು ಕಾವಲುಗಾರರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ತಮ್ಮ ಸ್ವವಿವರಗಳೊಂದಿಗೆ ಶಾಲೆಗೆ ಬಂದು ಅರ್ಜಿಯನ್ನು ಸಲ್ಲಿಸಬಹುದು. ಕಾರ್ಯದರ್ಶಿಗಳು
0821-2478099 / 9611353433

TV ಕೆಟ್ಟಿದೆಯೇ?
LCD, LED TV
ಫ್ರಿಡ್ಜ್, ವಾಷಿಂಗ್ ಮೇಷಿನ್, Micro Oven
Doorstep ಸರ್ವಿಸ್ ಮಾಡಿಕೊಡಲಾಗುತದೆ
ನುರಿತ ಸರ್ವಿಸ್ ಇಂಜಿನಿಯರ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲ ಮಾಡಿಕೊಡಲಾಗುತ್ತದ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

SRA PACKAGE TOURS
4 ದಿನಗಳ ಕೇರಳ ಪ್ರವಾಸ ಅನಂತ ಪದ್ಮನಾಭ ದೇವಸ್ಥಾನ, ಅಲ್ಲೆಪಿ, ಕೊಚಿನ್, ಕೋವಲಂ ಬೀಚ್, ಗುರುವಾಯೂರು, ಚೋಟನಿಕರ ದೇವಿ ದೇವಸ್ಥಾನ, ಜಟಾಯು ಅರ್ಥ ಸೆಂಟರ್ ಫ್ಯಾಮಿಲಿಗೆ ಪ್ರತ್ಯೇಕ ಕೊಠಡಿ, ಶುದ್ಧ ಸಸ್ಯಹಾರ, ಮಿನರಲ್ ವಾಟರ್, ಕಾಫಿ / ಟೀ, ಕೇವಲ ರೂ.5300/–, ಹೊರಡುವ ದಿನಾಂಕ: 28.10.2022 ಸಂಜೆ, 6.00 ಗಂಟೆಗೆ. ಸಂಪರ್ಕಿಸಿ:
7022271023

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
9606871188

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು, ಮಹಿಳೆಯರು ಬೇಕಾಗಿದ್ದಾರೆ. ಸ್ಥಳ: ಕೆ.ಜಿ.ಕೊಪ್ಪಲ್, ಹೆಬ್ಬಾಳ್ ಹಾಗೂ ಅಗ್ರಹಾರ. ಸಂಬಳ: 8,000/– ಸ್ಥಳೀಯರಿಗೆ ಆದ್ಯತೆ. ಸಮಯ ಬೆಳಿಗ್ಗೆ 9:30 ಯಿಂದ ರಾತ್ರಿ 9:00 ವರೆಗೆ. ಸಂಪರ್ಕಿಸಿ:
9986311444
9986322444

SITE FOR SALE
20x30 & 30x40
Bank Loan upto 80%, Near Gurur Bus Stop, Ramabainagar, Mysore. DTCP approved (Corporation limits) 1.5 kms from J P Nagar Ring Road.
8660105902

HOUSE FOR RENT
30x40 First & 40x60 Duplex at Dattagalli.
40x60 First Floor at Kuvempunagar.
30x40 Duplex House Sale at Srirampura.
9663136318

ROY'S MAHAL
2BHK & 3BHK FLATS AVAILABLE FOR RENT
Ph : 8217052668 / 8494908022

ಸುವರ್ಣಯಾತ್ರ
* 3 ದಿನಗಳ ಪುರಿ ಭುವನೇಶ್ವರ ಪ್ರವಾಸ 27–10–22.
* 6 ದಿನಗಳ 9 ನವಗ್ರಹ ಹಾಗೂ ತಮಿಳುನಾಡು 27–10–22.
* 7 ದಿನಗಳ ಕಾಶಿ ಪ್ರವಾಸ 11–11–22
* 3 ದಿನಗಳ ಉಜ್ಜಯಿನಿ ಮಹಾಕಾಳೇಶ್ವರ ದರ್ಶನ 29–10–22

9008381022 / 9019462508

ಬೇಕಾಗಿದ್ದಾರೆ SUNBIZ
ಕರ್ನಾಟಕದಾದ್ಯಂತ ಬ್ಯಾಂಕ್ ಪ್ರಕ್ರಿಯೆಗಾಗಿ ನಾವು ಟೆಲಿಕಾಲರ್ ಮತ್ತು ಫೀಲ್ಡ್ ಎಕ್ಸಿಕ್ಯೂಟೀವ್ ಅಭ್ಯರ್ಥಿಯನ್ನು ತುರ್ತಾಗಿ ನೇಮಿಸಿಕೊಳ್ಳುತ್ತಿದ್ದೇವೆ. (ಫೀಲ್ಡ್ ಎಕ್ಸಿಕ್ಯೂಟಿವ್ 2 ವೀಲರ್ ಹೊಂದಿರಬೇಕು). ಫ್ರೆಶರ್ ಮತ್ತು ಅನುಭವಿ ಇಬ್ಬರಿಗೂ ಸ್ವಾಗತ. ಆಕರ್ಷಕ ಪ್ರೋತ್ಸಾಹ ಧನವನ್ನು ಗಳಿಸಲು ಮತ್ತು ಕಲಿಯಲು ನಮ್ಮ ತಂಡಕ್ಕೆ ಸೇರಿಕೊಳ್ಳಿ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ. ದೀಕ್ಷಿತ:
(HR)9513935123 / 9513935117

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳು, ಮೇಟಗಳ್ಳಿ ಮತ್ತು ಯಾದವಗಿರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು, ಸಂಬಳ: 15,500 + W/o (8hrs) ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು
9880727819
9620777819

ವಾಹನಗಳು ಬೇಕಾಗಿದೆ
ಕಂಪನಿಗಳಿಗೆ ಮೆಟೀರಿಯಲ್ ಸರಬರಾಜು ಮಾಡಲು ಹೊಸ ಬೊಲೆರೊ ಪಿಕ್ ಅಫ್ ವಾಹನಗಳು ಕಿ.ಲೋ ಮೀಟರ್ ಆಧಾರದಲ್ಲಿ ಬಾಡಿಗೆಗೆ ಬೇಕಾಗಿದೆ. ಸಂಪರ್ಕಿಸಿ: ಹಾಸನ
8555874337

ಆದಿ ಕರ್ನಾಟಕ (SC) ವಧು – ವರರ ಮಾಹಿತಿ ಕೇಂದ್ರ
BA, B.Sc, B.Com, MA, M.Sc, MBA, MBBS, Engineers, Ph.D, B.Ed, M.Ed)
ವಿವಾಹ ನೋಂದಣಿಗೆ ಕರೆ ಮಾಡಿ
9164743059

EXCHANGE OFFER
From ORRICT FACTORY SALES
SHREE SIDDAGANGA FURNITURES
Exchange your old Sofa to Brand New Rosewood and Leather Luxury Sofa and your old Sofa are repaired here. Siddartha Layout, Near Sangeetha Corner, Near Devegowda Circle, Mysuru.
9380775646 / 8217582103

Join ASFT Fashion Design Courses
* Certification Course
* Diploma Course
* Advance Diploma Course

Alpha School of Fashion Technology & Interior Design
AT: SRIRAMPURA, GOKULAM, UDAYAGIRI, MYSORE
Mob: 7829937469, 9901803394

ಮನೆ ಮಾರಾಟಕ್ಕಿದೆ
ಮೈಸೂರು ನಗರ, ಶ್ರೀರಾಂಪುರ, 2ನೇ ಹಂತ, ಕಂದಾಯನಗರ, ರಿಂಗ್ ರಸ್ತೆಯ ಪಕ್ಕದಲ್ಲಿ, ಉತ್ತರ ದಿಕ್ಕು, ಪೂರ್ವ ಬಾಗಿಲಿನ 3 ಅಂತಸ್ತಿನ 30x40 (G/F, F/F, S/F, T/F) ಮನೆ ಸುಮಾರು 42,000 ತಿಂಗಳಿಗೆ ಬಾಡಿಗೆ ಬರುವಂತಹ ಎಲ್ಲಾ ಸುಸಜ್ಜಿತ ಸೌಲಭ್ಯಗಳುಳ್ಳ ಮನೆ ಮಾರಾಟಕ್ಕಿದೆ. ಬೆಲೆ 1.75 Cr. (Slightly Negotiable). ಹೆಚ್ಚಿನ ವಿವರಗಳಿಗೆ ಮತ್ತು ವೀಕ್ಷಿಸಲು ಕರೆ ಮಾಡಿ
7996504996

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Aniketana Road, kuvempunagar, Mysuru
MYSURU 9611028523 MANGALORE 9343142258

MAX SOLAR FACTORY
Solar UPS
Solar Offgrid Systems
Solar Street Lights
Solar Water Heaters
Expert in Large Solar Projects
9535608456

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾದೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾದೆ, ಆರೋಗ್ಯ ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಬೇಕಾಗಿದ್ದಾರೆ
ನಾರಾಯಣ ಹೃದಯಾಲಯ ಆಸ್ಪತ್ರೆಯ ಆವರಣದ ಕ್ಯಾಂಟೀನ್‌ನಲ್ಲಿ ಕೆಲಸ ಮಾಡಲು, ಇಂಗ್ಲೀಷ್ ಮತ್ತು ಕನ್ನಡ ಓದಲು, ಬರೆಯಲು SSLC ಅಥವಾ PUC ಪಾಸ್ ಅಥವಾ ಫೇಲ್ ಆದ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಮತ್ತು Cook, ದೋಸೆಭಟ್ಟರು, ಅಡುಗೆ ಸಹಾಯಕರು ಬೇಕಾಗಿದ್ದಾರೆ. ಹಾಗೂ ಪ್ರತಿ ಶನಿವಾರ Interview (10 to 1pm) ಇರುತ್ತದೆ. ಇಎಸ್‌ಐ ಮತ್ತು ಇಎಸ್‌ಐ ಹಾಗೂ ಊಟ-ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ವಿಳಾಸ: Narayana Hrudayalaya, Multi Speciality Hospital, CAH/1, 3rd Phase, Devanur, 2nd Stage, R.S.-Naidu Nagar, Mysore.
9591159919 / 8884923636

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರಿ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾದೆ, ಆರೋಗ್ಯ, ಭೂಮಿ, ಕೋರ್ಟ್, ವ್ಯಾಪಾರ, ಸಂಬಂಧ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸುಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಸೋಲಾರ್ ವಾಟರ್ ಹೀಟರ್ Solar Water Heater
ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರ ನಾಲ್ವರ ದೈವ ಚೌಡ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿವಾಹ, ಕೋರ್ಟ್ ಕೇಸ್, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟ್ಯಾಂಡ್ ಹಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ಸದರಿನ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳೆಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

HI-TECH CHICKEN CENTER BUSINESS FOR SALE
at Hootagally, Vijayanagar 4th Stage, 3rd Phase. Contact:
7795268675

ಶ್ರೀ ಮಹಾಕಾಳಿ ಜ್ಯೋತಿಷ್ಯರು
ನಿಮ್ಮೆಲ್ಲಾ ಸಮಸ್ಯೆಗಳಿಗೆ ಕಾಳಿದೇವಿಯ ಸರ್ವಸಿದ್ಧಿ ಪೂಜಾ ಶಕ್ತಿಯಿಂದ ಶಾಶ್ವತ ಪರಿಹಾರ, ಮದುವೆ ಸಮಸ್ಯೆ, ಹಣದ ಸಮಸ್ಯೆ, ಪ್ರೀತಿಯ ಸಮಸ್ಯೆ, ಉದ್ಯೋಗದ ಸಮಸ್ಯೆ, ಗಂಡ – ಹೆಂಡತಿ ಕಲಹ.
ಪ್ರಧಾನ ಜ್ಯೋತಿಷಿ ಹನುಮಂತರಾವ್
9686487402

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುವ ಯುವಕ / ಯುವತಿಯರಿಗೆ ವಿದ್ಯಾರ್ಥಿಗಳಿಗೆ ಗೃಹಿಣಿಯರಿಗೆ ಮನೆಯಲ್ಲಿಯೇ ಕುಳಿತು ಫಾರಂನಲ್ಲಿ ಅಂಕಿ ತುಂಬುವ ಹಾಗೂ ಬುಕ್ ಬರೆಯುವ ಕೆಲಸ ತಿಂಗಳಿಗೆ 16,000/– ರಿಂದ 18,000/– ಸಂಪಾದಿಸಿ. (ಕೊರಿಯರ್ ಸೌಲಭ್ಯವಿದೆ)
8747978990
8123797899

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
3/11 : ಕಾಶಿ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್, ಅಯೋಧ್ಯೆ. 4/11: ಗುಜರಾತ್, ಅಕ್ಷರಧಾಮ, ವೈಷ್ಣೋ ದೇವಿ, ದ್ವಾರಕ, ಬೇಟ್ ದ್ವಾರಕ, ನಾಗೇಶ್ವರ್, ಜ್ಯೋತಿರ್ಲಿಂಗ, ಸೋಮನಾಥ್, ನಿಷ್ಕಳಂಕ್ ಮಹದೇವ, ಸರ್ದಾರ್ ವಲ್ಲಭ ಭಾಯ್‌ಪಟೇಲ್ ಸ್ಟ್ಯಾಚ್ಯು. 21/11 : ಪುರಿ ಜಗನ್ನಾಥ್, ಕೋಣಾರ್ಕ್ ಸೂರ್ಯ ದೇವಸ್ಥಾನ, ಚಂದ್ರಭಾಗ ಬೀಚ್. 24/10: ಎಂಪಿ 2 ಜ್ಯೋತಿರ್ಲಿಂಗ, ಉಜ್ಜಯಿನಿ, ಮಹಾ ಕಾಳೇಶ್ವರ, ಓಂಕಾರೇಶ್ವರ ಜ್ಯೋತಿರ್ಲಿಂಗ. ಸಂಪರ್ಕಿಸಿ:
9591017782, 9964527782

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ವರ ಬೇಕಾಗಿದೆ
26 ವರ್ಷದ 5 ಅಡಿ ಎತ್ತರದ ಸ್ಮಾರ್ತ ಬ್ರಾಹ್ಮಣ ಇಂಜಿನಿಯರ್ ಸುಂದರ ಕನ್ಯೆಗೆ, ಸುಂದರ, ಶ್ರೀಮಂತ 31 ವರ್ಷದೊಳಗಿನ, ಸ್ವಂತ ಮನೆ ಇರುವ, ಒಳ್ಳೆಯ ಆದಾಯ ವಿರುವ ವಿದ್ಯಾವಂತ ವರ ಬೇಕಾಗಿದೆ.
ಸಂಪರ್ಕಿಸಿ:
Mob: 9880144140

WANTED
Electrical Engineer
Qualification: Diploma / BE in Electrical Engineering (Female only).
Min. 2-3 years experience in Electrical field.
Contact: Mob: 7760135606
Call between 10 am to 6 pm
Mail your CV to: acpltd123@gmail.com

ತಕ್ಷಣ ಬೇಕಾಗಿದ್ದಾರೆ
ವಯಸ್ಸಾದವರನ್ನು ರೋಗಿಗಳನ್ನು ನೋಡಿಕೊಳ್ಳಲು ಅನುಭವವಿರುವ / ಇಲ್ಲದಿರುವ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಮಾಡುವವರು ತಕ್ಷಣ ಸಂಪರ್ಕಿಸಿ. ಊಟ, ವಸತಿಯೊಂದಿಗೆ ಸಂಬಳ: 12,000–18,000/–. ಅಗ್ರಹಾರ
9035113222
9739292222

ಬೇಕಾಗಿದ್ದಾರೆ
ಹೆಬ್ಬಾಳು ಕೈಗಾರಿಕ ಪ್ರದೇಶಗಳಲ್ಲಿ ಕೆಲಸ ಮಾಡಲು ಅಭ್ಯರ್ಥಿಗಳು ಬೇಕಾಗಿದ್ದಾರೆ.
1) B.Sc (Computer Science) Male & Female)
2) BE (Mechanical)Male
3) Diploma Mechanical (Male)
4) Electrical Engineer (Male)

ಅನುಭವಕ್ಕೆ ಅನುಗುಣವಾಗಿ ವೇತನವಿರುತ್ತದೆ.
8951869646 / 9902645646

ಫಾರ್ಮ್‌ಹೌಸ್ ಬೇಕಾಗಿದೆ
ಕೊಲಂಬಿಯ ಏಷ್ಯಾ ಮತ್ತು ಬನ್ನೂರು ರಿಂಗ್ ರೋಡ್ (ಮಹದೇವಪುರ ರೋಡ್ 5 ಕಿ.ಮೀ ನಿಂದ 10 ಕಿ.ಮೀ ಒಳಗೆ) ಸಮೀಪವಿರುವ ಎಲ್ಲಾ ವ್ಯವಸ್ಥೆಯುಳ್ಳ ಫಾರ್ಮ್‌ಹೌಸ್ ಬೇಕಾಗಿದೆ. ಸಂಪರ್ಕಿಸಿ:
Mob: 9945752592

MOBILE ರಿಪೇರಿ ಟ್ರೈನಿಂಗ್
18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. PG ವ್ಯವಸ್ಥೆಯು ಇರುತ್ತದೆ. ಕೂಡಲೇ ಸಂಪರ್ಕಿಸಿ:
SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.
Mob.: 9986926101

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

HOUSE FOR LEASE
2 Bedroom renovated House with modern amenities ground floor with one attached bathroom available for Lease Only. Near RTTC Compound, Kamakshi Hospital, Saraswathipuram, Mysore Expected 15 Lacs, Brokers Excuse. Contact:
9731748108 / 9845484733

ಮನೆ ಮಾರಾಟಕ್ಕಿದೆ
1,400 ಸ್ಕ್ವೇರ್ ಫೀಟ್ ಸೈಟ್‌ನಲ್ಲಿ ಇಟಾಲಿಯನ್ ಕಿಚನ್, ಕಾರ್‌ಪಾರ್ಕಿಂಗ್, ಗ್ರಾನೈಟ್ ಹಾಕಿದ ವಾಸ್ತು ಪ್ರಕಾರದ ಡುಪ್ಲೆಕ್ಸ್ ಮನೆ (11ಬಿ, ಕನ್ವರ್ಷನ್ ಆಗಿದೆ. ಹೂಟಗಳ್ಳಿ ನಗರಸಭೆ) ಶ್ರೀ ಸುಬ್ರಹ್ಮಣ್ಯನಗರ, ಹಿನಕಲ್ ಹತ್ತಿರ ಮಾರಾಟಕ್ಕಿದೆ.
9449992940 / 9448390740

HOUSE FOR SALE
2& 3 BHK New Flat, East Facing, 1100 & 1650 Sq.Ft, 2nd Floor, Fully Furnished with Lift, Jayalakshmipuram, VV Mohala, Mysuru
33x40, New 3 BHK Duplex, W/F Site & N/F Door, Vijayanagar 4th Stage, RMP, Mysuru (Brokers Excuse)
8660105902

COMMERCIAL SPACE AVAILABLE FOR RENT
to Enterprising Doctors to start their own Poly Clinic & Hospital/ Lab/ Pharmacy in Dattagalli 3rd Stage, Mysuru. Lift available. Close to ring Roads. Space available: Ground Floor: 1300 Sq.ft., First Floor : 1550 Sq.Ft. Contact:
6360463976 / 6360477523

ಹೊಸ ಮನೆ ಮಾರಾಟಕ್ಕಿದೆ
1400 ಅಡಿ ಹಾಗೂ ಸೈಟುಗಳು ಮಾರಾಟಕ್ಕಿವೆ. ಜಡ್ಜ್ ಕ್ವಾಟ್ರಸ್ ಹಿಂಭಾಗ, ಶ್ರೀರಾಂಪುರ ರಿಂಗ್ ರೋಡ್, ಮೈಸೂರು.
8050345574

WANTED
Accountant Post
3-4 year Experience
Min. Qualification (B.Com, BBM or MBA)
Contact:
9448460668 / 9448047792

CHANGE OF NAME
I, B.Mohammed Mudassir, residing at #114, LIG-I, 11th Cross, 1st Stage, Kalyanagiri, Mysore-19, Karnataka, have changed my name from Baba Jan Mohamed Mudasir, to B.Mohammed Mudassir on my own free will Sworn in before Notary C.R.Seetharam Mysore, Vide affidavit Date: 14-10-2022.
Sd/- B.Mohammed Mudassir

WANTED
Purchase Asst. - Male
Accounts Asst. - Female
ELE, Panel Board Wiremen. Contact:
7259016509 / 7259016512

RENT FOR OFFICE USE
900 Sq.ft. 1st Floor Office use, Near Orchids School, Ramakrishnanagar
9844775166

ಬೇಕಾಗಿದ್ದಾರೆ
ಕನಿಷ್ಠ SSLC ತರಗತಿ ಓದಿರುವ ಸುಮಾರು 25–30 ವರ್ಷ ವಯಸ್ಸುಳ್ಳ ರಾಸಾಯನಿಕ ದ್ರವಣ ಸಿಂಪಡಿಸಲು (Pest Control Service) ಅಭ್ಯರ್ಥಿಗಳು ಬೇಕಾಗಿದ್ದಾರೆ. ತಿಂಗಳಿಗೆ ರೂ.12,000/– ಹಾಗೂ ಇತರೆ ಭತ್ಯೆಗಳಿರುತ್ತದೆ. ಇಚ್ಛಿಸುವವರು ಕರೆ ಮಾಡಿ.
9844404232

ಕ್ರೈಸ್ತ ವಧು –ವರರ ವೇದಿಕೆ
ಎಲ್ಲಾ ಕರ್ನಾಟಕ ಕ್ರೈಸ್ತ ಸಮುದಾಯದ ವಧು –ವರರ ಅನ್ವೇಷಣೆ ಇಂದು 15/10/2022 ಸಂಜೆ 5 ಗಂಟೆಗೆ ನಡೆಯಲಿದೆ. ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಈ ಕಾರ್ಯಕ್ರಮದ ಪ್ರಯೋಜನ ಪಡೆದುಕೊಳ್ಳಿ.
9880099929 / 9844446469

ವಾಣಿಜ್ಯ ಮಳಿಗೆ ಮಾರಾಟಕ್ಕಿದೆ
1) 10x30 ಅಡಿಗಳು
2) 10x15 ಅಡಿಗಳು

ರಾಮಕೃಷ್ಣನಗರ 'ಐ' ಬ್ಲಾಕ್, ಮೈಸೂರು. ಸಂಪರ್ಕಿಸಿ.
9483358399

SNS ENTERPRISES
ಉಚಿತ ತರಬೇತಿ, ನಮ್ಮಲ್ಲಿ 3 ತಿಂಗಳ ಕಾಲ ಉಚಿತವಾಗಿ ಕಂಪ್ಯೂಟರ್ ತರಬೇತಿಯನ್ನು ಹೇಳಿಕೊಡಲಾಗುತ್ತದೆ. ಸ್ಥಳ: ಜಯನಗರ & ಸರಸ್ವತಿಪುರಂ
9880604416 / 9740301234

CHANGE OF NAME
I, Baba Jan, residing at #114, LIG -I, 5th Cross, 1st Stage, Kalyanagiri, Mysore - 19, Karnataka, have changed my name from Babu Khader Mohaddin to Baba Jan on my own free will, sworn in before Notary C.R.Seetharam, Mysore. vide affidavit Date: 14-10-2022.
Sd/- Baba Jan

ಬೇಕಾಗಿದ್ದಾರೆ
ಮನೆಯಲ್ಲಿ ಅಡುಗೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. (ಸಸ್ಯಹಾರಿ) ಗಂಗೋತ್ರಿ ಲೇಔಟ್, ಮೈಸೂರು
9945040509

30x40 ಸೈಟು @ Rs. 15 ಲಕ್ಷ
MUDA APPROVED LAYOUT
ತಕ್ಷಣ ನೋಂದಣಿ / ಬ್ಯಾಂಕ್ ಲೋನ್ ಲಭ್ಯ, ಚಾಮುಂಡಿ ಬೆಟ್ಟದ ಹಿಂಭಾಗ, ಲಾಲ್‌ಬಹದ್ದೂರ್ ಶಾಸ್ತ್ರಿ ನಗರದ ನಂತರ
9538583377

ಸೈಟ್‌ಗಳು ಮಾರಾಟಕ್ಕಿದೆ
ಕೆ.ಆರ್.ಪೇಟೆಯ ಜಯನಗರದಲ್ಲಿ ಎರಡು ಕಾರ್ನರ್ ಸೈಟ್ ಮಾರಾಟಕ್ಕಿದೆ ಹಾಗೂ ಮೈಸೂರು ನಗರದ ಮುಡಾ ವ್ಯಾಪ್ತಿಯ ಮನೆ ಹಾಗೂ ಕಮರ್ಷಿಯಲ್ ಆಸ್ತಿಗೆ ಖಾಸಗಿ ಸಾಲ ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿ. ಶಕ್ತಿ ಪ್ರಾಪರ್ಟೀಸ್
9731135888

ಪ್ರಮಾಣ ಪತ್ರ
ಚಿಕ್ಕಮೂಗ S/o ಮೂಗಯ್ಯರವರ ಮಗನಾದ ನಾನು ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಮಹದೇವನಗರ ಗ್ರಾಮದಲ್ಲಿ ವಾಸವಾಗಿರುತ್ತೇನೆ. ನನ್ನ ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಖಾತೆಯಲ್ಲಿ ಚಿಕ್ಕ ಮೂಗ ಎಂದು ಇರುತ್ತದೆ. LIC ಯ ಪಾಲಿಸಿಯಲ್ಲಿ (P.No.723555915) ಸ್ವಾಮಿ A/s ಮೂಗ ಎಂದು ಇರುತ್ತದೆ. ಚಿಕ್ಕಮೂಗ ಮತ್ತು ಸ್ವಾಮಿ A/s ಮೂಗ ಈ ಮೂರು ಹೆಸರುಗಳು ನನ್ನದೆ ಆಗಿದ್ದು ಈ ಮೂರು ಹೆಸರಿನ ದಾಖಲಾತಿಗಳು ನನ್ನದೆ ಆಗಿರುತ್ತದೆ ಎಂದು ದಿನಾಂಕ: 11/10/22 ರಂದು ಶ್ರೀನಿವಾಸ.ವಿ ನೋಟರಿ ಇವರ ಸಮ್ಮುಖದಲ್ಲಿ ದೃಢೀಕರಿಸಿದ್ದೇನೆ. ಸಹಿ/– ಚಿಕ್ಕಮೂಗ

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

ಜಮೀನು ಮಾರಾಟಕ್ಕಿದೆ
5 ಎಕರೆ, ಕೆಂಪು ಮಣ್ಣು, ನೀರಾವರಿ ಸೌಲಭ್ಯವಿದೆ. ತೋಟ ಮಾಡಲು ಯೋಗ್ಯವಾದ ಜಮೀನು, ಥಾರ್ ರಸ್ತೆಗೆ ಇದೆ. ಮೈಸೂರಿನಿಂದ 30 ಕಿ.ಮೀ. ಒಂದು ಎಕರೆಗೆ 35 ಲಕ್ಷ ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
7022360170

SITE FOR SALE
30x40 S/F, W/F Aparna layout, Srirampura Ring Road, Gayatri Layout, 30x40 W/F Bramins Layout 30x40 E/F
9886481265 / 7996173613

SITE FOR SALE
40x60 East Face Site for Sale, Ramakrishnanagara, 'I' Block, Near Orchid School
9008267070

BOYS & GIRLS
ಅಗ್ರಹಾರ ಹತ್ತಿರ Door Showroom ನಲ್ಲಿ ಕೆಲಸ ಮಾಡಲು Sales Boys & Girls ಬೇಕಾಗಿದ್ದಾರೆ.
9886640503

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ. ಡಾ.ಗುರೂಜಿ
6361740552
www.bhandhana.com

TEACHERS REQUIRED
Qualified & Experienced Teachers - PU / B.A, D.Ed - Post 2
Computer - Any Degree with Computer Knowledge - Post 1 (Proficiency in English is a must) Sri Chayadevi School, Rajendranagar, Mysore - 07. For Enquire Call:
0821-2496922 / 9353873034
9964612301
E-mail: scvt8055@gmail.com

ಸುವರ್ಣಾವಕಾಶ
ನಿವೃತ್ತಿ, ಸ್ವಯಂನಿವೃತ್ತಿ, ಗೃಹಿಣಿಯರಿಗೆ, ಸ್ವಂತ ಉದ್ಯಮದಾರರಿಗೆ, ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part Time - Full Time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. Fixed Salary / PF - ESI, Age :- above 30 year's
9008799156


ನಿವೃತ್ತ ನೌಕರರಿಗೆ ಉದ್ಯೋಗಾವಕಾಶದ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benefit (1) Fixed Salary + PF +ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. Age above 35 years. ಬೇಕಾಗುವ ದಾಖಲಾತಿಗಳು: 1) ಫೋಟೋ, 2) ಪಾನ್‌ಕಾರ್ಡ್, 3) ಆಧಾರ್‌ಕಾರ್ಡ್, 4) ವಿದ್ಯಾರ್ಹತೆ, 5) ಬ್ಯಾಂಕ್ ಪಾಸ್‌ಬುಕ್. ಸ್ಥಳ: ಮೌರ್ಯ ರೆಸಿಡೆನ್ಸಿ, ಹರ್ಷ ರಸ್ತೆ, ಮೈಸೂರು. ದಿನಾಂಕ: 18–10–2022, ಸಮಯ ಬೆಳಿಗ್ಗೆ 11 ಗಂಟೆಗೆ Followed by Lunch
9449068132 / 8073004518

ಹೊಸ ಮನೆ ಮಾರಾಟಕ್ಕಿದೆ
20x30 E/F Duplex, 3 Bedroom, Dattagalli, University Layout, 1st Stage, Mysore.
9886481265
8310972636

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಬೆಳ್ಳಿರಥದ ಮಾದರಿ



ಶ್ರೀಕಂಠೇಶ್ವರನ ಬೆಳ್ಳಿರಥ ನಿರ್ಮಾಣಕ್ಕೆ ಚಾಲನೆ

ಕೊಟ್ಟ ಮಾತಿನಂತೆ ಬೆಳ್ಳಿರಥ ನಿರ್ಮಾಣ: ಶಾಸಕ ಬಿ.ಹರ್ಷವರ್ಧನ್



ನಂಜನಗೂಡು, ಅ.14– ಭಕ್ತರ ಬಹುದಿನಗಳ ಬೇಡಿಕೆಯಾಗಿದ್ದ ಶ್ರೀಕಂಠೇಶ್ವರ ದೇವಾಲಯದ ಬೆಳ್ಳಿರಥ ನಿರ್ಮಾಣ ಕಾಮಗಾರಿಗೆ ಶಾಸಕ ಬಿ.ಹರ್ಷವರ್ಧನ್ ಶುಕ್ರವಾರ ಚಾಲನೆ ನೀಡಿದರು.

ಬೆಳ್ಳಿರಥ ನಿರ್ಮಾಣಕ್ಕೆ ದೇವಾಲಯದ ಆವರಣದಲ್ಲಿ ಆಗಮಿಕರಾದ ನಾಗಚಂದ್ರ ದೀಕ್ಷಿತ್ ನೇತೃತ್ವದಲ್ಲಿ ಗಣಪತಿ ಹೋಮ, ವಾಸ್ತು ಹೋಮ ನಡೆಸುವ ಮೂಲಕ ಚಾಲನೆ ನೀಡಲಾಯಿತು. ನಂತರ ಮಾತನಾಡಿದ ಶಾಸಕರು, ದೇವಾಲಯದ ಹುಂಡಿ ಹಣದಲ್ಲಿ ಶ್ರೀಕಂಠೇಶ್ವರಸ್ವಾಮಿಗೆ ಬೆಳ್ಳಿರಥ ಮತ್ತು ಭಕ್ತರ ಅನುಕೂಲಕ್ಕಾಗಿ 75 ಕೊಠಡಿಗಳ ಅಥಿತಿಗೃಹ ನಿರ್ಮಾಣ ಕಾಮಗಾರಿಗೆ ಅನುಮತಿ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. ನಮ್ಮ ಮನವಿ ಪುರಸ್ಕರಿಸಿದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪರವರು ಬೆಳ್ಳಿರಥ ಮತ್ತು ಅತಿಥಿಗೃಹ ನಿರ್ಮಾಣ ಕಾಮಗಾರಿಗೆ ಮಂಜೂರಾತಿ ನೀಡಿದ್ದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಚಾಲನೆ ಕೊಡುವ ಸಲುವಾಗಿ ಕಾಮಗಾರಿ ವಿಳಂಬವಾಯಿತು. ಈಗಲೂ ಸಹ ಕೆಲಸದ ಒತ್ತಡದಿಂದ ಮುಖ್ಯಮಂತ್ರಿಗಳು 2 ತಿಂಗಳು ತಡವಾಗುವುದಾಗಿ ತಿಳಿಸಿದ್ದಾರೆ. ನಾನು ದೇವಾಲಯದ ಬೆಳ್ಳಿರಥ ನಿರ್ಮಾಣ ಮಾಡಿಯೇ ಚುನಾವಣೆಗೆ ಹೋಗುವುದಾಗಿ ಮಾತು ನೀಡಿದ್ದೆ. ಕೊಟ್ಟ ಮಾತಿನಂತೆ ಬೆಳ್ಳಿರಥ ನಿರ್ಮಾಣ ತಡವಾಗುವುದು ಬೇಡ ಎಂದು ನಾನೇ ಚಾಲನೆ ನೀಡಿ ಕಾರ್ಯಗತಗೊಳಿಸಿದ್ದೇನೆ ಎಂದರು.

ರಥ ನಿರ್ಮಾಣದ ಶಿಲ್ಪಿ ಗಂಗಾಧರ ಗಜಾನನ ಆಚಾರಿ ಮಾತನಾಡಿ, ಈ ಹಿಂದೆ ರಂಗಾಪುರ, ಹಾವೇರಿಯಲ್ಲೂ 19 ಅಡಿ ಎತ್ತರದ ಬೆಳ್ಳಿರಥ ನಿರ್ಮಾಣ ಮಾಡಿದ್ದೇವೆ. ಪ್ರಸ್ತುತ ಶ್ರೀಕಂಠೇಶ್ವರ ದೇವಾಲಯದ ರಥ ನಿರ್ಮಾಣ ಕಾಮಗಾರಿಗೆ ಮುಂದಾಗಿದ್ದೇವೆ. ನಮ್ಮ ತಂಡದಲ್ಲಿ 16 ಜನ ಮರದ ಕೆತ್ತನೆ ಕೆಲಸಗಾರರಿದ್ದು 10 ಜನ ಬೆಳ್ಳಿ ಕೆಲಸಗಾರರಿದ್ದಾರೆ. ಕೆತ್ತನೆ ಕೆಲಸಕ್ಕೆ ತೇಗದ ಮರವನ್ನು ಉಪಯೋಗಿಸಲಾಗುವುದು. ಚೌಕಟ್ಟು, ಅಡ್ಡಪಟ್ಟಿಗಳಿಗೆ ಹೊನ್ನೆಮರ, ಚಕ್ರಗಳಿಗೆ ಹೆಬ್ಬಲಸಿನ ಮರವನ್ನು ಉಪಯೋಗಿಸಿಕೊಂಡು ಬೆಳ್ಳಿರಥ ನಿರ್ಮಾಣ ಮಾಡಲಾಗುವುದು ಎಂದರು. ಆಗಮಿಕರಾದ ನಾಗಚಂದ್ರ ದೀಕ್ಷಿತ್ ಮಾತನಾಡಿ, ಬೆಳ್ಳಿರಥ ನಿರ್ಮಾಣ ಕಾಮಗಾರಿ ನಿರ್ವಿಘ್ನವಾಗಿ ಸಾಗಲಿ ಎಂಬ ಉದ್ದೇಶದಿಂದ ಗಣಪತಿ ಹೋಮ, ಬೆಳ್ಳಿ, ಮತ್ತು ಮರ ಶುದ್ಧಿಗಾಗಿ ವಾಸ್ತುಹೋಮ ನೆರವೇರಿಸಲಾಗಿದೆ ಎಂದರು.

ಇದೇ ವೇಳೆ ನಗರಸಭಾಧ್ಯಕ್ಷ ಹೆಚ್.ಎಸ್. ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗನಾಯಕ, ಎಸ್.ಎಂ.ಕೆಂಪಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ತಾಪಂ ಮಾಜಿ ಸದಸ್ಯರಾದ ಬಿ.ಎಸ್. ರಾಮು, ಶಿವಣ್ಣ, ಹುಲ್ಲಹಳ್ಳಿ ಶಿವಣ್ಣ, ನಗರಸಭಾ ಸದಸ್ಯರಾದ ಮಹದೇವಪ್ರಸಾದ್, ಸಿದ್ದರಾಜು, ಮುಖಂಡರಾದ ಪುಟ್ಟಸ್ವಾಮಿ, ಅನಂತ್, ಕುಮಾರ್, ವೆಂಕಟೇಶ್, ರಾಜು, ಶ್ರೀಕಂಠೇಶ್ವರ ದೇವಾಲಯದ ಎಇಓ ವೆಂಕಟೇಶ್ ಪ್ರಸಾದ್ ಸೇರಿದಂತೆ ಹಲವರಿದ್ದರು.

297 ಕೆಜಿ ಬೆಳ್ಳಿ ಬಳಕೆ, 8 ತಿಂಗಳಲ್ಲಿ ಕಾಮಗಾರಿ ಪೂರ್ಣ

ಬೆಳ್ಳಿರಥ ನಿರ್ಮಾಣಕ್ಕೆ ದೇವಾಲಯಕ್ಕೆ ಭಕ್ತರು ನೀಡಿದ್ದ ಬೆಳ್ಳಿ ಬಳಸದೆ ಶುದ್ಧ ಬೆಳ್ಳಿಯನ್ನು ಜಿಲ್ಲಾಧಿಕಾರಿಗಳ ಮೂಲಕ ಬ್ಯಾಂಕ್‌ನಲ್ಲಿ ಖರೀದಿಸಲಾಗುತ್ತದೆ. ಸುಮಾರು 2 ಕೋಟಿ 90 ಲಕ್ಷ ವೆಚ್ಚದಲ್ಲಿ ಬೆಳ್ಳಿರಥ ನಿರ್ಮಾಣ ಮಾಡಲಾಗುತ್ತಿದ್ದು, 297 ಕೆಜಿ ಬೆಳ್ಳಿ ಬಳಕೆ ಮಾಡಲಾಗುವುದು. 16 ಅಡಿ ಎತ್ತರ 6 ಅಡಿ ಸುತ್ತಳತೆ ಒಳಗೊಂಡ ಚೌಕಾಕಾರದ ಅಷ್ಟ ಮೂಲೆ ಪುಷ್ಪರಥ ರಚನೆಯಾಗಲಿದೆ. ಮುರುಡೇಶ್ವರ ಮೂಲದ ಗಂಗಾಧರ ಗಜಾನನ ಆಚಾರ್ ರಥದ ಕೆತ್ತನೆ ಕಾರ್ಯ ಮಾಡಲಿದ್ದು, ತಿಪಟೂರು ಮೂಲದ ಕೃಷ್ಣಮೂರ್ತಿ ಬೆಳ್ಳಿ ಕೆಲಸ ಮಾಡಲಿದ್ದಾರೆ. ಮುಂದಿನ 8 ತಿಂಗಳ ಒಳಗೆ ಕಾಮಗಾರಿ ಪೂರ್ಣಗೊಳ್ಳಲಿದ್ದು, ಆ ಮೂಲಕ ಭಕ್ತರ ಬಹುದಿನದ ಕನಸು ನನಸಾಗಲಿದೆ. ಜೊತೆಗೆ ಶೀಘ್ರ 75 ಕೊಠಡಿಗಳ ಅಥಿತಿ ಗೃಹ ನಿರ್ಮಾಣ ಕಾಮಗಾರಿಯನ್ನು ಮುಖ್ಯಮಂತ್ರಿಗಳಿಂದ ಚಾಲನೆ ಕೊಡಿಸಲಾಗುವುದು ಎಂದು ಶಾಸಕ ಹರ್ಷವರ್ಧನ್ ಮಾಹಿತಿ ನೀಡಿದರು.

ಕಾಡಾನೆ ದಾಳಿ: ಭತ್ತದ ಬೆಳೆ ನಾಶ



ಹನಗೋಡು, ಅ.14– ಕಾಡಾನೆಗಳ ದಾಳಿಗೆ ಭತ್ತದ ಬೆಳೆ ನಾಶವಾಗಿರುವ ಘಟನೆ ಹುಣಸೂರು ವನ್ಯಜೀವಿ ವಲಯ ವ್ಯಾಪ್ತಿಯ ಕಡೆಮನುಗನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿಗಳಾದ ಅಮಾಸೇಗೌಡ, ಬೋರೇಗೌಡ, ಶಿವು, ರಮೇಶ್ ಅವರು ತಮ್ಮ ಗದ್ದೆಯಲ್ಲಿ ಭತ್ತದ ನಾಟಿ ಮಾಡಿ ಉತ್ತಮ ಬೆಳೆಯ ನಿರೀಕ್ಷೆಯಲ್ಲಿದ್ದರು. ಆದರೆ ಗ್ರಾಮದ ಕಿಕ್ಕಿರಿಕಟ್ಟೆಯ ಕಲ್ಲುಗುಂಡಿ, ಆಲದಮರದ ಕಂಡಿಯ ಅರಣ್ಯ ಭಾಗದಿಂದ ರಾತ್ರಿ ವೇಳೆ ದಾಳಿ ಮಾಡಿರುವ ಕಾಡಾನೆಗಳು ಭತ್ತದ ಗದ್ದೆಗಳನ್ನು ತುಳಿದು ನಾಶಪಡಿಸಿವೆ.

ಸ್ಥಳಕ್ಕೆ ಹುಣಸೂರು ವನ್ಯಜೀವಿ ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಿಕ್ಕೇರಿಕಟ್ಟೆ ಬಳಿ ಕಾಡಾನೆ ತಡೆ ಬೇಲಿ ನಿರ್ಮಾಣ ಕಾಮಗಾರಿ ವಿಳಂಬವಾಗಿದ್ದು ಕೂಡಲೇ ಕಾಮಗಾರಿ ಪ್ರಾರಂಭಿಸಬೇಕು. ಬೆಳೆ ನಾಶವಾಗಿರುವ ರೈತರಿಗೆ ಸೂಕ್ತ ಪರಿಹಾರ ನೀಡಬೇಕು. ಆನೆ ಹಾವಳಿ ನಿಯಂತ್ರಿಸಲು ತಾತ್ಕಾಲಿಕವಾಗಿ ರಾತ್ರಿ ಕಾವಲು ಪಡೆ ನೇಮಿಸಬೇಕೆಂದು ನೊಂದ ರೈತರು ಆಗ್ರಹಿಸಿದ್ದಾರೆ.

ಸಂಘಟನಾ ಕಾರ್ಯದರ್ಶಿಯಾಗಿ ನೇಮಕ



ಹೆಚ್.ಡಿ. ಕೋಟೆ, ಅ.14– ಜೆಡಿಎಸ್ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಯಾಗಿ ಎನ್.ಟಿ.ಜವರೇಗೌಡ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷ ಎನ್. ನರಸಿಂಹಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

3.79 ಕೋಟಿ ವೆಚ್ಚದಲ್ಲಿ ಪ್ರಮುಖ ರಸ್ತೆಗಳ ಅಭಿವೃದ್ಧಿ



ತಿ.ನರಸೀಪುರ, ಅ.14– ನಗರೋತ್ಥಾನ ಯೋಜನೆ 4ನೇ ಹಂತದಲ್ಲಿ ಬಿಡುಗಡೆಯಾಗಿರುವ 3.79 ಕೋಟಿ ರೂ. ಅನುದಾನದಲ್ಲಿ ಪಟ್ಟಣದ ಪ್ರಮುಖ ರಸ್ತೆಗಳ ಅಭಿವೃದ್ಧಿಗೊಳಿಸಲಾಗುವುದು ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ಪಟ್ಟಣದ ನಂಜನಗೂಡು ಮುಖ್ಯರಸ್ತೆಯಿಂದ ಮಹದೇವ ಅವರ ಮನೆವರೆಗೆ 30 ಲಕ್ಷ ರೂ. ವೆಚ್ಚದಲ್ಲಿ ನಗರೋತ್ಥಾನ ಯೋಜನೆಯಡಿ ಅಭಿವೃದ್ಧಿ ಪಡಿಸಲಾಗುವ 200 ಮೀಟರ್ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ನಗರೋತ್ಥಾನ ಯೋಜನೆಯ ಉಳಿಕೆ ಅನುದಾನದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಈ ಹಿಂದೆ ಇದ್ದ ಸಣ್ಣ ಪುಟ್ಟ ಗೊಂದಲ ನಿವಾರಿಸಿಕೊಂಡು ಕಾಮಗಾರಿ ಮಾಡಲಾಗುತ್ತಿದೆ ಎಂದರು.

ನಗರೋತ್ಥಾನ ಯೋಜನೆ 4ನೇ ಹಂತದ ಅಭಿವೃದ್ಧಿ ಕಾಮಗಾರಿಗೆ ನಾಳೆ ಅಥವಾ ನಾಳಿದ್ದು ಟೆಂಡರ್ ಓಪನ್ ಆಗಲಿದ್ದು, ಅದರಲ್ಲಿ ಭಗವಾನ್ ಚಿತ್ರಮಂದಿರ ರಸ್ತೆ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ರಸ್ತೆ ಸೇರಿದಂತೆ ಬಾಕಿ ಇರುವ ಮುಖ್ಯರಸ್ತೆ ಗಳನ್ನು ಅಭಿವೃದ್ಧಿ ಪಡಿಸಲಾಗುತ್ತದೆ. ಪಟ್ಟಣದ ಅಭಿವೃದ್ಧಿಗೆ ಪುರಸಭಾಧ್ಯಕ್ಷರು, ಸದಸ್ಯರು ಹಾಗೂ ವರುಣಾ ಕ್ಷೇತ್ರದ ಶಾಸಕರು ಸಹಕಾರ ನೀಡಿದ್ದು ಪಕ್ಷಾತೀತ, ಜಾತ್ಯಾತೀತವಾಗಿ ಕೈಜೋಡಿಸಿದ್ದಾರೆ ಎಂದರು.

ಇದೇ ವೇಳೆ ಶಾಸಕರು ಪಿಎಲ್‌ಡಿ ಬ್ಯಾಂಕ್ ಪಕ್ಕ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕ ಲೋಕಾರ್ಪಣೆ ಮಾಡಿದರು.

ಪುರಸಭಾ ಸದಸ್ಯರಾದ ಸಿ.ಪ್ರಕಾಶ್, ಗಣೇಶ್, ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಶಿವಕುಮಾರ್, ಬೇವಿನಹಳ್ಳಿ ಸತೀಶ್, ಮೂಗೂರು ಶಿವಮೂರ್ತಿ, ಯುವ ಘಟಕದ ಉಪಾಧ್ಯಕ್ಷ ನೀಲಸೋಗೆ ಮಹೇಶ್, ಸೋಮುದಾದಾ, ಸೋಸಲೆ ರಾಜೇಶ್, ರಾಜಣ್ಣ, ಬಾಳೆಎಲೆ ಕುಮಾರ್, ಪ್ರಸಾದ್, ಭರತ್, ಚೇತನ್ ಶೆಟ್ಟಿ, ಮುಖ್ಯಾಧಿಕಾರಿ ಹೆಚ್.ಆರ್. ಬಸವರಾಜು, ಇಂಜಿನಿಯರ್ ಸಿದ್ದಯ್ಯ, ಗುತ್ತಿಗೆದಾರ ಶ್ರೀನಿವಾಸರೆಡ್ಡಿ, ಕಂದಾಯಾಧಿಕಾರಿ ಪುಟ್ಟಸ್ವಾಮಿ ಸೇರಿದಂತೆ ಮತ್ತಿತರರಿದ್ದರು.

1.5 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಚುಂಚನಕಟ್ಟೆ, ಅ.14– ಸಾಲಿಗ್ರಾಮ ತಾಲೂಕಿನ ಸಾಲೇಕೊಪ್ಪಲು ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆಯಿಂದ 1.50 ಕೋಟಿ ವೆಚ್ಚದಲ್ಲಿ ಗ್ರಾಮ ಪರಿಮಿತಿಯಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಸಾ.ರಾ.ಮಹೇಶ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಡಿಮೆ ಅಂತರದಲ್ಲಿ ಗೆದ್ದ ಮೇಲೆ ಅಭಿವೃದ್ಧಿ ಪರ ಕೆಲಸ ಮಾಡಿದವರಿಗೆ ಇಲ್ಲಿ ಮನ್ನಣೆ ಸಿಗುವುದಿಲ್ಲ ಎಂದು ರಾಜಕೀಯ ಬಿಡುವ ನಿರ್ಧಾರ ಮಾಡಿದ್ದೆ. ಆದರೆ ನಮ್ಮ ನಾಯಕರಾದ ಹೆಚ್.ಡಿ. ಕುಮಾರಸ್ವಾಮಿ ಅವರ ಮಾತಿಗೆ ಬೆಲೆಕೊಟ್ಟು ರಾಜಕೀಯ ಕ್ಷೇತ್ರದಲ್ಲಿ ಇದ್ದೇನೆ ಎಂದರು. ನಾನು ಶಾಸಕನಾಗಿ 3 ಬಾರಿ ಕೆಲಸ ಮಾಡಿದ ಸಂದರ್ಭ ನಮ್ಮ ಪಕ್ಷ ಕೆಲವು ತಿಂಗಳು ಮಾತ್ರ ಅಧಿಕಾರದಲ್ಲಿ ಇತ್ತು. 5 ವರ್ಷ ಇದ್ದಿದ್ದರೆ ಕ್ಷೇತ್ರವನ್ನು ಅಭಿವೃದ್ಧಿಯಿಂದ ಬೆಳಗಿಸುತ್ತಿದ್ದೆ. 14 ವರ್ಷ ಕ್ಷೇತ್ರದ ಶಾಸಕನಾಗಿಯೇ ಸಾವಿರಾರು ಕೋಟಿ ಅನುದಾನ ತಂದು ಕೆಲಸ ಮಾಡಿದ್ದೇನೆ. ಎಲ್ಲರೂ ಒಮ್ಮೆ ಯೋಚನೆ ಮಾಡಿ ಈ ಕ್ಷೇತ್ರಕ್ಕೆ ನನ್ನ ಕೊಡುಗೆ ಏನು ಎಂಬುದನ್ನು ಅರಿತು ಬೆಂಬಲಿಸಿ ಎಂದು ತಿಳಿಸಿದರು.

ಈ ಸಂದರ್ಭ ಹಳಿಯೂರು ಗ್ರಾಪಂ ಸದಸ್ಯೆ ರೇಣುಕಾ, ಯುವ ಕಾಂಗ್ರೆಸ್ ಮುಖಂಡರಾದ ಎಸ್.ಕೆ.ಚೇತನ್ ಸಾಗರ್, ಕಿರಣ್, ಅರುಣ, ಅನಿಲ್ ಸೇರಿದಂತೆ ಮತ್ತಿತರರು ಕಾಂಗ್ರೆಸ್ ತೊರೆದು ಜೆಡಿಎಸ್ ಸೇರ್ಪಡೆಯಾದರು.

ಜಿಲ್ಲಾ ಯುವ ಜೆಡಿಎಸ್ ಮುಖಂಡ ಮಧುಚಂದ್ರ, ಹಳಿಯೂರು ಗ್ರಾಪಂ ಅಧ್ಯಕ್ಷ ಎಚ್.ಆರ್.ದಿನೇಶ್, ಉಪಾಧ್ಯಕ್ಷೆ ಹೇಮಲತಾ, ಮಾಜಿ ಉಪಾಧ್ಯಕ್ಷ ಕುಮಾರಸ್ವಾಮಿ, ಹೊಸೂರು ಪಿಎಸಿಎಸ್ ಅಧ್ಯಕ್ಷ ಎಸ್.ಎಸ್.ಶಿವ ಸ್ವಾಮಿ, ನಿರ್ದೇಶಕರಾದ ಹೆಚ್.ಆರ್. ಮಹೇಶ್, ವಿವೇಕ್, ಮುಖಂಡರಾದ ಭದ್ರೇಗೌಡ, ಗೋಪಾಲ್, ಕುಮಾರ್, ಪತ್ರಾಪ್, ರಾಜೇಂದ್ರ, ದೇವೇಂದ್ರ, ಮೂರ್ತಿ, ಕೀರ್ತಿ, ಜಯಕೀರ್ತಿ, ಸತೀಶ, ಶಿವಣ್ಣ, ಎಲ್‌ಐಸಿ ರಮೇಶ್, ರಾಘು, ನಿಂಗಣ್ಣ, ರಾಘವೇಂದ್ರ, ಎಚ್.ಕೆ.ಕೀರ್ತಿ, ಎಚ್‌ಎಸ್ ಜಗದೀಶ್, ತಹಸೀಲ್ದಾರ್ ಎದು ಗಿರೀಶ್, ಎಇಇ ವಿಜಯಕುಮಾರ್, ಎಇ ಶಿವಪ್ಪ, ಆರ್.ಐ.ಚಿದಾನಂದ್, ಪಿಡಿಓ ಚಿದಾನಂದ್ ಮತ್ತಿತರರಿದ್ದರು.

ಅಪ್ಪು ನಮನ ಮತ್ತು ಜಲಪಾತೋತ್ಸವ

ಈ ತಿಂಗಳ 29ರಂದು ಕೆ.ಆರ್. ನಗರದಲ್ಲಿ ತಾಲೂಕಿನ ಮೊಮ್ಮಗ ಪುನೀತ್ ರಾಜ್ ಕುಮಾರ್ ಅವರ ನೆನಪಿಗಾಗಿ ಅಪ್ಪು ನಮನ ಮತ್ತು 30ರಂದು ಚುಂಚನಕಟ್ಟೆಯಲ್ಲಿ ಜಲಪಾತೋತ್ಸವವನ್ನು ಆಯೋಜಿಸಿದ್ದು, ಇವೆರಡು ಕಾರ್ಯಕ್ರಮಗಳಿಗೆ ಎರಡೂ ತಾಲೂಕಿನ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ದೈವ ಸ್ಮರಣೆಯಿಂದ ಸಂಕಷ್ಟ ದೂರ




ಕಂಪಲಾಪುರ, ಅ.14– ನಿತ್ಯ ದೇವರ ಸ್ಮರಣೆ ಮಾಡುವುದರಿಂದ ಸಂಕಷ್ಟ ದೂರವಾಗುತ್ತವೆ ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಹಾಗೂ ಪ್ರಗತಿಬಂಧು ಸ್ವಸಹಾಯ ಸಂಘಗಳ ಸಹಯೋಗದೊಂದಿಗೆ ಶುಕ್ರವಾರ ಇಲ್ಲಿನ ಎಸ್‌ಎಂಎಸ್ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಸಾಮೂಹಿಕ ಸತ್ಯನಾರಾಯಣ ಪೂಜಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಜನರ ಸರ್ವಾಂಗೀಣ ಅಭಿವೃದ್ಧಿಗೆ ಡಾ.ಡಿ.ವೀರೇಂದ್ರ ಹೆಗ್ಗಡೆಯವರು ಹುಟ್ಟು ಹಾಕಿದ ಈ ಸಂಸ್ಥೆ ಬಡವರ ಪಾಲಿಗೆ ವರದಾನವಾಗಿದೆ. ಮಹಿಳೆಯರ ಸಬಲೀಕರಣಕ್ಕೆ ಉತ್ತೇಜನ ನೀಡುತ್ತಿರುವ ಈ ಸಂಸ್ಥೆ ಕಾರ್ಯ ವೈಖರಿ ನಿಜಕ್ಕೂ ಶ್ಲಾಘನೀಯ ಎಂದರು.

ಕೊಡಗು ಜಿಲ್ಲೆ ಬಿಸಿ ಟ್ರಸ್ಟ್ ನಿರ್ದೇಶಕಿ ಲೀಲಾವತಿ ಮಾತನಾಡಿದರು. ತಾಪಂ ಇಓ ಸಿ.ಆರ್.ಕೃಷ್ಣಕುಮಾರ್ ಮಾತನಾಡಿ, ಸಣ್ಣ, ಅತಿಸಣ್ಣ ರೈತರು, ಬಡತನ ರೇಖೆಗಿಂತ ಕೆಳಗಿರುವವರನ್ನು ಮುಖ್ಯ ವಾಹಿನಿಗೆ ತರುವ ಉದ್ದೇಶದಿಂದ ಗ್ರಾಮಾಭಿವೃದ್ಧಿ ಯೋಜನೆ ಅಸ್ತಿತ್ವಕ್ಕೆ ಬಂದಿದ್ದು, ಸರ್ಕಾರಗಳು ಮಾಡುವ ಕೆಲಸಗಳನ್ನು ಈ ಸಂಸ್ಥೆ ಮಾಡುತ್ತಿದೆ. ನಾವು ಮೂಢನಂಬಿಕೆಯಿಂದ ಹೊರ ಬರಬೇಕು. ಮಹಿಳೆಯರ ಸಬಲೀಕರಣಕ್ಕೆ ಪ್ರೋತ್ಸಾಹ ನೀಡುತ್ತಿರುವ ಏಕೈಕ ಸಂಸ್ಥೆ ಇದಾಗಿದ್ದು, ನಮ್ಮ ಆಚಾರ ವಿಚಾರಗಳನ್ನು ತಲುಪಿಸಲು ಇಂತಹ ಧಾರ್ಮಿಕ ಕಾರ್ಯಕ್ರಮಗಳು ಪೂರಕ ಎಂದರು. ಈ ವೇಳೆ ತಾಲೂಕು ಯೋಜನಾಧಿಕಾರಿ ಸುರೇಶ್ ಶೆಟ್ಟಿ, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಉಪಾಧ್ಯಕ್ಷ ಕೆ.ಕುಮಾರ್, ಡೇರಿ ಅಧ್ಯಕ್ಷ ಕೃಷ್ಣೇಗೌಡ, ಕೆ.ಎಂ.ಲಕ್ಷ್ಮಣ್, ಪುರಸಭಾ ಸದಸ್ಯೆ ಮಂಜುಳಾ, ಯ.ಸ್ವಾಮಿಗೌಡ, ನಾಗೇಗೌಡ ಗ್ರಾಪಂ ಅಧ್ಯಕ್ಷೆ ಮಮತಾ, ಮಾಜಿ ಅಧ್ಯಕ್ಷೆ ರಾಣಿ, ಗಿರೀಶ್, ಸದಸ್ಯೆ ಕವಿತ, ಮಹದೇವಣ್ಣ, ರಾಜಣ್ಣ, ಪೂಜಾ ಸಮಿತಿ ಅಧ್ಯಕ್ಷ ಕೆ.ಎನ್.ಜಯಣ್ಣ, ಉಪಾಧ್ಯಕ್ಷೆ ಅನುಪಮ, ಕಾರ್ಯದರ್ಶಿ ರವಿಕಲಾಶೆಟ್ಟಿ, ಸುಧಾಕರ್, ಕೋಶಾಧಿಕಾರಿ ಮೋಹನ್ ಸೇರಿದಂತೆ ಸ್ವಸಹಾಯ ಸಂಘದ ಸದಸ್ಯರು, ಸೇವಾಪ್ರತಿನಿಧಿಗಳು ಹಾಜರಿದ್ದರು.

ಹೊಸಹಳ್ಳಿ ಹಾಡಿಯಲ್ಲಿ ಆದಿವಾಸಿ ಕರಿಯಪ್ಪನ ಅಂತ್ಯಕ್ರಿಯೆ

ಅಧಿಕಾರಿಗಳ ದೌರ್ಜನ್ಯ ಮಿತಿಮೀರಿದೆ: ಎಂಎಲ್‌ಸಿ ಹೆಚ್.ವಿಶ್ವನಾಥ್ ಆಕ್ರೋಶ



ಹೆಚ್.ಡಿ.ಕೋಟೆ, ಅ.14– ಅರಣ್ಯ ಇಲಾಖೆ ಸಿಬ್ಬಂದಿ ವಶದಲ್ಲಿದ್ದಾಗ ಸಾವನ್ನಪ್ಪಿದ ತಾಲೂಕಿನ ಹೊಸಹಳ್ಳಿ ಹಾಡಿ ನಿವಾಸಿ, ಜೇನು ಕುರುಬ ಸಮುದಾಯದ ಕರಿಯಪ್ಪ ಅವರ ಅಂತ್ಯಕ್ರಿಯೆ ಹಾಡಿಯ ಅವರ ಜಮೀನಿನಲ್ಲಿ ಶುಕ್ರವಾರ ಮಧ್ಯಾಹ್ನ ನೆರವೇರಿತು.

ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ, ತಾಪಂ ಮಾಜಿ ಸದಸ್ಯ ಬಿ.ಜೆ.ಮಹೇಂದ್ರ, ಸಮಾಜ ಸೇವಕ ಕೃಷ್ಣಸ್ವಾಮಿ, ಜೇನು ಕುರುಬ ಅಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಜೆ.ಟಿ. ರಾಜಪ್ಪ ಕಾರ್ಯದರ್ಶಿ ಚಂದ್ರ ಡಿಎಸ್‌ಎಸ್ ಕಾರ್ಯಕರ್ತ ಕಿರಂದೂರು ಸ್ವಾಮಿ, ಜೇನು ಕುರುಬ ಮುಖಂಡರಾದ ಚಿಕ್ಕಣ್ಣ, ಚಿನ್ನಪ್ಪ, ಶೇಖರ, ರಾಜಪ್ಪ, ಗ್ರಾಪಂ ಸದಸ್ಯ ಅಯ್ಯಪ್ಪ, ಭಾಸ್ಕರ ಇನ್ನು ಮುಂತಾದವರು ಕರಿಯಪ್ಪ ಅವರ ಅಂತಿಮ ದರ್ಶನ ಪಡೆದರು.

ಈ ವೇಳೆ ಎ.ಹೆಚ್.ವಿಶ್ವನಾಥ್ ಅವರು ಕರಿಯಪ್ಪನವರ ತಾಯಿ ಮಾಚಮ್ಮ, ಮಕ್ಕಳಾದ ಸವಿತಾ, ಕುಮಾರಿ, ಸತೀಶ, ಕುಮಾರ ಹಾಗೂ ಕುಟುಂಬದವರಿಗೆ ಸಾಂತ್ವನ ಹೇಳಿ ವೈಯಕ್ತಿಕ ಧನಸಹಾಯ ಮಾಡಿದರು. ಅಲ್ಲದೇ ಸರ್ಕಾರದಿಂದ ಬರುವ ಸವಲತ್ತುಗಳನ್ನು ಕೊಡಿಸುವ ಭರವಸೆ ನೀಡಿದ ಅವರು ಮುಂಬರುವ ದಿನಗಳಲ್ಲಿ ಇಂತಹ ಘಟನೆಗಳು ನಡೆಯದಂತೆ ಕ್ರಮ ವಹಿಸಲು ಸರ್ಕಾರಕ್ಕೆ ಮನವಿ ಮಾಡಲಾಗುವುದು ಎಂದರು.

ವಿಶ್ವನಾಥ್ ಆಕ್ರೋಶ: ಕಾನೂನಿನ ಹೆಸರಲ್ಲಿ ಜನರ ಪ್ರಾಣ ತೆಗೆಯುವುದು ಅಪರಾಧವಾಗಿದ್ದು, ಅಧಿಕಾರಿಗಳ ದೌರ್ಜನ್ಯ ಮಿತಿಮೀರಿದೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆಕ್ರೋಶ ವ್ಯಕ್ತಪಡಿಸಿದರು.

ಹೊಸಹಳ್ಳಿ ಹಾಡಿಯಲ್ಲಿ ಕರಿಯಪ್ಪ ಅವರ ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಿ ಕುಟುಂಬದವರಿಗೆ ಸಾಂತ್ವನ ಹೇಳಿ ಮಾತನಾಡಿದ ಅವರು, ಕಾನೂನು ಬಾಹಿರ ಚಟುವಟಿಕೆ ತಡೆಗೆ ಕಾನೂನಿನಲ್ಲಿ ನೀತಿ ನಿಯಮಗಳಿವೆ. ಪ್ರಾಣ ತೆಗೆಯುವ ಕೆಲಸವನ್ನು ಯಾರೂ ಮಾಡಬಾರದು. ತಲ ತಲಾಂತರದಿಂದ ಕಾಡನ್ನು ಉಳಿಸಿ, ಬೆಳೆಸಿಕೊಂಡು ಬಂದಿರುವ ಆದಿವಾಸಿಗಳ ಜೀವ ತೆಗೆಯಲು ಇವರ್‍ಯಾರು ಎಂದು ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

ಆದಿವಾಸಿಗಳಿಗೆ ಮಾರ್ಗದರ್ಶನ, ಸರ್ಕಾರದ ಸೌಲಭ್ಯಗಳ ಬಗ್ಗೆ ತಿಳಿಸುವ ಕೆಲಸ ಆಗಬೇಕಿದೆ. ಆದಿವಾಸಿಗಳ ಸಮಸ್ಯೆಗಳ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಲಾಗುವುದು ಎಂದರು.

ಒಬ್ಬ ಆದಿವಾಸಿ ಅಧಿಕಾರಿಗಳ ದೌರ್ಜನ್ಯದಿಂದ ಸಾವನ್ನಪ್ಪಿದ್ದಾನೆ ಎಂದರೆ ಅದು ತಲೆ ತಗ್ಗಿಸುವ ವಿಚಾರ. ಜನರಿಗೆ ಜೀವನ ನೀಡಲು ಸರ್ಕಾರ ಇದೆಯೇ ಹೊರತು ಜೀವ ತೆಗೆಯಲು ಅಲ್ಲ. ಇಂತಹ ಅಮಾನವೀಯ ಕೃತ್ಯ ನಡೆಯಬಾರದು ಎಂದರು.

ಘಟನಾ ಸ್ಥಳಕ್ಕೆ ಡಿಸಿ ಡಾ.ಬಗಾದಿ ಗೌತಮ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಆಗಮಿಸಬೇಕು ಎಂದು ಆಗ್ರಹಿಸಿದ ಅವರು ಕೇವಲ ದಸರಾ ಮಾಡಲು ಸಚಿವರಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಇಂದು ಜಿಲ್ಲಾಧಿಕಾರಿಗಳ ನಡೆ ಹಳ್ಳಿ ಕಡೆ

ಮಲ್ಲುಂಡಿ, ಅ.14– ನಂಜನಗೂಡು ತಾಲೂಕಿನ ಬಂಕಹಳ್ಳಿ ಗ್ರಾಮದ ವೆಂಕಟ ಗಿರಿ ಕಾಲೋನಿ ಗಿರಿಜನ ವಸತಿ ಶಾಲೆಯ ಆವರಣ ದಲ್ಲಿ ಅ.15 ರಂದು ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮ ದಲ್ಲಿ ಶಾಸಕ ಬಿ.ಹರ್ಷವರ್ಧನ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸುತ್ತಿದ್ದು, ರೈತರು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ತಹಸೀಲ್ದಾರ್ ಶಿವಮೂರ್ತಿ ತಿಳಿಸಿದ್ದಾರೆ.

ನಂ.ಗೂಡು ಪಟ್ಟಣ ಠಾಣೆಗೆ 3 ಗ್ರಾಮ, 42 ಬಡಾವಣೆ

ನಂಜನಗೂಡು, ಅ.14– ನಂಜನಗೂಡು ಪಟ್ಟಣ ಠಾಣೆ ಆರಕ್ಷಕ ಉಪನಿರೀಕ್ಷಕ ಠಾಣೆ, ವೃತ್ತ ನಿರೀಕ್ಷಕರ ಠಾಣೆಯಾಗಿ ಮೇಲ್ದರ್ಜೆಗೇರಿದ್ದು, ಗ್ರಾಮಾಂತರ ಠಾಣೆ ವ್ಯಾಪ್ತಿಯ 3 ಗ್ರಾಮ, 42 ಬಡಾವಣೆಗಳು ಹೆಚ್ಚುವರಿಯಾಗಿ ಪಟ್ಟಣ ಠಾಣೆ ಸರಹದ್ದಿಗೆ ಸೇರ್ಪಡೆಗೊಂಡಿವೆ.

ನಂಜನಗೂಡು ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿದ್ದ ಗ್ರಾಮಗಳಾದ ಚಾಮಲಪುರದಹುಂಡಿ, ಕುರಿಹುಂಡಿ, ಕಲ್ಲಹಳ್ಳಿ ಹಾಗೂ ನಗರದ ಬಡಾವಣೆಗಳಾದ ವಿದ್ಯಾನಗರ, ಬಾಲಾಜಿನಗರ, ದೇವಿನಗರ, ಸೂರ್ಯೋದಯ ನಗರ, ಪ್ರಗತಿ ನಗರ, ಶ್ರೀಕಂಠೇಶ್ವರ ನಗರ, ಕನ್ನಿಕಾ ಪರಮೇಶ್ವರಿ, ಚೆನ್ನಪ್ಪ, ಮಹದೇವಪ್ಪ, ರಾಮಸ್ವಾಮಿ, ಗೌತಮ್, ರಾಮಸ್ವಾಮಿ, ಕೃಷ್ಣಪ್ಪ ವೈ.ಕೆ.ಸ್ವಾಮಿ ಲೇಔಟ್‌ಗಳು, ವಿ.ಎ.ಎಕ್ಸ್‌ಟೆನ್ಷನ್, ಅಂಡುವಿನಹಳ್ಳಿ, ನಾಗರಾಜಯ್ಯ, ಮಹದೇವು, ಕೃಷ್ಣಮೂರ್ತಿ, ರಾಜಣ್ಣ, ಏಕಾಂಬರಂ, ಮಾಯಣ್ಣ, ಶ್ರೀಕಾಂತ್, ಗೋವಿಂದರಾಜು ಎಕ್ಸ್‌ಟೆನ್ಷನ್‌ಗಳು, ಜೂಬಿಲಿಯಂಟ್, ಪಿ.ಕೆ. ಬ್ರೇಕ್ಸ್ ಇಂಡಿಯಾ, ಮೂಡಾ ಲೇಔಟ್‌ಗಳು, ಎಕ್ಸ್‌ಟೆನ್ಷನ್, ಥಾಮಸ್ ಲೇಔಟ್, ವೆಂಕಟಾದ್ರಿ ನಗರ, ಕಲ್ಲಹಳ್ಳಿ ಕೈಗಾರಿಕಾ ಪ್ರದೇಶ, ಮುದ್ದುಮಾದಪ್ಪ, ಪಿಎನ್‌ಟಿ, ಎನ್‌ಜಿಓ ಲೇಔಟ್, ನಂಜುಂಡೇಶ್ವರ, ಭಾಗ್ಯಲಕ್ಷ್ಮಿ, ನೆಸ್ಲೆ, ಸದಾಶಿವ, ಶಿವಮೂರ್ತಿ, ಕೃಷ್ಣರಾವ್, ನಂಜುಂಡಸ್ವಾಮಿ, ಸರೋಜಮ್ಮ, ಮಹದೇವಸ್ವಾಮಿ ಎಕ್ಸ್‌ಟೆನ್ಷನ್‌ಗಳು ನಂಜನಗೂಡು ಪಟ್ಟಣ ಠಾಣೆ ಸರಹದ್ದಿಗೆ ಸೇರ್ಪಡೆಯಾಗಿದ್ದು, ಇಲ್ಲಿನ ನಿವಾಸಿಗಳು ಅಹವಾಲು, ಮೊಕದ್ದಮೆ ಇದ್ದಲ್ಲಿ ಪಟ್ಟಣ ಪೊಲೀಸ್ ಠಾಣೆಯನ್ನೇ ಸಂಪರ್ಕಿಸುವಂತೆ ಪಟ್ಟಣ ಠಾಣೆ ಎಸ್‌ಐ ವಿಜಯರಾಜ್ ಕೋರಿದ್ದಾರೆ.

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಾಂತಾರ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.15ಕ್ಕೆ, ರಾ.7.15ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ರೋರ್ಸ್ಚಾಚ್ (ಮ): ಬೆ.10.30ಕ್ಕೆ, ರಾ.10.05ಕ್ಕೆ, ಕಾಂತಾರ (ಕ): ಮ.1.20ಕ್ಕೆ, ಗುಡ್‌ಬೈ (ಹಿಂ): ಸಂ.4.10ಕ್ಕೆ, ಪೊನ್ನಿಯನ್ ಸೆಲ್ವನ್–1(ತ): ಸಂ.6.55ಕ್ಕೆ,
ಸ್ಕ್ರೀನ್ 3	ಡಾಕ್ಟರ್ ಜಿ (ಹಿಂ): ಬೆ.11ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ತೋತಾಪುರಿ–1 (ಕ): ಮ.1.30ಕ್ಕೆ, ಪೊನ್ನಿಯನ್ ಸೆಲ್ವನ್ –1(ತ): ಸಂ.4.15ಕ್ಕೆ.
ಸ್ಕ್ರೀನ್ 4	ಕಾಂತಾರ (ಕ): ಬೆ.10.10ಕ್ಕೆ, ಮ.1.10ಕ್ಕೆ, ಸಂ.4.10ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಕಾಂತಾರ (ಕ): ಬೆ.9.15ಕ್ಕೆ, ಮ.12.30ಕ್ಕೆ, ಮ.3.35ಕ್ಕೆ, ಸಂ.6.40ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 2	ಕಾಂತಾರ (ಕ): ಬೆ.10.10ಕ್ಕೆ, ಮ.1.15ಕ್ಕೆ, ಸಂ.4.20ಕ್ಕೆ, ರಾ.7.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಡಾಕ್ಟರ್ ಜಿ (ಹಿಂ): ಬೆ.9ಕ್ಕೆ, ಕಾಂತಾರ (ಕ): ಬೆ.11.35ಕ್ಕೆ, ಮ.2.40ಕ್ಕೆ, ಸಂ.5.45ಕ್ಕೆ, ರಾ.8.50ಕ್ಕೆ.
ಸ್ಕ್ರೀನ್ 4	ಕಾಂತಾರ (ಕ): ಬೆ.9.45ಕ್ಕೆ, ರಾ.7ಕ್ಕೆ, ಗುರು ಶಿಷ್ಯರು (ಕ): ಮ.1ಕ್ಕೆ, ಡಾಕ್ಟರ್ ಜಿ (ಹಿಂ): ಸಂ.4.20ಕ್ಕೆ, ಪೊನ್ನಿಯನ್ ಸೆಲ್ವನ್ –1(ತ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಡಾಕ್ಟರ್ ಜಿ (ಹಿಂ): ಬೆ.10.30ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಗುರುಶಿಷ್ಯರು (ಕ): ಮ.1ಕ್ಕೆ, ಎಂಆರ್‌ಪಿ (ಕ): ಸಂ.4.10ಕ್ಕೆ.
ಸ್ಕ್ರೀನ್ 2	ನಾನ್ ಖದರ್ ನನ್ ಹುಡ್ಗಿ ಸೂಪರ್ (ಕ): ಬೆ.10ಕ್ಕೆ, ಕಾಂತಾರ (ಕ): ಮ.12.35ಕ್ಕೆ, ಮ.3.35ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.1.45ಕ್ಕೆ, ಸಂ.6ಕ್ಕೆ, ರಾ.9.05ಕ್ಕೆ.
ಸ್ಕ್ರೀನ್ 4	ಚಾಂಪಿಯನ್ (ಕ): ಬೆ.10.30ಕ್ಕೆ, ಶುಭಮಂಗಳ (ಕ): ಮ.1.40ಕ್ಕೆ, ಮೋದಿ ಜಿ ಕೀ ಬೇಟಿ (ಹಿಂ): ಸಂ.4.05ಕ್ಕೆ, ಗಾಡ್‌ಫಾದರ್ (ತೆ): ಸಂ.6.20ಕ್ಕೆ, ವರಾಲ್ (ಮ): ರಾ.9.25ಕ್ಕೆ.


ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.8.30ಕ್ಕೆ, ಬೆ.9.05ಕ್ಕೆ, ಬೆ.9.50ಕ್ಕೆ, ಮ.12.15ಕ್ಕೆ, ಮ.1ಕ್ಕೆ, ಮ.3.25ಕ್ಕೆ, ಸಂ.4.10ಕ್ಕೆ, ಸಂ.6.35ಕ್ಕೆ, ರಾ.7.20ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, ದಿ ಚೆಕ್‌ಮೇಟ್ (ಕ): ಬೆ.10.05ಕ್ಕೆ, ಗುರು ಶಿಷ್ಯರು (ಕ): ಮ.3.10ಕ್ಕೆ, ಪಿಎಸ್–1 (ಹಿಂ): ಮ.3.30ಕ್ಕೆ, ರಾ.10.30ಕ್ಕೆ, ಗುಡ್‌ಬೈ (ಹಿಂ): ಬೆ.10.10ಕ್ಕೆ, ಸಂ.4.35ಕ್ಕೆ, ಪೊನ್ನಿಯನ್ ಸೆಲ್ವನ್–1 (ತ): ಬೆ.8.35ಕ್ಕೆ, ಮ.12ಕ್ಕೆ, ರಾ.7ಕ್ಕೆ, ದಿ ಗೋಸ್ಟ್ (ತೆ): ರಾ.7.10ಕ್ಕೆ, ಗಾಡ್‌ಫಾದರ್ (ತೆ): ಬೆ.9.30ಕ್ಕೆ, ಮ.1.15ಕ್ಕೆ, ಮ.3.50ಕ್ಕೆ, ರಾ.10.10ಕ್ಕೆ, ವಿಕ್ರಮ್ ವೇದ (ಹಿಂ): ಬೆ.11.40ಕ್ಕೆ, ಸಂ.6.35ಕ್ಕೆ, ಒನ್ ಪೀಸ್ ಫಿಲಂ ರೆಡ್ (ಜ): ರಾ.7.40ಕ್ಕೆ, ಟಿಕೆಟ್ ಟು ಪ್ಯಾರಡೈಸ್ (ಇಂ): ಮ.12.50ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಕೋಬ್ರಾ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಕ್ರಂ ವೇದ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಗುರು ಶಿಷ್ಯರು (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಪುನ್ನಿಯಿನ್ ಸೆಲ್ವನ್ ಭಾಗ–1(ತ)	4 ಪ್ರದರ್ಶನಗಳು
ಸಂಗಂ	
ತೋತಾಪುರಿ (ಕ)	4 ಪ್ರದರ್ಶನಗಳು
ಲಿಡೋ	
ಎಂಆರ್‌ಪಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪುನ್ನಿಯಿನ್ ಸೆಲ್ವನ್ ಭಾಗ–1(ತ)	4 ಪ್ರದರ್ಶನಗಳು
ಪ್ರಭಾ	
ಚಾಂಪಿಯನ್ (ಕ)	4 ಪ್ರದರ್ಶನಗಳು

ತಿರುಮಕೂಡಲಿನಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ




ತಿ.ನರಸೀಪುರ, ಅ.14– ಸಮುದಾಯ ಸಂಘಟನೆ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿದ್ದು, ಪೋಷಕರು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವತ್ತ ಗಮನ ಹರಿಸಬೇಕು ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಸಲಹೆ ನೀಡಿದರು.

ಪುರಸಭೆ ವ್ಯಾಪ್ತಿಯ ತಿರುಮಕೂಡಲಿನ ಮಹರ್ಷಿ ವಾಲ್ಮೀಕಿ ವೃತ್ತದಲ್ಲಿ ರಾಜವೀರ ಮದಕರಿ ನಾಯಕ ಯುವ ಸೇನೆ ವತಿಯಿಂದ ಏರ್ಪಡಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಮಾನವೀಯತೆಯೇ ಧರ್ಮ ಎಂಬುದನ್ನು ಪ್ರತಿಪಾದಿಸಿದ ಮಹಾನ್ ದಾರ್ಶನಿಕ ಮಹರ್ಷಿ ವಾಲ್ಮೀಕಿ ಅವರ ಜೀವನ ಚರಿತ್ರೆಯನ್ನು ಪ್ರತಿಯೊಬ್ಬರೂ ತಿಳಿಯುವುದು ಅಗತ್ಯ ಎಂದರು. ಪುರಸಭಾಧ್ಯಕ್ಷ ಎಸ್.ಮದನ್‌ರಾಜ್ ಮಾತನಾಡಿದರು.

> ಮಹರ್ಷಿ ವಾಲ್ಮೀಕಿ ಪ್ರಪಂಚಕ್ಕೆ ರಾಮಾಯಣದಂತಹ ಮಹಾನ್ ಕಾವ್ಯ ನೀಡಿದ ಮಹಾನ್ ಪುರುಷ. ಸಮುದಾಯದ ಬಹುದೊಡ್ಡ ಆಸ್ತಿಯಾಗಿರುವ ಅವರ ವಿಚಾರಧಾರೆಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಉತ್ತಮ ದಾರಿಯಲ್ಲಿ ಸಾಗಬೇಕಿದೆ.
> – ಹೊನ್ನನಾಯ್ಕ, ತಾಲೂಕು ನಾಯಕ ಸಂಘದ ಮಾಜಿ ಅಧ್ಯಕ್ಷ.

ಕಾರ್ಯಕ್ರಮದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್, ಕರಿಯಪ್ಪ, ಅಣ್ಣಯ್ಯಸ್ವಾಮಿ, ಮಾಜಿ ಉಪಾಧ್ಯಕ್ಷ ಪುಟ್ಟು, ಪುರಸಭಾ ಸದಸ್ಯರಾದ ಸಿದ್ದು, ಚಿಕ್ಕ ಮಹದೇವ, ರಂಗುನಾಯಕ, ಕೆಎಸ್‌ಐಸಿ ಸಿದ್ದಪ್ಪ, ಮಹದೇವ ನಾಯ್ಕ, ಅಪರಾಧ ವಿಭಾಗದ ಎಸ್‌ಐ ಪಚ್ಚೇಗೌಡ, ಯಜಮಾನರಾದ ನಟರಾಜು, ಮಾದೇಶ್, ನಾಗಣ್ಣ, ಚಂದ್ರಶೇಖರ್, ಮದಕರಿ ನಾಯಕ ಯುವ ಸೇನೆ ಅಧ್ಯಕ್ಷ ಗಣೇಶ್, ಉಪಾಧ್ಯಕ್ಷ ನವೀನ, ಖಜಾಂಚಿ ಉಮೇಶ್, ಕಾರ್ಯದರ್ಶಿ ಪ್ರದೀಪ, ಯುವ ಮುಖಂಡ ವಾಸು, ಎಲೆಕ್ಟ್ರಿಕಲ್ ಬಸವಣ್ಣ ಹಾಗೂ ನಿರ್ದೇಶಕರು ಹಾಜರಿದ್ದರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಡಿ ಶಿವಪ್ಪಗೌಡರು

(ಟಿ.ಎ.ಪಿ.ಸಿ.ಎಂ.ಎಸ್. ಮಾಜಿ ನಿರ್ದೇಶಕರು, ಹುಣಸೂರು)
ಜನನ: 28.11.1937, ನಿಧನ: 06.10.2022

ಹರಿಕಥೆ ರಾತ್ರಿ 8 ಗಂಟೆಗೆ

ಇವರು ದಿನಾಂಕ: 06.10.2022 ಗುರುವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ; 16.10.2022 ಭಾನುವಾರ ಬೆಳಿಗ್ಗೆ 10.30ಕ್ಕೆ, ಕಿರಿಜಾಜಿ ಫಾರಂ, ಹುಣಸೂರು ತಾ॥ , ಮೈಸೂರು ಜಿಲ್ಲೆ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಲೇಟ್ ಡಿ.ಕರಿಯಪ್ಪಗೌಡರು, ಮಾಜಿ ಶಾಸಕರು, ಕಿರಿಜಾಜಿ ಫಾರಂ, ಹುಣಸೂರು ತಾಲ್ಲೂಕು ಇವರ ಕುಟುಂಬವರ್ಗದವರು